

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 9 ಭಾನುವಾರ 2025

ಸಂಪುಟ: 46 | ಸಂಚಿಕೆ: 201 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಆನ್‌ಲೈನ್ ವಂಚನೆಗೆ ಬಲಿಯಾಗುತ್ತಿರುವ ಹಿರಿಯ ಜೀವಗಳು

● ಕುತೂಹಲದಿಂದ ಮೊಬೈಲ್‌ನಲ್ಲಿ ಕಂಡ ಕಂಡ ಆಪ್‌ನಲ್ಲಿ ಹಣ ಹೂಡಿ ನಿತ್ಯವೂ ಮೋಸ ಹೋಗುತ್ತಿದ್ದಾರೆ ● ಮೂವರು ನಿವೃತ್ತರು, ಓರ್ವ ಸರ್ಕಾರಿ ಉದ್ಯೋಗಿಯ 4.41 ಕೋಟಿಗೂ ಅಧಿಕ ಹಣ ದೋಖಾ





ಮೈಸೂರು,ನ.8–ಮೂವರು ನಿವೃತ್ತರು ಹಾಗೂ ಸರ್ಕಾರಿ ಉದ್ಯೋಗಿಂಒಬ್ಬರು ಆನ್‌ಲೈನ್ ಟ್ರೇಡಿಂಗ್ ಮೂಲಕ ಅಧಿಕ ಲಾಭ ಗಳಿಸುವ ಆಸೆಯಿಂದ ಒಟ್ಟು 4 ಕೋಟಿಗೂ ಹೆಚ್ಚು ಹಣ ಕಳೆದುಕೊಂಡಿದ್ದು, ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

> ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸುವ ಟ್ರೇಡಿಂಗ್ ಜಾಹೀರಾತುಗಳನ್ನು ನಂಬಿ, ಜೀವನವಿಡೀ ಕಷ್ಟಪಟ್ಟು ಕೂಡಿಟ್ಟಿದ್ದ ಹಣವನ್ನೆಲ್ಲಾ ಖದೀಮರ ಖಾತೆಗೆ ವರ್ಗಾವಣೆ ಮಾಡಿ, ಮೋಸ ಹೋಗಿದ್ದಾರೆ. ಸೈಬರ್ ವಂಚನೆ ಬಗ್ಗೆ ನಿತ್ಯ ವರದಿಯಾಗುತ್ತಿದ್ದರೂ ಎಚ್ಚೆತ್ತುಕೊಳ್ಳದೆ ವಂಚಕರ ನಯವಾದ ಮಾತಿನ ಬಲೆಯಲ್ಲಿ ಸಿಲುಕಿ ಒಟ್ಟು 4.41 ಕೋಟಿ ನಷ್ಟ ಅನುಭವಿಸಿದ್ದಾರೆ.


ಪ್ರಕರಣ 1: ಕೆಆರ್‌ಎಸ್ ರಸ್ತೆಯಲ್ಲಿನ ಪ್ರತಿಷ್ಠಿತ ಬಡಾವಣೆಯೊಂದರ 70 ವರ್ಷದ ನಿವೃತ್ತರೊಬ್ಬರ ಮೊಬೈಲ್ ಸಂಖ್ಯೆಯನ್ನು ವಂಚಕರ ವಾಟ್ಸಾಪ್ ಗ್ರೂಪ್‌ಗೆ ಸೇರಿಸಿ, ಆನ್‌ಲೈನ್ ಟ್ರೇಡಿಂಗ್ ನಡೆಸಲು ಪ್ರೇರೇಪಿಸಲಾಗಿದೆ. ನಿತ್ಯ ವಾಟ್ಸಾಪ್ ಗ್ರೂಪ್‌ನಲ್ಲಿ ಹಂಚಿಕೆಯಾಗುತ್ತಿದ್ದ ಟ್ರೇಡಿಂಗ್ ಸಂಬಂಧಿತ ಸಂದೇಶಗಳನ್ನು ನಂಬಿ, ಈ ಹಿರಿಯ ಜೀವ ಹಂತ ಹಂತವಾಗಿ ಒಟ್ಟು 1,87,85,418 ರೂ. ಹೂಡಿಕೆ ಮಾಡಿದ್ದಾರೆ. ನಂತರದಲ್ಲಿ ಯಾವುದೇ ಲಾಭವೂ ಬರದಿದ್ದಾಗ ಹೂಡಿಕೆ ಮಾಡಿದ್ದ ಹಣ ವಿತ್‌ಡ್ರಾ ಮಾಡಲು ಮುಂದಾದಾಗ ಮೋಸ ಹೋಗಿರುವುದು ಗೊತ್ತಾಗಿದೆ.

ಪ್ರಕರಣ 2: ರಾಮಕೃಷ್ಣನಗರದ 61 ವರ್ಷದ ನಿವೃತ್ತರೊಬ್ಬರು ಫೇಸ್‌ಬುಕ್‌ನಲ್ಲಿ ನೋಡಿದ ಬ್ಲಾಕ್ ಟ್ರೇಡಿಂಗ್ ಜಾಹೀರಾತಿನ ಲಿಂಕ್ ಮೇಲೆ ಕ್ಲಿಕ್ ಮಾಡಿ ಎಡವಟ್ಟು ಮಾಡಿಕೊಂಡಿದ್ದಾರೆ. ಆ ಲಿಂಕ್ ಮೂಲಕ ಒಂದು ಆಪ್ ಡೌನ್ಲೋಡ್ ಮಾಡಿಕೊಂಡು, ಅದರಲ್ಲಿ ವೈಯಕ್ತಿಕ ಮಾಹಿತಿ ನಮೂದಿಸಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ನಂತರ ಇವರನ್ನು ಯಶಸ್ವಿನಿ ಜಿಂದಾಲ್ ಹೆಸರಿನಲ್ಲಿ ಸಂಪರ್ಕಿಸಿ, ಬ್ಲಾಕ್ ಟ್ರೇಡ್ ಮತ್ತು ▶ 6ನೇ ಪುಟಕ್ಕೆ

ಒಳಪುಟಗಳಲ್ಲಿ....









ಮೈಸೂರಲ್ಲಿ ಬಗೆ ಬಗೆಯ ಬಾಳೆಹಣ್ಣು ಮೇಳಕ್ಕೆ ಚಾಲನೆ

ಮೈಸೂರು,ನ.8(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಶನಿವಾರ ಬಾಳೆಹಣ್ಣುಗಳ ಪ್ರದರ್ಶನ ಮತ್ತು ಮಾರಾಟ 'ಬಾಳೆ ಮೇಳ' ಆರಂಭವಾಯಿತು. ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಹಜ ಸಮೃದ್ಧಿ ಆರ್ಗ್ಯಾನಿಕ್ ಫಾರ್ಮರ್ಸ್ ಗ್ರೂಪ್ ವತಿಯಿಂದ ಏರ್ಪಡಿಸಿರುವ ಮೇಳಕ್ಕೆ ಇಂದು ಬೆಳಗ್ಗೆ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗು ರಫ್ತು ನಿಗಮ ನಿಯಮಿತ(ಕೆಪೆಕ್) ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ನಾನಾ ತಳಿಯ ಬಾಳೆಹಣ್ಣನ್ನು ಅನಾವರಣ ಮಾಡಿ, ಸಡ್ರಸ ಬಾಳೆಹಣ್ಣಿನ ಗೊನೆ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕರ್ನಾಟಕ ಸರ್ಕಾರದ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತವು ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯ ಜನರಿಗೆ ಕೇವಲ 3–4 ತಳಿಯ ಬಾಳೆಹಣ್ಣುಗಳ ಬಗ್ಗೆ ಮಾಹಿತಿ ಇರುತ್ತದೆ. ಆದರೆ ಬಾಳೆ ಮೇಳದಲ್ಲಿ ನೂರಾರು ಬಗೆಯ ಬಾಳೆ ಹಣ್ಣುಗಳಿರುವುದನ್ನು ನೋಡಿ ಜನರಿಗೆ ಆಶ್ಚರ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ತಳಿಯ ಬಾಳೆಹಣ್ಣುಗಳ ಸಂರಕ್ಷಣೆ ಮಾಡಿ, ಅವುಗಳನ್ನು ಹೆಚ್ಚಾಗಿ ಬೆಳೆಯುವ ಮೂಲಕ ಗ್ರಾಹಕರಿಗೆ ತಲುಪಿಸುವ ಕೆಲಸ ಆಗಬೇಕು ಎಂದರು.

ರೈತರು ಬೆಳೆದ ಬಾಳೆಹಣ್ಣು ಸೇರಿದಂತೆ ಯಾವುದೇ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡಲು ಉತ್ತಮವಾದ ಪ್ಯಾಕಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಈಗಾಗಲೇ ಪ್ಯಾಕಿಂಗ್ ಮಾಡುವುದಕ್ಕಾಗಿ ಬಯೋಪ್ಲಾಸ್ಟಿಕ್ ವ್ಯವಸ್ಥೆ ಬಂದಿದೆ. ಹೀಗೆ ಮಾಡಿದರೆ ಯಾವುದೇ ಪದಾರ್ಥ 15 ದಿನಗಳವರೆಗೂ ತಾಜಾತನದಿಂದ ಕೂಡಿರುತ್ತದೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿವಿಧ ಬಗೆಯ ಬಾಳೆಹಣ್ಣನ್ನು ವಿದೇಶಕ್ಕೆ ರಫ್ತು ಮಾಡುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಬಿಜೆಪಿ ಮುಖಂಡ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ನರರೋಗ ತಜ್ಞ ಡಾ.ಸುಶ್ರುತ್‌ಗೌಡ ಮಾತನಾಡಿ, ಬಾಳೆಹಣ್ಣಿನಲ್ಲಿ ಪೊಟ್ಯಾಷಿಯಂ ಅಂಶವಿದೆ. ಇದನ್ನು ಸೇವಿಸುವುದರಿಂದ ಬಿಪಿ, ಹೃದಯ ಸಮಸ್ಯೆ ಸೇರಿದಂತೆ ವಿವಿಧ ಬಗೆಯ ಅನಾರೋಗ್ಯ ಸಮಸ್ಯೆಯಿಂದ ಅಂತರ ಕಾಪಾಡಿಕೊಳ್ಳಬಹುದು. ಬಾಳೆ ಮೇಳದಲ್ಲಿ ಹಲವು ತಳಿಯ ಬಾಳೆಹಣ್ಣು ಗ್ರಾಹಕರನ್ನು ಸೆಳೆಯುತ್ತಿವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಸುತ್ತೂರಿನ ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥ ಡಾ.ಜ್ಞಾನೇಶ್, ಆರ್ಗ್ಯಾನಿಕ್ ಕಿಶನ್ ಸಿಇಒ ಸುಮತಿ, ಬಾಳೆ ಸಂರಕ್ಷಕರಾದ ಬಿ.ಪಿ.ರವಿಶಂಕರ್, ಮೊಳೆಯೂರು ಹಾಡಿಯ ಜಯ, ಕೇರಳದ ಕೀ ಸ್ಟೋನ್ ಫೌಂಡೇಷನ್‌ನ ಮಹಮ್ಮದ್ ಶಫಿ, ಸಹಜ ಸಮೃದ್ಧ ಸಂಸ್ಥೆಯ ಕೃಷ್ಣ ಪ್ರಸಾದ್, ಕೀರ್ತಿ ಕುಮಾರ್, ಹನುಮಂತು, ವಿನೋದ್‌ಕುಮಾರ್, ಪರಶುರಾಮಪ್ಪ, ಮಂಜು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಆರಂಭವಾದ ಎರಡು ದಿನಗಳ ಬಾಳೆ ಮೇಳಕ್ಕೆ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ(ಕೆಪೆಕ್) ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ಚಾಲನೆ ನೀಡಿದರು.

ಮೇಳದಲ್ಲಿವೆ ನಾನಾ ಬಗೆಯ ಬಾಳೆ

ಮೇಳದಲ್ಲಿ ಪಚ್ಚ ಬಾಳೆ, ನೇಂದ್ರ, ಏಲಕ್ಕಿ ಬಾಳೆ, ನಂಜನಗೂಡು ರಸ ಬಾಳೆ, ಕಲ್ಲು ಬಾಳೆ, ಬೂದು ಬಾಳೆ, ಮದರಂಗಿ, ಚಂದ್ರ ಬಾಳೆ, ಸುಗಂಧಿ, ಸಕ್ಕರೆ ಬಾಳೆ, ಹುಳಿ ಬಾಳೆ, ಚುಕ್ಕೆ ಬಾಳೆ, ಕಮಲಾಪುರದ ಕೆಂಪು ಬಾಳೆ, ಎಂಗಾಂಬಿ, ನಮಸ್ತೆ, ಬ್ಲೂಜಾವಾ, ಮೈಸೂರು ಬಾಳೆ, ಕರಿಬಾಳೆ, ಉದಗಂ, ಕಾವೇರಿ ಬಾಳೆ, ಹೂ ಬಾಳೆ, ಕರ್ಪೂರವಲ್ಲಿ ಸೇರಿದಂತೆ ಹಲವು ತಳಿಗಳ ಬಾಳೆಹಣ್ಣು ಲಭ್ಯವಿದೆ. ಅಲ್ಲದೆ, ಬಾಳೆ ಕಂದು, ಗಿಡ, ಬಾಳೆಹಣ್ಣಿನಿಂದ ತಯಾರಿಸಿದ ಉತ್ಪನ್ನಗಳು, ತಿನಿಸು, ಪಾನೀಯ, ಅಕ್ಕಿ, ದ್ವಿದಳ ದಾನ್ಯ, ಹೂವಿನ ಗಿಡಗಳ ಬೀಜ ಸೇರಿದಂತೆ ಇನ್ನಿತರ ವಸ್ತುಗಳನ್ನು ಮಾರಾಟಕ್ಕಿಡಲಾಗಿದೆ.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಸಾವಿರಾರು ಅಕ್ರಮ ಖಾತೆ ಆರೋಪ

ಸೂಕ್ತ ಕ್ರಮಕ್ಕೆ ಪ್ರೊ.ಕೃಷ್ಣಪ್ಪ ದಸಂಸ ಆಗ್ರಹ

ಮೈಸೂರು,ನ.8(ಜಿಎ)– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ 2021ರ ನಂತರ ನಿಯಮ ಉಲ್ಲಂಘಿಸಿ ಸಾವಿರಾರು ಅಕ್ರಮ ಖಾತೆ ಮಾಡಿಕೊಡಲಾಗಿದೆ. ಈ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ವಾರದೊಳಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಡಿಸಿ ಕಚೇರಿ ಎದುರು ಪ್ರೊ.ಬಿ.ಕೃಷ್ಣಪ್ಪ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಜಿಲ್ಲಾ ಸಂಚಾಲಕ ಎಸ್.ಮಂಜುನಾಥ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಪಂ ವ್ಯಾಪ್ತಿಯ ರೆವಿನ್ಯೂ ಬಡಾವಣೆಗಳಿಗೆ ಅಧಿಕೃತ ಖಾತೆ ನೀಡಲಾಗಿದೆ. ಮರಣ ಹೊಂದಿದವರ ಹೆಸರಿಗೆ, ಸರ್ಕಾರಿ ರಸ್ತೆಗೆ, ಸರ್ಕಾರಿ ಖರಾಬು ಜಾಗಕ್ಕೂ ಖಾತೆ ಮಾಡಿಕೊಡಲಾಗಿದೆ. 4 ಅಂತಸ್ತಿನ ಕಟ್ಟಡಕ್ಕೆ ಖಾಲಿ ನಿವೇಶನ ಎಂದು ಖಾತೆ ಮಾಡಿಕೊಟ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಲಾಗಿದೆ. ಸಾಲ ಮಾಡಿ, ಕಷ್ಟಪಟ್ಟು ಈ ಜಾಗವನ್ನು ಖರೀದಿ ಮಾಡಿದವರು ಮುಂದೆ ಯಾರಾದರೂ ಇವೆಲ್ಲ ಬೋಗಸ್ ಖಾತೆ ಎಂದು ತಕರಾರು ಎತ್ತಿದಲ್ಲಿ ಸಮಸ್ಯೆಗೊಳಗಾಗಬೇಕಾಗುತ್ತದೆ. ಆದ್ದರಿಂದ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಹಿಂದಿನ ಕಂದಾಯ ನಿರೀಕ್ಷಕರು, ಕರ ವಸೂಲಿಗಾರರು ಹಾಗೂ ಇನ್ನಿತರರು ಈ ಅಕ್ರಮ ಎಸಗಿದ್ದಾರೆ. ಆದ್ದರಿಂದ ಜಿಲ್ಲಾ ನಗರಾಭಿವೃದ್ಧಿ ಕೋಶದ ನಿರ್ದೇಶಕರು ಒಂದು ವಾರದೊಳಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಇವರೂ ಶಾಮೀಲಾಗಿದ್ದಾರೆಂದು ಶಂಕಿಸಬೇಕಾಗುತ್ತದೆ. ತಪ್ಪಿತಸ್ಥರನ್ನು ಕೂಡಲೇ ಜಿಲ್ಲೆಯಿಂದ ಹೊರಗೆ ವರ್ಗಾಯಿಸಬೇಕು. ಇಲ್ಲದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಂತರಾಜು ಹುಣಸೂರು, ಬಿ.ಮಂಜುನಾಥ್, ಬಿ.ಸಿದ್ದರಾಜು, ಎ.ಪಿ.ರಮೇಶ, ಪಳನಿ ಉಪಸ್ಥಿತರಿದ್ದರು.

ಸನ್ಮಾನ...


ಮೈಸೂರು ಕುಂಬಾರರ ಸಾರ್ವಜನಿಕ ವಿದ್ಯಾರ್ಥಿನಿಲಯ ಟ್ರಸ್ಟ್ ನೂತನ ಅಧ್ಯಕ್ಷ ಕುಂಬಾರಗೇರಿ ನಿವಾಸಿ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿವೃತ್ತ ನೌಕರ ಸಿ.ರಾಮಣ್ಣ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಆರ್.ಸೋಮಣ್ಣ, ತ್ರಿಲೋಕ್ ಸನ್ಮಾನಿಸಿದರು.

ಪ್ರೊ. ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಇಂದು

ಮೈಸೂರು,ನ8(ಜಿಎ)–ಪ್ರೊ ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನದಿಂದ ನ.9ರಂದು ಬೆಳಗ್ಗೆ 10.30ಕ್ಕೆ ಅಗ್ರಹಾರದ ರಾಜೇಂದ್ರ ಭವನದಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಮಹದೇವಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮವನ್ನು ಸಂಸ್ಕೃತಿ ಚಿಂತಕ ಶಂಕರ ದೇವನೂರು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಾನಪದ ವಿದ್ವಾಂಸರಾದ ಪ್ರೊ.ಪಿ.ಕೆ. ರಾಜಶೇಖರ ವಹಿಸಲಿದ್ದಾರೆ. ಪ್ರತಿಷ್ಠಾನದ ಗೌರವಾಧ್ಯಕ್ಷೆ ಕೆ.ಎಸ್.ಜಯಂತಿ ಉಪಸ್ಥಿತಿಯಲ್ಲಿ ಪ್ರೊ ಮಲೆಯೂರು ಗುರುಸ್ವಾಮಿ ಅವರ ನೆನಪಿನಲ್ಲಿ ಸ್ಥಾಪಿಸಿರುವ ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನದ ವತಿಯಿಂದ ಕೊಡ ಮಾಡುವ ಪ್ರಶಸ್ತಿಗೆ ಈ ಬಾರಿ ಲೇಖಕ ಡಾ.ರಹಮತ್ ತರೀಕೆರೆ ಅವರಿಗ ಪ್ರದಾನ ಮಾಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಹೆಚ್.ಬಿ.ಬೆಟ್ಟಸ್ವಾಮಿ, ಮಹಾಂತೇಶ್, ನಿಂಗರಾಜ್ ಉಪಸ್ಥಿತರಿದ್ದರು.

ಗ್ರೇಟರ್ ಮೈಸೂರು ಯೋಜನೆ ಕೈಬಿಡುವಂತೆ ಸರ್ಕಾರಕ್ಕೆ ಆಗ್ರಹ

ಮೈಸೂರು,ನ.8(ಜಿಎ)–ಮೈಸೂರಿನಲ್ಲಿ ಮೇಲ್ಸೇತುವೆ, ಸುರಂಗ ಮಾರ್ಗ ಮತ್ತು ಗ್ರೇಟರ್ ಮೈಸೂರು ಯೋಜನೆಯನ್ನು ಕೈಬಿಟ್ಟು ಪಾರಂಪರಿಕ ನಗರವಾಗಿ ಉಳಿಸಿ ಎಂದು ಮೈಸೂರು ರಕ್ಷಣಾ ವೇದಿಕೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಮೈ.ಕಾ. ಪ್ರೇಮ್‌ಕುಮಾರ್ ಮಾತನಾಡಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ಮೈಸೂರು ರಾಜ್ಯದ ಅಭಿವೃದ್ಧಿ ಆರಂಭವಾಗಿ ದಿವಾನರುಗಳು ಮೊದಲಾದವರು ಶ್ರಮಿಸಿ ಅಭಿವೃದ್ಧಿಗೊಳಿಸಿದ್ದಾರೆ. ಇಂತಹ ಪಾರಂಪರಿಕ ನಗರಕ್ಕೆ ಗ್ರೇಟರ್ ಮೈಸೂರು ಎಂದು ಹೆಸರು ಬದಲಿಸಲು ಹೊರಟಿರುವುದು ಸರಿಯಲ್ಲ ಎಂದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಹ ಮೇಲ್ಸೇತುವೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಸರ್ಕಾರ ಉಲ್ಲೇಖಿಸಿರುವ ವಿನೋಬಾ ರಸ್ತೆ, ಜೆಎಲ್‌ಬಿ ರಸ್ತೆಗಳಲ್ಲಿ ಪಾರಂಪರಿಕ ಕಟ್ಟಡಗಳಿದ್ದು, ಭೂಗತ ನೀರಿನ ಪೈಪ್‌ಲೈನ್ ಹಾದುಹೋಗಿವೆ. ಹೀಗಾಗಿ ಇಲ್ಲಿ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳುವುದು ಅವೈಜ್ಞಾನಿಕ ಎಂದರು.

ಮೈಸೂರಿನಲ್ಲಿ ಈಗಾಗಲೇ 65 ವಾರ್ಡ್‌ಗಳಿವೆ. ಅವುಗಳಲ್ಲಿ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಮತ್ತೊಂದೆಡೆ ನಗರದ ಸಮೀಪದಲ್ಲಿ ಕೆಆರ್‌ಎಸ್ ಅಣೆಕಟ್ಟೆ ಇದ್ದರೂ ನಗರದ ಹೃದಯ ಭಾಗದಲ್ಲಿ ಕೆಆರ್‌ಎಸ್ ನೀರು ಸರಬರಾಜಿಲ್ಲ. ಒಳ ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಕಸದ ವಿಲೇವಾರಿ ಸರಿಯಾಗಿ ನಡೆಯುತ್ತಿಲ್ಲ. ಪಾದಚಾರಿ ಮಾರ್ಗಗಳ ಒತ್ತುವರಿ ಆಗಿದೆ. ರಸ್ತೆಗಳು ಹದಗೆಟ್ಟಿವೆ. ಹೀಗಾಗಿ ಇಂತಹ ಸಮಸ್ಯೆ ಬಗೆಹರಿಸುವತ್ತ ಸರ್ಕಾರ ಗಮನ ಹರಿಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಕುಮಾರಗೌಡ, ಗುರುರಾಜ್, ಸಂಜಯ್, ಪ್ರಮೋದ್ ಉಪಸ್ಥಿತರಿದ್ದರು.

ಎಲ್‌ಕೆ ಅಡ್ವಾಣಿಗೆ 98ನೇ ಹುಟ್ಟುಹಬ್ಬ; 'ಬಿಜೆಪಿ ಭೀಷ್ಮ'ನನ್ನು ಹೊಗಳಿದ ಪ್ರಧಾನಿ ಮೋದಿ

ನವದೆಹಲಿ: ರಾಜಕೀಯ ಚಾಣಾಕ್ಯ, ಕೇವಲ 2 ಸ್ಥಾನಗಳಿಂದ ಭಾರತೀಯ ಜನತಾ ಪಕ್ಷವನ್ನ 161 ಸ್ಥಾನಗಳಿಗೆ ಏರಿಸಿದ ಚತುರ, ಮಾಜಿ ಉಪಪ್ರಧಾನಿ ಎಲ್.ಕೆ. ಅಡ್ವಾಣಿ ಅವರ ಜನ್ಮದಿನ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ದೇಶದ ಪ್ರಮುಖ ವ್ಯಕ್ತಿಗಳು ಶುಭಕೋರಿದ್ದಾರೆ.


ಎಲ್.ಕೆ. ಅಡ್ವಾಣಿ

ಅಡ್ವಾಣಿಯವರಿಗೆ ಶುಭಾಷಯ ತಿಳಿಸಿರುವ ಪ್ರಧಾನಿ ಮೋದಿಯುವರು, ಎಲ್.ಕೆ. ಅಡ್ವಾಣಿ ಜೀ ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು. ಅತ್ಯುನ್ನತ ದೃಷ್ಟಿ ಮತ್ತು ಬುದ್ಧಿಶಕ್ತಿಯಿಂದ ಆಶೀರ್ವದಿಸಲ್ಪಟ್ಟ ರಾಜಕಾರಣಿ, ಅಡ್ವಾಣಿ ಜೀ ಅವರ ಜೀವನವು ಭಾರತದ ಪ್ರಗತಿ ಯನ್ನು ಬಲಪಡಿಸಲು ಸಮರ್ಪಿತ ವಾಗಿದೆ. ಅವರು ನಿಸ್ವಾರ್ಥ ಕರ್ತವ್ಯ ಮತ್ತು ದೃಢ ತತ್ವಗಳ ಸಾಕಾರ ರೂಪ ಎಂದು ಹೇಳಿದ್ದಾರೆ. ಇದೇ ವೇಳೆ ಅಡ್ವಾಣಿಯವರಿಗೆ ಶುಭಾಶಯ ತಿಳಿಸಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು, ಎಲ್.ಕೆ ಅಡ್ವಾಣಿ ಜೀ ಅವರ ವಿಶಿಷ್ಟ ನಾಯಕತ್ವ, ದೂರದೃಷ್ಟಿ ಮತ್ತು ರಾಷ್ಟ್ರಕ್ಕಾಗಿ ಅವರ ಜೀವಮಾನದ ಸಮರ್ಪಣೆ ನಮಗೆಲ್ಲ ಸ್ಫೂರ್ತಿ ನೀಡುತ್ತದೆ. ಅವರ ಆರೋಗ್ಯ ಮತ್ತು ಆಯುಷ್ಯ ವೃದ್ಧಿಯಾಗಲಿ ಎಂದಿದ್ದಾರೆ.

ರತ್ನಾವತಿ ನಿಧನ

ಮೈಸೂರು: ಮೈಸೂರಿನ ಲಲಿತಾದ್ರಿಪುರದ ನಿವಾಸಿ, ತಿ.ನರಸೀಪುರದ ಸರ್ಕಾರಿ ಆಸ್ಪತ್ರೆಯ ಸ್ಟಾಫ್‌ನರ್ಸ್ ಬಿ.ಬಿ.ವಿಶಾಲಕ್ಷೀ ಅವರ ತಾಯಿ ರತ್ನಾವತಿ (84) ಅವರು ಶನಿವಾರ ನಿಧನರಾದರು.



ದಿವಂಗತ ಬಾಳಪ್ಪ ಪೂಜಾರಿ ಅವರ ಪತ್ನಿಯಾದ ದಿವಂಗತರು ನಾಲ್ವರು ಪುತ್ರರು, ಪುತ್ರಿ ವಿಶಾಲಕ್ಷಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ 3 ಗಂಟೆಗೆ ಕೊಡಗಿನ ಮೂರ್ನಾಡು ಬಳಿಯಿರುವ ಕಟ್ಟೇಮಾಡು ಗ್ರಾಮದ ತೋಟದಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿವೇಶನ ಅತಿಕ್ರಮಿಸಿರುವ ಆರೋಪ

ಮೈಸೂರು,ನ.8(ಜಿಎ)–ತಾವು ಕೆಐಎಡಿಬಿ ಖರೀದಿಸಿರುವ ನಿವೇಶನವನ್ನು ಮಹೇಂದ್ರ ವರ್ಮ ಹಾಗೂ ಸಹಚರರು ಅತಿಕ್ರಮಿಸಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಜೆ.ವೀರಭದ್ರ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಲ ಮಾಡಿ ಕೆಐಎಡಿಬಿಯಿಂದ ಕೈಗಾರಿಕ ನಿವೇಶನ ಖರೀದಿಸಿ, 1300 ಅಡಿ ವೇರ್‌ಹೌಸ್ ನಿರ್ಮಾಣ ಮಾಡಿದ್ದು, ಇತ್ತೀಚೆಗಷ್ಟೇ ಬಾಡಿಗೆಗೆ ನೀಡಿದ್ದೇನೆ. ಈ ನಡುವೆ ಮಹೇಂದ್ರ ವರ್ಮ ಎಂಬುವರು ನಿವೇಶನ ನನಗೆ ಸೇರಬೇಕು ಎಂದು ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕೆ ನ್ಯಾಯಾಲಯ (ಸ್ಟೇಟಸ್ಕೋ) ಯಥಾಸ್ಥಿತಿ ಕಾಪಾಡುವಂತೆ ಆದೇಶ ನೀಡಿದ್ದು, ನ.19ರಂದು ಮುಂದಿನ ವಿಚಾರಣೆ ಇದೆ.

ನ್ಯಾಯಾಲಯದಲ್ಲಿ (ಸ್ಟೇಟಸ್ಕೋ) ಯಥಾಸ್ಥಿತಿ ಕಾಪಾಡುವಂತೆ ಆದೇಶ ನೀಡಿದ್ದರೂ ಮಹೇಂದ್ರ ವರ್ಮ ಹಾಗೂ ಆತನ ಸಹಚರರು ಏಕಾಏಕಿ ವೇರ್ ಹೌಸ್‌ಗೆ ನುಗ್ಗಿ ಫಲಕ, ಸಿಸಿಟಿವಿ ಅಳವಡಿಸಿ, ಬೀಗ ಹಾಕಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು, ಡಿಸಿ ಸೇರಿದಂತೆ ಎಲ್ಲಾ ಅಧಿಕಾರಿಗಳಿಗೂ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದಷ್ಟು ಬೇಗ ಸಂಬಂಧಪಟ್ಟ ಅಧಿಕಾರಿಗಳು ನ್ಯಾಯಾಲಯದ ಆದೇಶದಂತೆ ಯಥಾಸ್ಥಿತಿ ಕಾಪಾಡಲು ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು.

ಇಂದು ರಾಜ್ಯೋತ್ಸವ ಪುರಸ್ಕಾರ

ಮೈಸೂರು,ನ.8–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ ಸಮಾರಂಭವನ್ನು ನ.9ರಂದು ಬೆಳಗ್ಗೆ 10.30ಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಆವರಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸಲಿದ್ದಾರೆ. ಪ್ರಾಸ್ತಾವಿಕ ನುಡಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಆಡಲಿದ್ದಾರೆ.

ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಣಿಶೇಖರ್, ಪ್ರಭಾಶಾಸ್ತ್ರೀ ಜೋಶ್ಯಲ, ಬಿ.ಆರ್.ನಾಗರತ್ನ, ಡಾ.ಬಲ್ಲೇನಹಳ್ಳಿ ವಿಜಯಕುಮಾರ್, ಅನಿತಾ ವಿಮಲ ಬ್ರ್ಯಾಗ್ಸ್, ಲೀಲಾವತಿ, ಯಶೋಧ ರಾಮಕೃಷ್ಣ, ಸೌಗಂಧಿಕಾ ಜೋಯಿಸ್, ಪದ್ಮಾ ಪಾಂಡುರಂಗ, ಡಾ.ಪೂವಮ್ಮ, ಡಾ.ಅಖಿಲಾ, ಎನ್.ಆರ್.ರೂಪಶ್ರೀ, ಸುಜನಾ, ಎಂ.ಎಸ್.ಉಷಾ ಪ್ರಕಾಶ್, ಕೆ.ಲಕ್ಷ್ಮಿ ಮತ್ತಿತರರಿಗೆ ರಾಜ್ಯೋತ್ಸವ ಪುರಸ್ಕಾರ ನೀಡಿ ಅಭಿನಂದಿಸಲಾಗುತ್ತಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ನ.11, ವೀರ ವನಿತೆ ಒನಕೆ ಓಬವ್ವ ಜಯಂತಿ

ಮೈಸೂರು,ನ.8– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ವೀರ ವನಿತೆ ಒನಕೆ ಓಬವ್ವ ಜಯಂತಿ ಆಚರಣೆಯನ್ನು ನ.11ರಂದು ಮಧ್ಯಾಹ್ನ 11.30 ಗಂಟೆಗೆ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.



ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್.ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ, ಕೆ.ವಿವೇಕಾನಂದ, ಕೆ.ಶಿವಕುಮಾರ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.11.2025 ಭಾನುವಾರ, ಮಳೆ ನಕ್ಷತ್ರ: ವಿಶಾಖ, 6.11.2025 ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

- **ಡಾ. ರಾಗೌ ಗುರುಗಳು ಮತ್ತು ಮಣಿ ಪ್ರಕಾಶನ:** ಪ್ರೊ. ವೆಂಕಟೇಶ್ ಕೆ.ಬಿ. ಅವರ 'ಹೊಸ ಪಲ್ಲವ', ಪ್ರೊ. ತೇಜ ಎಸ್.ಬಿ. ಅವರ 'ಬುವಿ ನೀಡಿದ ಅರಿವು' ಕೃತಿಗಳ ಲೋಕಾರ್ಪಣೆ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕೃತಿಗಳ ಲೋಕಾರ್ಪಣೆ: ಮಾಜಿ ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ. ರಾಗೌ, ಕೃತಿಗಳ ಕುರಿತು ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಸಿ. ನಾಗಣ್ಣ, ಸ್ಥಳ: ವಿಜ್ಞಾನ ಭವನ, ಸೆಮಿನಾರ್ ಹಾಲ್, ಮಾನಸ ಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೆಯ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಅಸ್ತಮ, ಉಬ್ಬಸ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.
- **ಸಂಚಲ ಬಳಗ ಪ್ರತಿಷ್ಠಾನ (ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಸೇವಾ ಸಂಸ್ಥೆ), ಅಲೆಯನ್ಸ್ ಕ್ಲಬ್ ಆಫ್ ಮೈಸೂರು ರಾಧಾಕೃಷ್ಣ (ಪ್ರಾಂತ್ಯ–1, ವಲಯ–3), ಅಲೆಯನ್ಸ್ ಕ್ಲಬ್ ಆಫ್ ಸಾವಿತ್ರಿ ಬಾಯಿ ಫುಲೆ (ಪ್ರಾಂತ್ಯ–3, ವಲಯ–5):** 70ನೇ ಕರ್ನಾಟಕ ರಾಜ್ಯೋತ್ಸವ, ಶಿಕ್ಷಕ, ವೈದ್ಯರ ಮತ್ತು ಅಭಿಯಂತರರ ದಿನಾಚರಣೆ–2025, ಸ್ಥಳ: ಅನಂತೇಶ್ವರ ಭವನ, ಹೂಟಗಳ್ಳಿ, ಬೆಳಗ್ಗೆ 10 ಗಂಟೆಗೆ.
- **ಬಸವ ಮಾರ್ಗ ಫೌಂಡೇಷನ್, ವ್ಯಸನ ಮುಕ್ತ ಮತ್ತು ಪುನರ್ವಸತಿ ಕೇಂದ್ರ:** ಮಹಿಳೆಯರು ಮತ್ತು ಪುರುಷರಿಗೆ 55ನೇ ಉಚಿತ ಶಿಬಿರ, ಸ್ಥಳ: ಪುನರ್ವಸತಿ ಕೇಂದ್ರ, ಹೆಬ್ಬಾಳ್ ರಿಂಗ್ ರಸ್ತೆ, ಬೆಳಗ್ಗೆ 10ರಿಂದ.
- **ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ, ಮೈಸೂರು:** ಪ್ರೊ. ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ–2025, ಅಧ್ಯಕ್ಷತೆ: ಜಾನಪದ ವಿದ್ವಾಂಸ ಪ್ರೊ. ಪಿ.ಕೆ. ರಾಜಶೇಖರ, ಉದ್ಘಾಟನೆ: ಸಂಸ್ಕೃತಿ ಚಿಂತಕ ಶಂಕರ ದೇವನೂರು, ಪ್ರೊ. ಮ.ಗು. ಪ್ರಶಸ್ತಿ ಪುರಸ್ಕೃತರು: ಬಹುಶ್ರುತ ಲೇಖಕ ಪ್ರೊ. ರಹಮತ್ ತರೀಕೆರೆ, ಗೌರವ ಉಪಸ್ಥಿತಿ: ಪ್ರೊ. ಮ.ಗು. ಪ್ರತಿಷ್ಠಾನದ ಗೌರವಾಧ್ಯಕ್ಷೆ ಶ್ರೀಮತಿ ಜಯಂತಿ ಕೆ.ಎಸ್., ಸ್ಥಳ: ಶ್ರೀ ರಾಜೇಂದ್ರ ಭವನ, ಅಗ್ರಹಾರ, ಬೆಳಗ್ಗೆ 10.30ಕ್ಕೆ.
- **ಶ್ರೀ ಶಂಕರ ಜಯಂತಿ ಸಭಾ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಸಮುದಾಯ ಭವನ, ತೆಂಗಿನ ತೋಟ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ:** ಹದಿನಾರನೆಯ ಘಟಿಕೋತ್ಸವ, ದಿವ್ಯ ಸಾನ್ನಿಧ್ಯ: ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀ ಕ್ಷೇತ್ರ, ಕುಲಾಧಿಪತಿಗಳಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮುಖ್ಯ ಅತಿಥಿಗಳು: ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಗೌರವ ಅತಿಥಿ: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉಪಸ್ಥಿತರು: ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸಮಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಎಚ್. ಬಸವನಗೌಡಪ್ಪ, ಸ್ಥಳ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ, ಶ್ರೀ ಶಿವರಾತ್ರೀಶ್ವರನಗರ, ಮಧ್ಯಾಹ್ನ 1.25ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ:** ನವೆಂಬರ್ ತಿಂಗಳ ಪ್ರವಚನ, ಸ್ವಾಮಿ ಅಘಹರಾನಂದ ಅವರಿಂದ ಶ್ರೀ ರಾಮಕೃಷ್ಣರ ಪ್ರತಿಪಾದಕರಾಗಿ ಸ್ವಾಮಿ ವಿವೇಕಾನಂದರು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಸಂಜೆ 6ರಿಂದ.
- **ಕನ್ನಡಾಂಬೆ ರಕ್ಷಣಾ ವೇದಿಕೆ:** ಕನ್ನಡಾಂಬೆ ಹಬ್ಬದ ಪ್ರಯುಕ್ತ ಮನೋರಂಜನಾ ಕಾರ್ಯಕ್ರಮ ಮತ್ತು ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ–2025, ಉದ್ಘಾಟನೆ: ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ ದಕ್ಷಿಣಾಮ್ನಾಯಿ ಶ್ರೀ ಶಾರದಾ ಪೀಠ ಶೃಂಗೇರಿ, ಶ್ರೀ ವಿದ್ಯಾ ಚೌಡೇಶ್ವರಿ ಅಮ್ಮನವರ ಮಠ (ಕೆ.ಜಿ. ದೇವಪಟ್ಟಣ)ದ ಶ್ರೀ ಶ್ರೀ ಬಾಲ ಮಂಜುನಾಥ ಸ್ವಾಮೀಜಿ, ದಿವ್ಯ ಸಾನ್ನಿಧ್ಯ: ಪಾಂಡವಪುರ ತಾಲೂಕಿನ ಶ್ರೀ ರಾಮ ಯೋಗೇಶ್ವರ ಮಠ, ಬೇಬಿ ಬೆಟ್ಟದ ಶ್ರೀ ಬಸವ ಸ್ವಾಮೀಜಿ, ಕೊಳ್ಳೇಗಾಲ ತಾಲೂಕು ಚಿಲಕವಾಡಿಯ ಶ್ರೀ ಗುರು ರಾಮ ಯೋಗೀಶ್ವರ ಮಠಾಧ್ಯಕ್ಷ, ಶಂಭುಲಿಂಗನ ಕ್ಷೇತ್ರದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ಶ್ರೀ ಅರ್ಜುನ ಅವಧೂತರು, ಅಧ್ಯಕ್ಷತೆ: ಶಾಸಕ ಜಿ.ಟಿ. ದೇವೇಗೌಡ, ಕನ್ನಡಾಂಬೆ ವಾರ್ಷಿಕ ಸಂಚಿಕೆ ಬಿಡುಗಡೆ: ಬಿಜೆಪಿ ಯುವ ಮುಖಂಡ ಕವೀಶ್‌ಗೌಡ, ಸ್ಥಳ: ಹೂಟಗಳ್ಳಿ, ಸಂಜೆ 4 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಿಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10: ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ: ರೋಹಿಣಿ ಸುಧಾಮ್, ವ್ಯಾಖ್ಯಾನ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ – ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ– ಉಮೇಶ್.ಎಸ್.ಎಸ್, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಮಧುಮೇಹ ದಿನಾಚರಣೆಯ ಸಂದರ್ಭದಲ್ಲಿ ಮಧುಮೇಹ ಚಿಕಿತ್ಸೆಯಲ್ಲಿ ಇತ್ತೀಚಿನ ಬೆಳವಣಿಗೆ ಗಳು ಕುರಿತು ಫಿಸಿಷಿಯನ್ ಮತ್ತು ಡಯಾಬಿಟಾಲಜಿಸ್ಟ್ ಡಾ.ಕಾರ್ತಿಕ್ ಉಡುಪ. ಎನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ ಕಥೆ ಕೇಳು ಪುಟ್ಟ, ಪ್ರಸ್ತುತಿ: ಬಿ.ಜಿ.ಕವಿತಾ 10.30 KRISH TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಬಹುಮುಖ ಪ್ರತಿಭೆ ಅನಘ.ಹೆಚ್.ಪ್ರಸಾದ್ ಹಾಗೂ ಅವರ ತಾಯಿ ಜಯಶ್ರೀ.ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್.ಬಿ, 12.05 ವನಿತಾ ವಿಹಾರ, 12.35 ದೇವರನಾಮ, 12.45– ಜನಪದ ಸಂಗೀತ : ಚಾಮರಾಜನಗರ ಜಿಲ್ಲೆ ಸಿದ್ಧಯ್ಯನಪುರದ ಆನಂದ್ ಮತ್ತು ಸಂಗಡಿಗರಿಂದ ಜೋಗಳದ ಹಾಡು, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ –ಸಿನಿಸೆಲೆಬ್ರಿಟಿಗಳೊಂದಿಗೆ ಮಾತುಕತೆ ಖ್ಯಾತ ನಿರ್ದೇಶಕ ದಿನೇಶ್ ಬಾಬು ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ ಶಾಂತಕುಮಾರ್.ಜಿ ಹಾಗೂ ಶ್ರೀಮಾನ್.ಎಸ್ 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ ಗಾನಸರಸ್ವತಿ ಹಾಡುಗಾರಿಕೆ, 6.51 ಕೃಷಿರಂಗ: 1.ತೋರಣ ಹೂರಣ ಸಾಪ್ತಾಹಿಕ ಸರಣಿ ಕಾರ್ಯಕ್ರಮ (FB) ಪ್ರಸ್ತುತಿ:ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, 2.ಕೃಷಿ ಲೋಕ, 3. ಕೃಷಿ ದರ್ಪಣ ವಾರದ ಕೃಷಿರಂಗ ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00–ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ.ಸಿ.ಪಿ.ರಾಧಾಕೃಷ್ಣನ್ ಅವರ ಹಾಸನ ಹಾಗೂ ಮೈಸೂರು ಭೇಟಿಯ ಕುರಿತು ಬಾನುಲಿ ವರದಿ. 8.30 ಚಿತ್ರಗೀತೆಗಳು 9.15 ರಂಗಗೀತೆಗಳು ಜಿ.ಆರ್.ರಾಮಚಂದ್ರ 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ – ಭಾಮಿಡಿಪಾಟಿ ಲಲಿತಾ ವಯೋಲಿನ್ ವಾದನ

- **ಎಸ್. ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗ:** ಭಕ್ತ ಕನಕದಾಸರ ಜಯಂತ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ 'ಕನಕ ಸೇವಾ ರತ್ನ ಪ್ರಶಸ್ತಿ' ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸ್ಥಳ: ಸಿಎಸ್‌ಐ ಗರ್ಲ್ಸ್ ಬೋರ್ಡಿಂಗ್ ಹೋಮ್, ಎಂ.ಜಿ. ರಸ್ತೆ, ಸಂಜೆ 5 ಗಂಟೆಗೆ.
- **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ, ಶೃಂಗೇರಿ:** ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ 7ನೇ ವರ್ಷದ ವರ್ಧಂತಿ ಮಹೋತ್ಸವ, 'ಬೆತ್ರೋತ್ಸವ ಭಾರತಿ'ಯ ಅಂಗವಾಗಿ ಮೋಹ ಮುದ್ಗರ (ಭಜಗೋವಿಂದ) ಕಾರ್ಯಕ್ರಮ ಕನ್ನಡದಲ್ಲಿ ಮಹಾಮಹೋಪಾಧ್ಯಾಯ ವಿದ್ವಾನ್ ಡಾ. ಕೆ.ಜಿ. ಸುಬ್ರಾಯ ಶರ್ಮ ಅವರಿಂದ, ಸ್ಥಳ: ಶ್ರೀ ಶೃಂಗೇರಿ ಶಂಕರ ಮಠ, ಅಭಿನವ ಶಂಕರಾಲಯ, ಸಂಜೆ 6ರಿಂದ.
- **ವೃಕ್ಷ, ಮೈಸೂರು:** ಅಭಿನಯ ಪೂರ್ವಕ ವೃತ್ತಿ ರಂಗಭೂಮಿ ರಂಗಗೀತೆಗಳ ಪ್ರದರ್ಶನ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ. ದೇವೇಗೌಡ, ಜಿಲ್ಲಾ ರಾಜ್ಯಪಾಲ (317G ಜಿಲ್ಲೆ) ಲಯನ್ ಕೆ.ಎಲ್. ರಾಜಶೇಖರ, ಪಿಎಸ್‌ಟಿ ಫೋರಂ 317G ಜಿಲ್ಲೆ ಜಿಲ್ಲಾಧ್ಯಕ್ಷ ಲಯನ್ ಎಂ. ಸಿದ್ದೇಗೌಡ, ಸ್ಥಳ: ಜೆಸಿಎಸಿ (ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್) ವಿಜಯನಗರ 1ನೇ ಹಂತ, ಸಂಜೆ 6.15ಕ್ಕೆ.
- **ರಂಗಾಯಣ:** ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ 'ಒಮ್ಮೆ ಹೆಣ್ಣಾಗು' ನಾಟಕ ಪ್ರದರ್ಶನ, ಕಥೆ: ಬಾನು ಮುಷ್ತಾಕ್, ಪರಿಕಲ್ಪನೆ, ವಿನ್ಯಾಸ, ನಿರ್ದೇಶನ: ಸವಿತಾರಾಣಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.
- **ಕರ್ನಾಟಕ ಗಾನಕಲಾ ಪರಿಷತ್ತು, ಗಾನಭಾರತಿ (ವೀಣೆ ಶೇಷಣ್ಣ ಭವನ):** 54ನೇ ಹಿರಿಯ ಸಂಗೀತ ವಿದ್ವಾಪ್ರಸರ, 36ನೇ ಯುವ ಸಂಗೀತ ವಿದ್ವಾಂಸರ ರಾತ್ರಿ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭ, ಬೆಳಗ್ಗೆ 10.30ರಿಂದ ವಿ॥ ಡಾ॥ ಸಿ.ಎ. ಶ್ರೀಧರ ಅವರಿಗೆ ಗಾನಕಲಾ ಭೂಷಣ ಬಿರುದು ಮತ್ತು ಶ್ರೀ ವಾದಿರಾಜ ಪ್ರಶಸ್ತಿ ಪ್ರದಾನ, ವಿ॥ ಮತ್ತೂರು ಆರ್. ಶ್ರೀನಿಧಿ ಅವರಿಗೆ ಗಾನಕಲಾಶ್ರೀ ಬಿರುದು ಮತ್ತು ರಾಮಸುಧಾ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು: ಉಪ ಲೋಕಾಯುಕ್ತರಾದ ಜಸ್ಟಿಸ್ ಕೆ.ಎನ್. ಫಣೀಂದ್ರ, ವಾಣಿ ವಿದ್ಯಾ ಕೇಂದ್ರದ ವ್ಯವಸ್ಥಾಪಕ ಆರ್.ಎಚ್. ಶಾರದಾ ಪ್ರಸಾದ್, ವಿದ್ಯುತ್ ಸದಸ್ಯ ಸನ್ಮಾನಿತರು: ವಿ.ಕೆ.ಆರ್. ವೆಂಕಟೇಶ್, ವಿ. ಕೋವಿಲಾಡಿ ಆರ್. ಕಲಾ, ವಿ. ಹೊಸಹಳ್ಳಿ ಕೆ. ಸುಬ್ಬರಾವ್, ವಿ.ಎಲ್. ಲೀಲಾ, ವಿ. ಡಾ. ಎಂ.ಆರ್. ಹನುಮಂತರಾಜು, ಎಚ್.ಎನ್. ಸುರೇಶ್, ಸಂಜೆ 4.15ರಿಂದ ಸಂಗೀತ ಕಾರ್ಯಕ್ರಮ, ವಿ. ಶಾಂತಲಾ ಸುಬ್ರಮಣ್ಯಂ–ಕೊಳಲು, ವಿ. ಬಿ.ಕೆ. ರಘು–ಪಿಟೀಲು, ವಿ. ಅನುರುದ್ಧ ಶ್ರೀನಿವಾಸ್ ಭಟ್–ಮೃದಂಗ, ವಿ. ಆರ್. ಕಾರ್ತಿಕ್–ಖಂಜರಿ, ವಿ. ವಸುಧಾ ಕೇಶವ್–ಗಾಯನ, ವಿ. ಟಿ.ಎಸ್. ಕೃಷ್ಣಮೂರ್ತಿ–ಪಿಟೀಲು, ವಿ. ಎ.ರಾಧೇಶ್–ಮೃದಂಗ, ವಿ. ಎ.ಎಸ್. ರಮೇಶ್–ಮೂರ್ಚಿಂಗ್, ಸ್ಥಳ: ಗಾನಭಾರತಿ ರಮಾ ಗೋವಿಂದ ಕಲಾ ವೇದಿಕೆ.

ಕಾರಿನ ಬಾಗಿಲು ಗಾಜು ಒಡೆದು 48 ಲಕ್ಷದ ಚಿನ್ನಾಭರಣ ಕಳವು

ಇಲವಾಲ ಬಳಿ ಹುಣಸೂರು ರಸ್ತೆಯಲ್ಲಿ ಘಟನೆ

ಮೈಸೂರು, ನ.8 (ಆರ್‌ಕೆ)– ಹೋಟೆಲ್‌ನಲ್ಲಿ ಊಟ ಮಾಡಿ ಬರುವಷ್ಟರಲ್ಲಿ ಕಾರಿನ ಗಾಜು ಒಡೆದು ಸುಮಾರು 48 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಇಲವಾಲ ಬಳಿ ಹುಣಸೂರು ರಸ್ತೆಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಮೂಲತಃ ಮಂಗಳೂರಿನವರಾಗಿದ್ದು, ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಹೊರಮಾವು ನಿವಾಸಿ ರಾಜೇಶ್ ಅವರ ಚಿನ್ನಾಭರಣವನ್ನು ಖದೀಮರು ಕದ್ದಿದ್ದಾರೆ. ಇವರು ತಮ್ಮ ಪತ್ನಿ ಸಂಬಂಧಿಕರ ಶುಭ ಸಮಾರಂಭದಲ್ಲಿ ಭಾಗವಹಿಸಲು ವಿರಾಜಪೇಟೆಗೆ ಕೆಂಪು ಬಣ್ಣದ ಹುಂಡೈ ಕ್ರೇಟಾ (ಕೆಎ 01 ಎಂಪಿ 8240) ಕಾರಿನಲ್ಲಿ ಪತ್ನಿ ಹಾಗೂ ಪುತ್ರನೊಂದಿಗೆ ಬೆಂಗಳೂರಿನಿಂದ ಶುಕ್ರವಾರ ಮಧ್ಯಾಹ್ನ ಪ್ರಯಾಣ ಬೆಳೆಸಿದ್ದರು. ಅಂದು ರಾತ್ರಿ 8.15ರ ಸುಮಾರಿನಲ್ಲಿ ಇಲವಾಲ ಬಳಿ ಹುಣಸೂರು ರಸ್ತೆಯಲ್ಲಿರುವ ಹೋಟೆಲ್ ಒಂದರ ಪಕ್ಕದ ಬಾಗಿಲು ಮುಚ್ಚಿದ್ದ ಅಂಗಡಿ ಮುಂದೆ ಕಾರನ್ನು ನಿಲ್ಲಿಸಿ, ಊಟ ಮಾಡಿ ಬರುವಷ್ಟರಲ್ಲಿ ಕಾರಿನ ಹಿಂಭಾಗದ ಬಲ ಬದಿಯ ಬಾಗಿಲು ಗಾಜು ಒಡೆದು 48 ಲಕ್ಷ ರೂ. ಮೌಲ್ಯದ 375 ಗ್ರಾಂ ಚಿನ್ನಾಭರಣವಿದ್ದ ಸೂಟ್‌ಕೇಸ್ ಸೇರಿದಂತೆ ನಾಲ್ಕು ಲಗೇಜ್ ಬ್ಯಾಗ್‌ಗಳನ್ನು ಖದೀಮರು ಹೊತ್ತೊಯ್ದಿರುವುದು ಕಂಡು ಬಂತು.

ವಿಷಯ ತಿಳಿಯುತ್ತಿದ್ದಂತೆಯೇ ಇಲವಾಲ ಠಾಣೆ ಸಬ್‌ಇನ್ಸ್‌ಪೆಕ್ಟರ್ ಮಹೇಂದ್ರ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಆಗಮಿಸಿ ಮಹಜರು ನಡೆಸಿದರು. ಜಿಲ್ಲಾ ಬೆರಳಚ್ಚು ಮುದ್ರಾ ಘಟಕ ಇನ್ಸ್‌ಪೆಕ್ಟರ್ ಬಾಲಸುಬ್ರಮಣ್ಯ, ಎಎಸ್‌ಐ ಎಚ್.ಆರ್. ಹರೀಶ್, ಹೆಡ್ ಕಾನ್ಸ್‌ಟೇಬಲ್ ಮಧುಚಂದ್ರ ಹಾಗೂ ಸೀನ್ ಆಫ್ ಕ್ರೈಂ ಸಿಬ್ಬಂದಿಗಳು ಸ್ಥಳದಲ್ಲಿ ಪರಿಶೀಲನೆ ನಡೆಸಿದರು.

ರಾಜೇಶ್ ಅವರು ಕಾರು ನಿಲ್ಲಿಸಿದ್ದ ಸ್ಥಳದಲ್ಲಿ ಬೆಳಕಿರಲಿಲ್ಲ ಹಾಗೂ ಸಿಸಿ ಕ್ಯಾಮರಾಗಳೂ ಇರಲಿಲ್ಲ. ಜೊತೆಗೆ ಹೋಟೆಲ್‌ನಿಂದ ಆ ಸ್ಥಳ ತುಸು ದೂರವಿದ್ದ ಕಾರಣ ಖದೀಮರಿಗೆ ಕೃತ್ಯವೆಸಗಲು ಪೂರಕ ವಾತಾವರಣವಿತ್ತು ಎಂಬುದು ಮಹಜರು ವೇಳೆ ತಿಳಿದಿದೆ.



ಸಾಂದರ್ಭಿಕ ಚಿತ್ರ

ಊಟ ಮಾಡಿದ ಹೋಟೆಲ್ ಎದುರು ಕಾರು ಪಾರ್ಕ್ ಮಾಡಿದ್ದರೆ, ಅಲ್ಲಿ ಬೆಳಕು, ಸಿಸಿ ಕ್ಯಾಮರಾ ಹಾಗೂ ಭದ್ರತಾ ಸಿಬ್ಬಂದಿಗಳಿರುತ್ತಿದ್ದರು. ರಾಜೇಶ್ ಅವರು ಕಾರು ನಿಲ್ಲಿಸಿ ಊಟಕ್ಕೆ ಬರುವಾಗ ಕಡೇ ಪಕ್ಷ ಚಿನ್ನಾಭರಣವಿದ್ದ ಬ್ಯಾಗನ್ನು ತಮ್ಮ ಜೊತೆ ತೆಗೆದುಕೊಳ್ಳಬೇಕಾಗಿತ್ತು. ಎಚ್ಚರ ತಪ್ಪಿದ್ದರಿಂದ ಕಳ್ಳರಿಗೆ ಕೈಚಳಕ ತೋರಲು ಅನುವು ಮಾಡಿಕೊಟ್ಟಂತಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ಇಲವಾಲ ಠಾಣೆ ಪೋಲಿಸರು ಹುಣಸೂರು ರಸ್ತೆ ಮಾರ್ಗದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳ ದೃಶ್ಯಾವಳಿ ಕಲೆ ಹಾಕಿ, ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದಾರೆ. ಎಸ್ಪಿ ಎನ್. ವಿಷ್ಣುವರ್ಧನ, ಎಎಸ್ಪಿಗಳಾದ ಸಿ. ಮಲ್ಲಿಕ್, ನಾಗೇಶ್, ಮೈಸೂರು ಗ್ರಾಮಾಂತರ ಉಪ ವಿಭಾಗದ ಡಿವೈಎಸ್ಪಿ ಟಿ.ಬಿ. ರಾಜಣ್ಣ, ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಡೆಗೆ ರಾಜೇಶ್ ದಂಪತಿ ಕಾರನ್ನು ಪೊಲೀಸರಿಗೆ ಒಪ್ಪಿಸಿ, ಹುಣಸೂರಿನಿಂದ ತಮ್ಮ ಸ್ನೇಹಿತರ ಕಾರನ್ನು ತರಿಸಿಕೊಂಡು ವಿರಾಜಪೇಟೆಗೆ ತಡರಾತ್ರಿ ತೆರಳಿದರು. ಮದುವೆಗೆಂದು ಬೆಂಗಳೂರಿನಲ್ಲಿ ಹೊಸ ಬಟ್ಟೆ ಹಾಗೂ ಒಡವೆಗಳನ್ನು ಖರೀದಿಸಿ ಕೊಂಡೊಯ್ಯುತ್ತಿದ್ದರು ಎನ್ನಲಾಗಿದ್ದು ಕಾರಿನಲ್ಲಿ ಚಿನ್ನಾಭರಣವಿದೆ ಎನ್ನುವುದನ್ನು ಗಮನಿಸಿದ್ದವರೇ ಹಿಂಬಾಲಿಸಿ ಕಳವು ಮಾಡಿರಬಹುದೆಂದು ಶಂಕಿಸಲಾಗಿದೆ.

ಪಾರ್ಕಿಂಗ್ ಸ್ಥಳದಿಂದ ದೂರ, ಕತ್ತಲಲ್ಲಿ ಕಾರು ನಿಲ್ಲಿಸುವುದು ತರವಲ್ಲ

ಮೈಸೂರು, ನ.8 (ಆರ್‌ಕೆ)–ಕತ್ತಲಿರುವೆಡೆ, ಸಿಸಿ ಕ್ಯಾಮರಾ ಹಾಗೂ ಭದ್ರತಾ ಸಿಬ್ಬಂದಿ ಇಲ್ಲದ ಸ್ಥಳಗಳಲ್ಲಿ, ಅದರಲ್ಲೂ ಪಾರ್ಕಿಂಗ್ ಸ್ಥಳವಲ್ಲದ ಕಡೆ ಕಾರು ನಿಲ್ಲಿಸಬಾರದು. ಮಕ್ಕಳು, ಮಹಿಳೆಯರು ಹಾಗೂ ಕುಟುಂಬಸಮೇತ ಹೊರ ಊರುಗಳಿಗೆ ತೆರಳುವಾಗ, ಮಾರ್ಗ ಮಧ್ಯೆ ಬರ್ಹಿದೆಸೆಗೆ ಅಥವಾ ಊಟ–ತಿಂಡಿಗೆಂದು ಹೋದಾಗ ಸುರಕ್ಷತೆಗಾಗಿ ಬೆಳಕು, ಸಿಸಿ ಕ್ಯಾಮರಾ, ಭದ್ರತಾ ಸಿಬ್ಬಂದಿ ಇರುವ ಹೋಟೆಲ್ ಮುಂದೆಯೇ ವಾಹನಗಳನ್ನು ಪಾರ್ಕ್ ಮಾಡುವುದು ಒಳ್ಳೆಯದು. ಹಾಗೆಯೇ ತಾವು ಪ್ರಯಾಣಿಸುವಾಗ ಹಿಂದೆ, ಮುಂದೆ ಬರುವ ವಾಹನಗಳ ಬಗ್ಗೆಯೂ ಎಚ್ಚರವಿರಬೇಕು. ಏಕೆಂದರೆ ಅವರು ನಿಮ್ಮನ್ನು ಹಿಂಬಾಲಿಸುತ್ತಿರಬಹುದು ಇಲ್ಲ ಕಾರಿನಲ್ಲಿರುವ ಲಗೇಜ್‌ಗಳನ್ನು ಗಮನಿಸಿ ಅಪರಾಧ ಕೃತ್ಯವೆಸಗಲು ಪ್ಲಾನ್ ಮಾಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸಾರ್ವಜನಿಕರು ಎಚ್ಚರದಿಂದಿರುವಂತೆ ಪೋಲಿಸರು ಸಲಹೆ ನೀಡಿದ್ದಾರೆ. ಶುಕ್ರವಾರ ರಾತ್ರಿ ಇಲವಾಲ ಬಳಿಯ ಪ್ರತಿಷ್ಠಿತ ಹೋಟೆಲ್‌ವೊಂದರ ಸಮೀಪ ಬಾಗಿಲು ಮುಚ್ಚಿದ್ದ ಅಂಗಡಿ ಮುಂದೆ ಕಗ್ಗತ್ತಲ ಸ್ಥಳದಲ್ಲಿ ಕಾರು ನಿಲ್ಲಿಸಿದ್ದರಿಂದ ಬೆಂಗಳೂರಿನ ರಾಜೇಶ್ ಎಂಬುವರ ಸುಮಾರು 48 ಲಕ್ಷ ರೂ ಬೆಲೆಬಾಳುವ 375 ಗ್ರಾಂ ಚಿನ್ನಾಭರಣವನ್ನು ಕಾರಿನ ಗಾಜು ಒಡೆದು ದೋಚಲಾಗಿದೆ.



ಪರಪ್ಪನ ಅಗ್ರಹಾರ ಜೈಲಲ್ಲಿ ವಿಕೃತಕಾಮಿ ಉಮೇಶ್ ರೆಡ್ಡಿ, ಉಗ್ರಗಾಮಿ ಶಕೀಲ್, ಎಲ್‌ಇಟಿ ಉಗ್ರ, ಗೋಲ್ಡ್ ಸ್ಮಗ್ಲಿಂಗ್ ತರುಣ್ ರಾಜ್‌ಗೆ ರಾಜಾತಿಥ್ಯ

ಸುಪ್ರೀಂಕೋರ್ಟ್ ಎಚ್ಚರಿಸಿದರೂ ಎಚ್ಚೆತ್ತುಕೊಳ್ಳದ ಅಧಿಕಾರಿಗಳು

ಬೆಂಗಳೂರು, ನ.8– ಪರಪ್ಪನ ಅಗ್ರಹಾರ ಜೈಲಿನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದು ಮತ್ತೊಮ್ಮೆ ಜಗಜ್ಜಾಹೀರಾಗಿದೆ. ಈ ಹಿಂದೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ನಟ ದರ್ಶನ್ ಇದ್ದ ವೇಳೆ ಸಿಕ್ಕ ರಾಜಾತಿಥ್ಯಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಕಟುವಾಗಿ ಟೀಕಿಸಿತ್ತು. ಇದೀಗ ಮತ್ತೊಂದು ರಾಜಾತಿಥ್ಯ ಕೇಸ್‌ಗೆ ಪರಪ್ಪನ ಅಗ್ರಹಾರ ಜೈಲು ಸುದ್ದಿಯಾಗಿದೆ.

ವಿಕೃತ ಕಾಮಿ ಉಮೇಶ್ ರೆಡ್ಡಿ, ಗೋಲ್ಡ್ ಸ್ಮಗ್ಲಿಂಗ್ ಕೇಸ್‌ನಲ್ಲಿ ಬಂಧನವಾಗಿರುವ ನಟಿ ರನ್ಯಾರಾವ್ ಪ್ರಿಯಕರ ತರುಣ್‌ರಾಜ್ ಮಾತ್ರವಲ್ಲದೆ, ಐಸಿಸ್ ಉಗ್ರನೂ ಪರಪ್ಪನ ಅಗ್ರಹಾರ ಜೈಲಿನಲ್ಲಿ ಬಿಂದಾಸ್ ಲೈಫ್ ನಡೆಸುತ್ತಿರುವುದು ಬೆಳಕಿಗೆ ಬಂದಿದೆ.

ವಿಕೃತ ಕಾಮಿಯ ಬಿಂದಾಸ್ ಲೈಫ್: ಅತ್ಯಾಚಾರ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿರುವ ವಿಕೃತ ಕಾಮಿ ಉಮೇಶ್‌ರೆಡ್ಡಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಬಿಂದಾಸ್ ಲೈಫ್ ನಡೆಸುತ್ತಿದ್ದಾನೆ. ವಿಕೃತ ಕಾಮಿಗೆ ಜೈಲಿನಲ್ಲಿ ಟಿವಿ, ಮೊಬೈಲ್ ಸೌಲಭ್ಯ ನೀಡಲಾಗಿದೆ. ಜೊತೆಗೆ ತನಗೆ ಬೇಕಾದ ಅಡುಗೆ ಮಾಡಿಕೊಳ್ಳಲು ಜೈಲಿನೊಳಗೇ ಅಧಿಕಾರಿಗಳು ಸೌಲಭ್ಯ ಕಲ್ಪಿಸಿದ್ದಾರೆ. ಉಮೇಶ್ ರೆಡ್ಡಿ ಟಿವಿ ನೋಡುತ್ತಾ, ಆಂಡ್ರಾಯ್ಡ್ ಮತ್ತು ಕೀಪ್ಯಾಡ್ ಮೊಬೈಲ್‌ಗಳನ್ನಿಟ್ಟುಕೊಂಡು ಮಾತನಾಡುತ್ತಿರುವ ವೀಡಿಯೊ ವೈರಲ್ ಆಗಿದೆ. ಇದರಿಂದ ಸೌಲಭ್ಯ ಕೊಟ್ಟ ಜೈಲಾಧಿಕಾರಿಗಳಿಗೆ ಸಂಕಷ್ಟ ಎದುರಾಗಿದೆ.

ರನ್ಯಾ ರಾವ್ ಪ್ರಿಯಕರನಿಗೂ ಹೈಫೈ ಟ್ರೀಟ್ಮೆಂಟ್: ಉಮೇಶ್‌ರೆಡ್ಡಿ ಅಷ್ಟೇ ಅಲ್ಲ, ಗೋಲ್ಡ್ ಸ್ಮಗ್ಲಿಂಗ್ ಕೇಸ್‌ನಲ್ಲಿ ಬಂಧನವಾಗಿರುವ ರನ್ಯಾ ರಾವ್ ಪ್ರಿಯಕರ, ತೆಲುಗು ಸಿನಿಮಾ ನಟ ತರುಣ್‌ರಾಜ್ ಕೂಡ ಬಿಂದಾಸ್ ಲೈಫ್ ಲೀಡ್ ಮಾಡುತ್ತಿದ್ದಾನೆ. ಮೊಬೈಲ್ ಜೊತೆಗೆ ಟಿವಿ ಸೌಲಭ್ಯ ಕಲ್ಪಿಸಿರುವುದು ವೈರಲ್ ಆಗಿರುವ ವಿಡಿಯೋದಿಂದ ಗೊತ್ತಾಗಿದೆ.



ಜುಹಾದ್ ಹಮೀದ್ ಶಕೀಲ್, ಉಮೇಶ್ ರೆಡ್ಡಿ

ಮೋಸ್ಟ್ ವಾಂಟೆಡ್ ಉಗ್ರನಿಗೂ ರಾಜಾತಿಥ್ಯ: ಬೆಂಗಳೂರಿನ ತಿಲಕ್‌ನಗರದವನಾದ ಜುಹಾದ್ ಹಮೀದ್ ಶಕೀಲ್ ಮೂಲಭೂತವಾದಿ ಮನಸ್ಥಿತಿಯುಳ್ಳ ಮುಸ್ಲಿಂ ಯುವಕರನ್ನು ಐಸಿಸ್‌ಗೆ ನೇಮಕ ಮಾಡುತ್ತಿದ್ದ. ಸಿರಿಯಾದ ಐಸಿಸ್ ಉಗ್ರರ ಜತೆ ನಿರಂತರವಾಗಿ ಸಂಪರ್ಕ ಹೊಂದಿದ್ದ ಶಕೀಲ್‌ನನ್ನು 2020ರಲ್ಲಿ ಸೌದಿ ಅರೇಬಿಯಾದಲ್ಲಿ ಬಂಧಿಸಲಾಗಿತ್ತು. 2022ರಲ್ಲಿ ಸೌದಿಯಿಂದ ಭಾರತಕ್ಕೆ ಗಡೀಪಾರಾಗಿದ್ದ. ಸದ್ಯ ಕಳೆದ ಮೂರು ವರ್ಷಗಳಿಂದ ಪರಪ್ಪನ ಅಗ್ರಹಾರ ಜೈಲಲ್ಲಿ ಶಕೀಲ್ ಶಿಕ್ಷೆ ಅನುಭವಿಸುತ್ತಿದ್ದಾನೆ. ಈತನಿಗೂ ರಾಜಾತಿಥ್ಯ ದೊರೆಯುತ್ತಿರುವುದು ಬಯಲಾಗಿದೆ. ಪರಪ್ಪನ ಅಗ್ರಹಾರ ಜೈಲಲ್ಲಿ ಈತನಿಗೆ ಸ್ಮಾರ್ಟ್ ಫೋನ್ ಭಾಗ್ಯ ಕರುಣಿಸಲಾಗಿದೆ. ಈತ ಜೈಲಿನಲ್ಲಿ ರಾಜಾರೋಷವಾಗಿ ಫೋನ್ ಬಳಕೆ ಮಾಡುತ್ತಿರುವುದು ಕಂಡುಬಂದಿದೆ. ಇದರೊಂದಿಗೆ, ಪರಪ್ಪನ ಅಗ್ರಹಾರ ಜೈಲು ಭಯೋತ್ಪಾದಕರ ಸ್ವರ್ಗವಾಗಿ ಪರಿಣಮಿಸಿದೆಯೇ ಎಂಬ ಅನುಮಾನವೂ ಹುಟ್ಟಿಕೊಂಡಿದೆ.

ಒಟ್ಟಿನಲ್ಲಿ ಕೈದಿಗಳ ರಾಜಾತಿಥ್ಯಕ್ಕೆ ಹೆಸರುವಾಸಿಯಾಗಿರುವ ಪರಪ್ಪನ ಅಗ್ರಹಾರ ಜೈಲಿನ ಅಧಿಕಾರಿಗಳು, ಸಿಬ್ಬಂದಿಗೆ ಈಗ ಸಂಕಷ್ಟ ಎದುರಾಗಿದ್ದು, ಮುಂದಿನ ಕ್ರಮ ಕಾದುನೋಡಬೇಕಿದೆ.

ಈ ದೃಶ್ಯಗಳು ಬಹಿರಂಗವಾಗುತ್ತಿದ್ದಂತೆ ಸಂಬಂಧಪಟ್ಟ ಕೈದಿಗಳ ಬ್ಯಾರಕ್‌ಗಳನ್ನು ಪರಿಶೀಲನೆ ನಡೆಸುವಂತೆ ಜೈಲಾಧಿಕಾರಿಗಳಿಗೆ ಕಾರಾಗೃಹ ಹಾಗೂ ಸುಧಾರಣಾ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಬಿ.ದಯಾನಂದ್ ಸೂಚಿಸಿದ್ದಾರೆ.

ಕೈದಿಗಳಿಗೆ ವಿಶೇಷ ಆತಿಥ್ಯ ದೊರೆಯುತ್ತಿರುವ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅದರ ಬಗ್ಗೆ ನನಗೆ ಗೊತ್ತಿಲ್ಲ ಮಾಹಿತಿ ಪಡೆದುಕೊಂಡು ಮಾತನಾಡುತ್ತೇನೆ ಎಂದು ತಿಳಿಸಿದ್ದಾರೆ.

ಒಳ ಮೀಸಲಾತಿ ಗೊಂದಲ ನಿವಾರಣೆಗೆ ಸಹಕರಿಸಲು ಕೇಂದ್ರ ಸಚಿವ ಕುಮಾರಸ್ವಾಮಿಗೆ ವಕೀಲರ ವೇದಿಕೆ ಮನವಿ

ಮೈಸೂರು, ನ.8– ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಆದೇಶದಲ್ಲಿನ ಗೊಂದಲ ಸರಿಪಡಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಮನವಿ ಸಲ್ಲಿಸಿದೆ.

ಶುಕ್ರವಾರ ಮೈಸೂರಿಗೆ ಭೇಟಿ ನೀಡಿದ್ದ ಸಚಿವರನ್ನು ಮಾಜಿ ಶಾಸಕ ಅಶ್ವಿನ್ ಕುಮಾರ್ ನಿವಾಸದಲ್ಲಿ ಭೇಟಿ ಮಾಡಿದ ವಕೀಲರ ತಂಡ, ಕಳೆದ 35 ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿರುವ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳಿಗೆ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ತಮ್ಮ ತಂದೆ ಹೆಚ್.ಡಿ.ದೇವೇಗೌಡರು ಹಾಗೂ ನಿಮ್ಮ ಪ್ರಯತ್ನ ಮಹತ್ವದ್ದಾಗಿದ್ದು, ಇದೀಗ ಒಳ ಮೀಸಲಾತಿ ಸಂಬಂಧಿತ ಗೊಂದಲದ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಿ, ಪರಿಹಾರ ಕ್ರಮಕ್ಕೆ ಒತ್ತಾಯಿಸಬೇಕೆಂದು ಕೋರಿತು.



ಪರಿಶಿಷ್ಟ ಜಾತಿ ಮೀಸಲಾತಿ ಜಾರಿಯಲ್ಲಿನ ಗೊಂದಲ ಪರಿಹರಿಸಲು ಸಹಕರಿಸುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ನೇತೃತ್ವದಲ್ಲಿ ಶುಕ್ರವಾರ ಮೈಸೂರಿನಲ್ಲಿ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮನವಿ ಸಲ್ಲಿಸಿದ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್. ಅರುಣ್ ಕುಮಾರ್, 'ಕರ್ನಾಟಕ ರಾಜ್ಯ 25–08–2025 ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಆದೇಶ ದೊಡ್ಡಗೊಂದಲ ಸೃಷ್ಟಿ ಮಾಡಿದೆ. ಈ ಆದೇಶ ಮಾದಿಗ ಸಮಾಜಕ್ಕೆ ಮರಣಶಾಸನ ಆಗಿದೆ. ಆದಿ ಕರ್ನಾಟಕ(ಎಕೆ), ಆದಿ ದ್ರಾವಿಡ(ಎಡಿ) ಹಾಗೂ ಆದಿ ಆಂಧ್ರ(ಎಎ) ಜಾತಿ ಪ್ರಮಾಣ ಪತ್ರ ಹೊಂದಿರುವವರು ಮಾದಿಗ ಸಮಾಜದ ಗುಂಪಿನಲ್ಲಿಯೂ ಅನುಕೂಲ ಪಡೆದುಕೊಳ್ಳಲು ಈ ಆದೇಶ ಅವಕಾಶ ಮಾಡಿಕೊಟ್ಟಿದೆ. ಹಾಗಾಗಿ ಆಯಾಯ ಸಮಾಜಕ್ಕೆ ಸಿಗಬೇಕಾದ ಅನುಕೂಲಗಳನ್ನು ರಕ್ಷಿಸುವ ನಿಟ್ಟಿನಲ್ಲಿ ತಾವು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕ ಅಶ್ವಿನ್‌ಕುಮಾರ್, ವೇದಿಕೆಯ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ಹಿರಿಯ ವಕೀಲ ಎಂ.ಆರ್.ಸುರೇಂದ್ರ ಕುಮಾರ್, ಉಪಾಧ್ಯಕ್ಷ ಶಿವಕುಮಾರ್, ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಕಣ್ಣಿಗೆ ಖಾರದಪುಡಿ ಎರಚಿ ಮಹಿಳೆ ಸರ ಅಪಹರಿಸಿದ್ದ ಆರೋಪಿ ಸೆರೆ

ಮೈಸೂರು, ನ.8 (ಆರ್‌ಕೆ)– ಕಣ್ಣಿಗೆ ಖಾರದ ಪುಡಿ ಎರಚಿ ಮಹಿಳೆಯಿಂದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿಯನ್ನು ಆಲನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಚಾಮರಾಜನಗರ ಜಿಲ್ಲೆ ಹಾಲತ್ತೂರು ಗ್ರಾಮದ ರಾಜೇಶ್ ನಾಯಕ ಬಂಧಿತ ಆರೋಪಿಯಾಗಿದ್ದು, ಆತನಿಂದ 2 ಲಕ್ಷ ರೂ ಮೌಲ್ಯದ 20 ಗ್ರಾಂನ ಮಾಂಗಲ್ಯ ಸರವನ್ನು ವಶಪಡಿಸಿಕೊಂಡಿದ್ದಾರೆ. ಅ.18ರಂದು ಬೆಳಗ್ಗೆ 9 ಗಂಟೆಯಲ್ಲಿ ಮೈಸೂರಿನ ಆಲನಹಳ್ಳಿಯ ಗಿರಿದರ್ಶಿನಿ ಬಡಾವಣೆಯ ಚಾಮುಂಡೇಶ್ವರಿ ಬ್ಲಾಕ್ ನಿವಾಸಿ ಸೌಮ್ಯ ಎಂಬುವರು ಸ್ಕೂಟರ್‌ನಲ್ಲಿ ಮಕ್ಕಳನ್ನು ಶಾಲೆಗೆ ಬಿಟ್ಟು ಲಲಿತಾದ್ರಿ ಪುರದ ಕಡೆಯಿಂದ ಗಿರಿದರ್ಶಿನಿ ಬಡಾವಣೆಗೆ ವಾಪಸ್ಸಾಗುವಾಗ ಅವರ ಕಣ್ಣಿಗೆ ಖಾರದ ಪುಡಿ ಎರಚಿ, ಅವರ ಕೊರಳಿನಲ್ಲಿದ್ದ 45 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದನಾದರೂ ಸೌಮ್ಯ ಅವರು ಸರವನ್ನು ಕಟ್ಟಿಯಾಗಿ ಹಿಡಿದುಕೊಂಡ ಕಾರಣ ಅದರ ಒಂದು ಭಾಗ ಕಳ್ಳನ ಪಾಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಜಿ.ಎಸ್. ಸ್ವರ್ಣ ಅವರು ತನಿಖೆ ಕೈಗೊಂಡಿದ್ದರು. ಅ.26 ರಂದು ಬೆಳಿಗ್ಗೆ 8 ಗಂಟೆ ವೇಳೆಗೆ ಲಲಿತಾದ್ರಿಪುರ ಗುಡ್ಡದಿಂದ, ಲಲಿತಾದ್ರಿಪುರ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿ ರಾಜೇಶ್ ನಾಯಕನನ್ನು ಬಂಧಿಸಿ ಆತನಿಂದ ಚಿನ್ನದ ಸರವನ್ನು ಪೋಲಿಸರು ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಕೆ.ಎಸ್.ಸುಂದರ್ ರಾಜ್, ಎಸಿಪಿ ಎ.ರಾಜೇಂದ್ರ ಅವರ ಮಾರ್ಗದರ್ಶನದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಸ್ವರ್ಣ, ಸಬ್‌ಇನ್ಸ್‌ಪೆಕ್ಟರ್‌ಗಳಾದ ರಮೇಶ್, ಎಂ.ಎಸ್. ನಿತ್ಯಾನಂದ, ಸಿಬ್ಬಂದಿಗಳಾದ ಪಿ. ಚೇತನ್, ಎಂ. ಅಭಿಷೇಕ್, ಕಿರಣ್ ರಾಥೋಡ್, ಸಂತೋಷ್ ಪವಾರ್, ಮಂಜುನಾಥ್ ಗದಗೈಗೋಳ, ಮಲ್ಲಿಕಾರ್ಜುನ, ಕುಮಾರ್ ಹಾಗೂ ಪ್ರದೀಪ್ ಕುಮಾರ್ ಅವರು ಪಾಲ್ಗೊಂಡಿದ್ದರು.

ಕೆಜಿ ಕೊಪ್ಪಲು ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಕುಂಭಾಭಿಷೇಕ

ಇಂದು ಅನ್ನ ಸಂತರ್ಪಣೆ

ಮೈಸೂರು, ನ.8(ಎಸ್‌ಪಿಎನ್)–ಮೈಸೂರು ಕನ್ನೇಗೌಡ(ಕೆಜಿ)ನ ಕೊಪ್ಪಲಿನ ಶ್ರೀ ಮಹಾಗಣಪತಿ, ಶ್ರೀ ಸಿದ್ದಪ್ಪಾಜಿ ಹಾಗೂ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ 15ನೇ ಕುಂಭಾಭಿಷೇಕ ಮಹೋತ್ಸವವು ವಿವಿಧ ಧಾರ್ಮಿಕ ಕಾರ್ಯಗಳೊಂದಿಗೆ ಶನಿವಾರ ಆರಂಭಗೊಂಡಿತು.



ಶನಿವಾರ ಗೋಧೂಳಿ ಲಗ್ನದಲ್ಲಿ ಅಗ್ರತೀರ್ಥ ಸಂಗ್ರಹ, ಯಾಗಶಾಲಾ ಪ್ರವೇಶ, ಗಣಪತಿ ಹೋಮ, ನವಗ್ರಹ ಪೂಜೆ, ಪಂಚಗವ್ಯ ಸಾಧನ, ಸಂಪ್ರೋಕ್ಷಣೆ, ಮೃತ್ಯುಂಜಯ ಹೋಮ ಹಾಗೂ ಪ್ರಧಾನ ಕಳಸ ಸ್ಥಾಪನೆ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಗಳು ಇಂದು ಬೆಳಗ್ಗೆಯಿಂದಲೇ ಆರಂಭಗೊಂಡಿವೆ ಎಂದು ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಅನ್ನ ಸಂತರ್ಪಣೆ: ಭಾನುವಾರ ಬೆಳಗ್ಗೆ 9.30ಕ್ಕೆ ಪೂರ್ಣಾಹುತಿ 10.30ಕ್ಕೆ ಧನುರ್ ಲಗ್ನದಲ್ಲಿ ಕುಂಭಾಭಿಷೇಕ ಅಲಂಕಾರ, ಮಹಾ ಮಂಗಳಾರತಿ ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ ವಿನಿಯೋಗ ಅನ್ನ ಸಂತರ್ಪಣೆ ಇರಲಿದೆ.

ಸಿಎಂ, ಡಿಸಿಎಂ, ಸಚಿವರ ಬಗ್ಗೆ ಅವಹೇಳನಕಾರಿ ಎಡಿಟಿಂಗ್ ವೀಡಿಯೊ ಹಂಚಿಕೆ: ದಾವಣಗೆರೆ ಮೂಲದ ಯುವಕ ಅರೆಸ್ಟ್

ಮೈಸೂರು, ನ.8– ಸಾಮಾಜಿಕ ಜಾಲತಾಣದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಚಿವರ ಬಗ್ಗೆ ಅವಹೇಳನಕಾರಿಯಾದ ಎಡಿಟಿಂಗ್ ವೀಡಿಯೊ ಹಂಚಿಕೊಂಡಿದ್ದ ದಾವಣಗೆರೆ ಮೂಲದ ಯುವಕನನ್ನು ಮೈಸೂರು ಜಿಲ್ಲಾ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

ದಾವಣಗೆರೆ ನಗರದ ಡಿ.ಎಂ.ರಾಜೇಶ್(25) ಬಂಧಿತನಾಗಿದ್ದು, ಈತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ನ್ಯಾಯಾಧೀಶರ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇನ್ಸ್ಟಾಗ್ರಾಮ್‌ನಲ್ಲಿ ಅಪರಿಚಿತನೊಬ್ಬ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ವಿಚಿತ್ರವಾಗಿ ಚಿತ್ರಿಸಿ, ವಿಡಿಯೋ ಎಡಿಟಿಂಗ್ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಸಾಮಾಜಿಕ ಜಾಲತಾಣದಲ್ಲಿ ಹಂಚುವ ಮೂಲಕ ಸಮಾಜದ ಶಾಂತಿ ಕದಡುವ ದುಷ್ಕೃತ್ಯವೆಸಗುತ್ತಿದ್ದಾನೆ ಎಂದು ಮೈಸೂರು ಬಂಡೀಪಾಳ್ಯ ನಿವಾಸಿಯಾದ ಕೆಪಿಸಿಸಿ ಸಂಯೋಜಕ ವಿಜಯಕುಮಾರ್ ಜಿಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ, ಎಎಸ್ಪಿಗಳಾದ ಸಿ.ಮಲ್ಲಿಕ್ ಹಾಗೂ ಎಲ್.ನಾಗೇಶ್ ಮಾರ್ಗದರ್ಶನ ಮತ್ತು ಮೈಸೂರು ಜಿಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಎಸಿಪಿ ಆರ್. ಶ್ರೀಕಾಂತ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಎಸ್.ಪಿ.ಸುನೀಲ್, ಸಬ್ ಇನ್ಸ್‌ಪೆಕ್ಟರ್ ಸುರೇಶ್ ಬೋಪಣ್ಣ, ಸಿಬ್ಬಂದಿ ಹೆಚ್.ವಿ.ರಂಗಸ್ವಾಮಿ ತಂಡ ಆರೋಪಿಯನ್ನು ಪತ್ತೆ ಹಚ್ಚಿ, ದಾವಣಗೆರೆಯಲ್ಲಿ ಬಂಧಿಸಿದೆ.

ದೆಹಲಿಯ ಮೆಟ್ರೋ ನಿಲ್ದಾಣದ ಬಳಿ ಅಗ್ನಿ ಅವಘಡ; ಓರ್ವ ಸಾವು

ನವದೆಹಲಿ: ದೆಹಲಿಯ ರೋಹಿಣಿಯಲ್ಲಿರುವ ರಿಥಾಲಾ ಮೆಟ್ರೋ ನಿಲ್ದಾಣದ ಬಳಿ ಸುಮಾರು 500 ಗುಡಿಸಲುಗಳಿಗೆ ಬೆಂಕಿ ತಗುಲಿ, ಒಬ್ಬ ವ್ಯಕ್ತಿ ಮೃತಪಟ್ಟು ಮತ್ತೊಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ದೆಹಲಿ ಅಗ್ನಿಶಾಮಕ ಸೇವೆಗಳು ತಿಳಿಸಿವೆ. ನಿವಾಸಿಗಳಲ್ಲಿ ಒಬ್ಬರಾದ ಮುನ್ನಾ ಬೆಂಕಿಗೆ ಬಲಿಯಾದರೆ, ರಾಜೇಶ್ (30) ಎಂದು ಗುರುತಿಸಲಾದ ಮತ್ತೊಬ್ಬ ವ್ಯಕ್ತಿ ಸುಟ್ಟ ಗಾಯಗಳಿಂದ ಬಳಲುತ್ತಿದ್ದಾರೆ. ಹಲವಾರು ಅಗ್ನಿಶಾಮಕ ದಳಗಳು ಮತ್ತು ಅಗ್ನಿಶಾಮಕ ರೋಬೋಟ್‌ಗಳನ್ನು ಸ್ಥಳಕ್ಕೆ ರವಾನಿಸಲಾಗಿದೆ ಎಂದು DFS ತಿಳಿಸಿದೆ.

ಸಂವಿಧಾನಿಕ ಸಂಸ್ಥೆಗಳ ಮೌಲ್ಯವನ್ನು ಪ್ರಧಾನಿ ಹಾಳು ಮಾಡಿದ್ದಾರೆ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಆರೋಪ

ಬೆಂಗಳೂರು, ನ.8(ಕೆಎಂಶಿ)– ನರೇಂದ್ರ ಮೋದಿ ದೇಶದ ಪ್ರಧಾನಿ ಆದ ಬಳಿಕ ಸಂವಿಧಾನಿಕ ಸಂಸ್ಥೆಗಳ ಮೌಲ್ಯ ಹಾಳಾಗಿದ್ದು, ಮುಖ್ಯ ಚುನಾವಣಾ ಆಯೋಗ, ಸಿಬಿಐ ಕೇಂದ್ರ ಸರ್ಕಾರದ ಅಡಿಯಾಳಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಆರೋಪಿಸಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ವ್ಯವಸ್ಥಿತ ಷಡ್ಯಂತ್ರ ಮತ್ತು ಕಾರ್ಯತಂತ್ರದ ಮೂಲಕ ಮತಗಳ್ಳತನ ನಡೆದಿದೆ ಎಂದು ದಾಖಲೆಗಳ ಸಹಿತ ವಿವರಿಸಿದರು. ಬಿಜೆಪಿಯವರು ಸುಳ್ಳಿನಲ್ಲಿ ಮಾತ್ರವಲ್ಲದೆ, ಮತಗಳ್ಳತನದಲ್ಲೂ ನಿಸ್ಸೀಮರು ಎನ್ನುವುದು ಸಾಬೀತಾಗಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯ ಕಾಪಾಡಲು ಕಾಂಗ್ರೆಸ್ ಹೋರಾಟ ನಡೆಸಲಿದೆ.

ಮತಗಳ್ಳತನದ ಮೂಲಕ ಅನೇಕ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿರುವುದು ಸ್ಪಷ್ಟವಾಗಿದೆ. ಲೋಕಸಭೆಯಲ್ಲಿನ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನಿರಂತರ ಅಧ್ಯಯನ, ತಪಾಸಣೆಯಿಂದ ದಾಖಲೆ ಸಮೇತ ಮತಗಳ್ಳತನವನ್ನು ದೇಶದ ಜನರಿಗೆ ಮನವರಿಕೆ ಮಾಡಿಸಿದ್ದಾರೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ನಡೆದ ಮತಗಳ್ಳತನವನ್ನು ಸ್ಪಷ್ಟ ದಾಖಲೆ ಸಮೇತ ಬಯಲಿಗೆಳೆದು ದೇಶದ ಜನರ ಮುಂದಿಟ್ಟಿದ್ದಾರೆ. ಇಷ್ಟಾದರೂ ಚುನಾವಣಾ ಆಯೋಗ ಪಕ್ಷ ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸುತ್ತಿಲ್ಲ. ದಾಖಲೆಗಳಿಗೂ ಉತ್ತರ ನೀಡುತ್ತಿಲ್ಲ. ನಮ್ಮ ಸಂವಿಧಾನ ಮುಕ್ತ ಮತ್ತು ಪಾರದರ್ಶಕ ಚುನಾವಣಾ ವ್ಯವಸ್ಥೆ ರೂಪಿಸಿದೆ. ಸಂವಿಧಾನದ ಮೌಲ್ಯ ಉಳಿಯಬೇಕಾದರೆ ಸ್ವತಂತ್ರ ಚುನಾವಣಾ ಪ್ರಕ್ರಿಯೆ ನಡೆಯುವಂತೆ ನೋಡಿಕೊಳ್ಳುವುದು ಎಲ್ಲಾ ಪಕ್ಷಗಳ ಜವಾಬ್ದಾರಿ.



ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಕಾಪಾಡಲು ಕಾಂಗ್ರೆಸ್‌ನಿಂದ ಕೋಟಿಗೂ ಅಧಿಕ ಸಹಿ ಸಂಗ್ರಹ ಮಾಡಲಾಗಿದ್ದು, ಚುನಾವಣಾ ಆಯೋಗ ಮತ್ತು ರಾಷ್ಟ್ರಪತಿ ಅವರಿಗೆ ಅರ್ಪಿಸಲಾಗುವುದು. ಸಹಿ ಸಂಗ್ರಹ ಅಭಿಯಾನದಲ್ಲಿ ಕರ್ನಾಟಕದಿಂದ 1,12,40,000 ಸಹಿ ಸಂಗ್ರಹಿಸಲಾಗಿದೆ, ಎಲ್ಲಾ ವಿಧಾನಸಭಾ ಕ್ಷೇತ್ರ ಹಾಗೂ ಜಿಲ್ಲೆಗಳಿಂದ ಸಹಿ ಸಂಗ್ರಹಿಸಿದ್ದು, ಪಕ್ಷದ ಕಾರ್ಯಕರ್ತರು ಪ್ರಾಮಾಣಿಕ ಕೆಲಸ ಮಾಡಿದ್ದಾರೆ, ಬೂತ್‌ವಾರು ಸಹಿ ಸಂಗ್ರಹಿಸಲಾಗಿದೆ, ಅಲ್ಲದೆ, ಜನರಲ್ಲಿ ಮತಗಳ್ಳತನ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದರು.

ಸಹಿ ಸಂಗ್ರಹ ಅರ್ಜಿಗಳನ್ನು ವಿಮಾನದಲ್ಲಿ ದೆಹಲಿಗೆ ತಲುಪಿಸಲಾಗುವುದು, ನ.25ಕ್ಕೆ ಅಂದರೆ, ಮೂರನೇ ವಾರದಲ್ಲಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸುವ ಚಿಂತನೆ ಇದೆ. ಮುಂಬರುವ ಪಾಲಿಕೆ ಚುನಾವಣೆಗಳನ್ನು ಮತಪತ್ರಗಳ ಮೂಲಕ ನಡೆಸಲು ಚಿಂತನೆ ನಡೆದಿದೆ ಎಂದರು. ರಾಹುಲ್ ಗಾಂಧಿ ನೇತೃತ್ವದಲ್ಲಿ ದೇಶದಾದ್ಯಂತ ಪ್ರಜಾಪ್ರಭುತ್ವ, ಸಂವಿಧಾನ ಉಳಿಸಿ, ಮತದಾನದ ಹಕ್ಕು ಕಾಪಾಡಲು ಸಹಿ ಸಂಗ್ರಹದ ಮೂಲಕ ಬೃಹತ್ ಆಂದೋಲನ ನಡೆಸಲಾಗುತ್ತಿದೆ.

ಚುನಾವಣಾ ಪ್ರಕ್ರಿಯೆಯ ಸಂಪೂರ್ಣ ಜವಾಬ್ದಾರಿ ಮುಖ್ಯಚುನಾವಣಾ ಆಯೋಗದ್ದಾಗಿದೆ. ಉತ್ತರ ಪ್ರದೇಶ, ಬಿಹಾರ, ದೆಹಲಿ, ಜಾರ್ಖಂಡ್ ರಾಜ್ಯಗಳ ಜನರ ಮೊಬೈಲ್‌ನಿಂದ ಅರ್ಜಿ ಸಲ್ಲಿಕೆಯಾಗಿ ಮತದಾರ ಪಟ್ಟಿಯಿಂದ ಹೆಸರು ರದ್ದಾದ ಬಗ್ಗೆ 151 ಮತದಾರರು ದೂರು ನೀಡಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಅಭ್ಯರ್ಥಿ ಸುಭಾಷ್ ಗುತ್ತೇದಾರ್ ಮತದಾರರ ಪಟ್ಟಿ ಸೇರಿದಂತೆ ಅನೇಕ ದಾಖಲೆ ಸುಟ್ಟು ಹಾಕಿದ ಮಾಹಿತಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ, ಈ ಪ್ರಕರಣದಲ್ಲಿ ಒಂದು ಮತ ಡಿಲೀಟ್‌ಗೆ 80 ರೂ. ನೀಡಲಾಗಿದೆ ಎಂಬ ಅಂಶವೂ ಬೆಳಕಿಗೆ ಬಂದಿದೆ.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ರಾಹುಲ್ ಗಾಂಧಿ ಬೆಳಕು ಚೆಲ್ಲಿದ್ದು, ಸುಮಾರು 25 ಲಕ್ಷ ಮತಗಳು ಅಕ್ರಮವಾಗಿವೆ ಎಂದಿದ್ದಾರೆ. ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸುವುದು ಅವರ ಹೋರಾಟದ ಚಿಂತನೆಯಾಗಿದ್ದು, ಕರ್ನಾಟಕದಿಂದ ಹೋರಾಟ ಆರಂಭವಾಗಿದೆ.

ಬಿಹಾರ ಚುನಾವಣೆಯಲ್ಲಿ ಅಲ್ಲಿನ ಜನತೆ ಬದಲಾವಣೆ ಬಯಸಿ, ಸಂವಿಧಾನ ಹಾಗೂ ಪ್ರಜಾಪ್ರಭುತ್ವ ರಕ್ಷಣೆಗೆ ನಮಗೆ ಸಂಪೂರ್ಣ ಬಹುಮತ ನೀಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ರಾಜ್ಯದಲ್ಲಿ ಪಕ್ಷದ 3 ಸಾವಿರ ಕಾರ್ಯಕರ್ತರಿಗೆ ನಿಗಮ, ಮಂಡಳಿಗಳಲ್ಲಿ ಅಧಿಕಾರ ನೀಡಲಾಗಿದೆ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 15 ಜನರಿಗೆ ಗ್ಯಾರಂಟಿ ಸಮಿತಿ ಜವಾಬ್ದಾರಿ, ಪ್ರತಿ ಕ್ಷೇತ್ರಗಳಲ್ಲಿ 60 ಜನರ ನಾಮನಿರ್ದೇಶನ ಮಾಡಿದ್ದು, ರಾಜ್ಯ ಮಟ್ಟದಲ್ಲಿ ನಿಗಮ, ಮಂಡಳಿಗಳಲ್ಲಿನ 600 ಸ್ಥಾನಗಳಿಗೆ ಇನ್ನೊಂದು ವಾರದಲ್ಲಿ ನೇಮಕ ಮಾಡಲಾಗುವುದು ಎಂದರು.

ಭಾರತ-ಆಸ್ಟ್ರೇಲಿಯಾ ಟಿ20 ಸರಣಿ

ಕೊನೆ ಪಂದ್ಯಕ್ಕೆ ವರುಣ ಅಡ್ಡಿಯಾದರೂ ಸರಣಿ ಕೈವಶ ಮಾಡಿಕೊಂಡ ಭಾರತ



ಬ್ರಿಸ್ಬೇನ್, ನ.8(ವಿವಿಹೆಚ್)– ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಐದನೇ ಮತ್ತು ಕೊನೆಯ ಟಿ20 ಪಂದ್ಯ ಮಳೆಯಿಂದ ರದ್ದಾಗಿದೆ. ಇದರಿಂದಾಗಿ ಭಾರತ ತಂಡ 2–1 ಅಂತರದಿಂದ ಸರಣಿಯನ್ನು ತನ್ನದಾಗಿಸಿಕೊಂಡಿದೆ.

ಇಲ್ಲಿನ ದಿ ಗಬ್ಬಾ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಅಂತಿಮ ಟಿ20 ಪಂದ್ಯ ಮಳೆಯಿಂದ ರದ್ದಾಯಿತು. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಭಾರತ ತಂಡ ಅಭಿಷೇಕ್ ಶರ್ಮಾ ಔಟಾಗದೆ 23(13) ಹಾಗೂ ಶುಬ್‌ಮನ್ ಗಿಲ್ ಅಜೇಯ 29(16) ರನ್ ಗಳ ಸಹಾಯದಿಂದ 4.5 ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೇ 52 ರನ್ ಗಳಿಸಿದ್ದ ವೇಳೆ ಆಟಕ್ಕೆ ಮಳೆ ಅಡ್ಡಿಯಾಯಿತು. ಹಾಗಾಗಿ ಪಂದ್ಯವನ್ನು ರದ್ದುಗೊಳಿಸಲಾಯಿತು.

ಐದು ಪಂದ್ಯಗಳಲ್ಲಿ 2 ಪಂದ್ಯಗಳು ಮಳೆಯಿಂದ ರದ್ದಾಗಿ, ಉಳಿದ 3 ಪಂದ್ಯಗಳಲ್ಲಿ ಆಸೀಸ್ 1 ಪಂದ್ಯ ಗೆದ್ದರೆ, ಭಾರತ 2ರಲ್ಲಿ ಗೆಲುವು ದಾಖಲಿಸಿತು. ಆ ಮೂಲಕ ಸರಣಿ ಭಾರತ ಕೈವಶವಾಯಿತು.

ಟೂರ್ನಿಯಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಟೀಂ ಇಂಡಿಯಾ ಬ್ಯಾಟರ್ ಅಭಿಷೇಕ್ ಶರ್ಮಾ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಭಾರತ 3 ಏಕದಿನ ಮತ್ತು 5 ಟಿ20 ಪಂದ್ಯಗಳ ಸರಣಿಗಾಗಿ ಆಸೀಸ್ ಪ್ರವಾಸ ಕೈಗೊಂಡಿತ್ತು. ಏಕದಿನ ಸರಣಿಯಲ್ಲಿ 2–1 ಅಂತರದಿಂದ ಸೋತ ಭಾರತ, ಟಿ20 ಸರಣಿಯನ್ನು 2–1 ಅಂತರದಿಂದ ಗೆದ್ದು ಬೀಗಿತು.

ಟೀಂ ಇಂಡಿಯಾ ಮುಂದಿನ ಸರಣಿ ದಕ್ಷಿಣ ಆಫ್ರಿಕಾ ವಿರುದ್ಧ: ಆಸೀಸ್ ಸರಣಿ ಮುಗಿಸಿ ತವರಿಗೆ ಮರಳಿರುವ ಭಾರತ ತಂಡ, ತನ್ನ ಮುಂದಿನ ಸರಣಿಯನ್ನು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ. ಈ ಟೂರ್ನಿಗೆ ಭಾರತವೇ ಆತಿಥ್ಯ ವಹಿಸಲಿದೆ.

ದಕ್ಷಿಣ ಆಫ್ರಿಕಾದ ಈ ಭಾರತ ಪ್ರವಾಸದಲ್ಲಿ ಟೆಸ್ಟ್, ಏಕದಿನ ಮತ್ತು ಟಿ20 ಸರಣಿಗಳನ್ನು ಇದೇ ನ.14 ರಿಂದ ಡಿ.19ರ ವರೆಗೆ ಮೂರು ಮಾದರಿಯ ಪಂದ್ಯಗಳು ನಡೆಯಲಿವೆ. ಇನ್ನು ಟೀಂ ಇಂಡಿಯಾ ಏಕದಿನ ತಂಡದಲ್ಲಿ ರೋಹಿತ್, ಕೊಹ್ಲಿ ಕಾಣಿಸಿಕೊಳ್ಳಲಿದ್ದಾರೆ.

ನವೆಂಬರ್ 14 ರಿಂದ ಟೂರ್ನಿ ಆರಂಭವಾಗಲಿದ್ದು, ಮೊದಲು ಟೆಸ್ಟ್ ಸರಣಿಯು ನ.14 ರಿಂದ ನ.26 ರವರೆಗೆ ನಡೆಯಲಿದೆ. ಇದರ ನಂತರ ನ.30 ರಿಂದ ಡಿ.6 ರವರೆಗೆ ಮೂರು ಪಂದ್ಯಗಳ ಏಕದಿನ ಸರಣಿ ನಡೆಯಲಿದೆ. ಅಂತಿಮವಾಗಿ ಎರಡೂ ತಂಡಗಳು ಐದು ಪಂದ್ಯಗಳ ಟಿ20 ಸರಣಿ ಆಡಲಿವೆ. ಈ ಟಿ20 ಸರಣಿ ಡಿ.9 ರಂದು ಪ್ರಾರಂಭವಾಗಿ ಡಿ.19 ರವರೆಗೆ ನಡೆಯಲಿದೆ.

ನಕ್ಕರೆ ಅದೇ ಸ್ವರ್ಗ

ಅಪ್ಪ : ಲೋ... ಮಗನೇ ಯಾರಿಗೂ ಹೆದರಬೇಡ. ನೀನು ಸಿಂಹದ ಮರಿ ಕಣೋ...

ಮಗ : ಹೌದಪ್ಪಾ, ಟೀಚರ್ ಹಾಗೇ ಹೇಳ್ತಾರೆ, ನೀನು ಯಾವುದೋ ಪ್ರಾಣಿಗೆ ಹುಟ್ಟಿರಬೇಕು ಅಂತಾ!

ಮೈಸೂರು ಮಿತ್ರ

ಭಾನುವಾರ, 9 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಂಬಿಕೆಯಲ್ಲಿಯೂ ಸಹ ಜಾಗರೂಕರಾಗಿರಬೇಕು. ಏಕೆಂದರೆ ಕೆಲವೊಮ್ಮೆ ನಮ್ಮ ಸ್ವಂತ ಹಲ್ಲುಗಳು ನಾಲಿಗೆಯನ್ನು ಕಚ್ಚಿಬಿಡುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣಿಗೆ ಹಟವಿರಬಾರದು, ಗಂಡಿಗೆ ಚಟವಿರಬಾರದು

ನಿಮ್ಮ ಪತ್ರಗಳು

■ ಕೆಆರ್‌ಎಸ್ ಒತ್ತುವರಿ ತೆರವುಗೊಳಿಸಿ, ಹೂಳು ತೆಗೆಸಿ



ಮಾನ್ಯರೆ,

ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ ಕೆಲವು ಪ್ರಭಾವಿ ವ್ಯಕ್ತಿಗಳು, ಕೆಆರ್‌ಎಸ್‌ಗೆ ಸೇರಿದ ಭೂಮಿಯನ್ನು ಒತ್ತುವರಿ ಮಾಡಿಕೊಂಡು ರೆಸಾರ್ಟ್‌ಗಳನ್ನು ಈಗಾಗಲೇ ನಿರ್ಮಾಣ ಮಾಡಿಕೊಂಡಿದ್ದಾರೆ. ಒತ್ತುವರಿಯಾಗಿರುವ ಕೆ.ಆರ್.ಎಸ್ ಅಣೆಕಟ್ಟೆಗೆ ಸೇರಿದ ಭೂಮಿಯನ್ನು ಸರ್ವೆ ಮಾಡಿ, ಗಡಿ ಕಲ್ಲುಗಳನ್ನು ನೆಟ್ಟು ಸರ್ಕಾರಕ್ಕೆ ವರದಿ ನೀಡುವಂತೆ ಮಂಡ್ಯ ಮತ್ತು ಮೈಸೂರು ಜಿಲ್ಲಾಧಿಕಾರಿಗಳಿಗೆ ಜಲಸಂಪನ್ಮೂಲ ಸಚಿವರಾದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆದೇಶ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ, ಇದು ಬಹಳ ವರ್ಷಗಳ ಹಿಂದೆಯೇ ನಡೆಯಬೇಕಿತ್ತು. ಸರ್ಕಾರ ಈಗಲಾದರೂ ಹೆಚ್ಚೆತ್ತುಕೊಂಡು ಈ ಕಾರ್ಯ ಕೈಗೊಂಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಧೈರ್ಯವನ್ನು ಮೆಚ್ಚಲೇಬೇಕು. ಏಕೆಂದರೆ ಕಳೆದ ಹತ್ತು ವರ್ಷಗಳ ಹಿಂದೆ ಕೆಆರ್‌ಎಸ್‌ನ ಒತ್ತುವರಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುವುದಾಗಿ ಹೇಳಿತ್ತು. ಆದರೆ ಕೆಲವು ಪ್ರಭಾವಿ ವ್ಯಕ್ತಿಗಳಿಗೆ ಮಣಿದು ಅದು ಕಾಗದದ ಮೇಲಷ್ಟೇ ಉಳಿಯಿತು, ಈ ಹಿನ್ನೀರಿನ ಪ್ರದೇಶದಲ್ಲಿರುವ ಗ್ರಾಮದ ರೈತರು ಕೆಆರ್‌ಎಸ್‌ಗೆ ಸೇರಿದ ಭೂಮಿಯಲ್ಲಿ ಅಂದರೆ ಹೊಳೆ ಬಂದು ಮುಳುಗಡೆ ಆಗುವ ಭೂಮಿಯಲ್ಲಿ ಪೂರ್ವ ಮುಂಗಾರು ಮಳೆ ಬಂದ ತಕ್ಷಣ, ಅಲಸಂದೆ, ಜೋಳ ಮತ್ತು ಎಳ್ಳು ಬೆಳೆಗಳನ್ನು ಬೆಳೆಯಲು ಭೂಮಿಯನ್ನು ಉಳುಮೆ ಮಾಡುವುದರಿಂದ ಕಾವೇರಿ ನೀರು ಇಲ್ಲಿ ಹರಿದು ಬಂದು ಕೆ.ಆರ್ ಎಸ್ ನ ಕಾಲು ಭಾಗದಷ್ಟು ಜಾಗ ಊಳಿನಿಂದ ತುಂಬಿಕೊಂಡಿದೆ, ಇದರಿಂದಾಗಿ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯವೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ, ಕೆಆರ್‌ಎಸ್‌ನ ಒತ್ತುವರಿ ಭೂಮಿ ಮತ್ತು ಈಗಾಗಲೇ ಜಲಾಶಯದಲ್ಲಿ ತುಂಬಿರುವ ಹೂಳನ್ನು ಈ ವರ್ಷದ ಬೇಸಿಗೆ ಕಾಲದಲ್ಲಿ ತೆಗೆಯುವ ಕೆಲಸವಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಅರಣ್ಯ ಇಲಾಖೆ ನಿರ್ಲಕ್ಷ್ಯಕ್ಕೆ ಇನ್ನೆಷ್ಟು ಬಲಿ

ಮಾನ್ಯರೆ,

ಕಳೆದ ಇಪ್ಪತ್ತು ದಿನಗಳಲ್ಲಿ ಮೈಸೂರು ಸುತ್ತಮುತ್ತಲಿನ ಕಾಡಂಚಿನ ಪ್ರದೇಶಗಳಲ್ಲಿ ಸಂಭವಿಸಿದ ಭೀಕರ ಹುಲಿ ದಾಳಿ ಘಟನೆಗಳು ಸಾರ್ವಜನಿಕರಲ್ಲಿ ತೀವ್ರ ಆತಂಕ ಮತ್ತು ಆಕ್ರೋಶವನ್ನು ಮೂಡಿಸಿವೆ. ಈ ದಾಳಿಗಳಲ್ಲಿ ಮೂವರು ಅಮಾಯಕರು ಪ್ರಾಣ ಕಳೆದುಕೊಂಡಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.



ಹುಲಿ ಸಂಚಾರದ ಬಗ್ಗೆ ದೂರುಗಳು ಬಂದಿದ್ದರೂ, ಸಕಾಲದಲ್ಲಿ ಬೋನು ಇಡದಿರುವುದು ಮತ್ತು ಗಸ್ತು ಹೆಚ್ಚಿಸದಿರುವುದು ಅರಣ್ಯ ಇಲಾಖೆಯ ಸ್ಪಷ್ಟ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ.ಈ ನಿರ್ಲಕ್ಷ್ಯದ ಬಗ್ಗೆ ಕೂಡಲೇ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಬೇಕು. ಕರ್ತವ್ಯ ಲೋಪ ಎಸಗಿದವರಿಗೆ ಕಠಿಣ ಶಿಕ್ಷೆ ನೀಡುವುದರಿಂದ, ಭವಿಷ್ಯದಲ್ಲಿ ಅಧಿಕಾರಿಗಳು ಹೆಚ್ಚು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ಹಾಗೆಯೇ, ತಜ್ಞರ ತಂಡವನ್ನು ನಿಯೋಜಿಸಿ, ಅಪಾಯಕಾರಿಯಾದ ಹುಲಿಯನ್ನು ತಕ್ಷಣವೇ ಸೆರೆಹಿಡಿಯಲು ಕ್ರಮ ಕೈಗೊಂಡು, ಸಂತ್ರಸ್ತ ಕುಟುಂಬಗಳಿಗೆ ಯಾವುದೇ ವಿಳಂಬವಿಲ್ಲದೆ ಪೂರ್ಣ ಪರಿಹಾರವನ್ನು ತಲುಪಿಸಬೇಕಿದೆ.

ಅರಣ್ಯದ ಗಡಿಯಲ್ಲಿ ಸಿಸಿಟಿವಿ ಅಳವಡಿಕೆ ಮತ್ತು ರಾತ್ರಿ ಗಸ್ತು ಹೆಚ್ಚಿಸುವ ಮೂಲಕ ಭದ್ರತೆಯನ್ನು ಬಲಪಡಿಸಬೇಕು.ಈ ದುರಂತದ ಹಿನ್ನೆಲೆಯಲ್ಲಿ, ಮಾನವ ಮತ್ತು ವನ್ಯಜೀವಿ ಸಂಘರ್ಷವನ್ನು ತಗ್ಗಿಸಲು ಸರ್ಕಾರ, ಅರಣ್ಯ ಇಲಾಖೆ ಹಾಗೂ ಸಾರ್ವಜನಿಕರು ಒಗ್ಗೂಡಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವ ತುರ್ತು ಅಗತ್ಯವಿದೆ. ಸಾರ್ವಜನಿಕರು ಇಲಾಖೆಯ ಮುನ್ನೆಚ್ಚರಿಕೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಮತ್ತು ತಮ್ಮ ಆಗ್ರಹಗಳನ್ನು ಶಾಂತಿಯುತವಾಗಿ ಮಂಡಿಸಬೇಕಿದೆ. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

■ ಜೀವನ–ಪಯಣ

ಮಾನ್ಯರೆ,

ನನಗೀಗ ಎಂಬತ್ತೇಳು.
ನನಗಿಂತ ಹಿರಿಯರೆಷ್ಟೋ ಮಂದಿ
ಹೋದರು: ಆಶ್ಚರ್ಯವಲ್ಲ!
ಆದರೆ ಬಹುಮಂದಿ ಕಿರಿಯರು
–ಸ್ನೇಹಿತರು, ಶಿಷ್ಯರು, ಸಂಬಂಧಿಗಳು–
ಹೋದರಲ್ಲ: ಈ ವಿಚಿತ್ರಕ್ಕೇನು ಹೇಳೋಣ?
ಇಷ್ಟೆ; ಇದು ಜೀವನ! (ಪಯಣ)

ಸಾರ: 'ಒಳ್ಳೆಯವನಾಗಿರು; ಒಳ್ಳೆಯದು ಮಾಡು!–ಇಷ್ಟೇ ಧರ್ಮದ ಸಾರ' ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು (ತಾರಕವಾಣಿ!) ಆದರೆ ಸುಲಭವೆ ಅನುಷ್ಠಾನ?

–ಸಿಪಿಕೆ, ಮೈಸೂರು.




ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ



ಪದಬಳ್ಳಿ



ಪದ ಸ್ವಸ್ತಿಕ



ಪದ ವೃತ್ತ



ಸಜಾತಿ ಪದ ಸೋಪಾನ



ಪದಬಳ್ಳಿಯ ಇನ್ನೊಂದು ಉದಾಹರಣೆ.

ಕನ್ನಡ ಪದಬಳ್ಳಿ

"ವಿಶೇಷ ಪದಕೋಶವಾದ ಈ ಅಂತ್ಯಾಕ್ಷರೀ ಪದಕೋಶದಲ್ಲಿ ಸುಮಾರು 60–70 ಸಾವಿರ ಕನ್ನಡ ಪದಗಳಿವೆ ಎಂದರೆ ನಂಬುತ್ತೀರಾ? ಕನ್ನಡ ಭಾಷೆಯನ್ನು ಕಲಿಯುವವರು–ಮಾತನಾಡುವವರೇ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಮಕ್ಕಳಲ್ಲಿ ಆಟ ಆಡುತ್ತಾ ಕನ್ನಡವನ್ನು ಕಲಿಸುವ, ಆಸಕ್ತಿ ಹುಟ್ಟಿಸುವ ಇಂತಹ ಯತ್ನಗಳು ನಿಜಕ್ಕೂ ಶ್ಲಾಘನೀಯ ಎಂದನಿಸುವುದಿಲ್ಲವೇ?

ಕನ್ನಡದ ಬಗ್ಗೆ ನಿಜವಾದ ಅಭಿಮಾನ, ಪ್ರೀತಿ, ಕಾಳಜಿ, ಮಮತೆ ಇದ್ದಲ್ಲಿ, ಅದು ನಮ್ಮಿಂದ ಏನನ್ನು ಬೇಕಾದರೂ ಮಾಡಿಸಬಲ್ಲುದು. ಅದು ಹೇಗೆ ಎನ್ನುತ್ತೀರೋ? ತನ್ನ ಹದಿನಾರನೆಯ ವಯಸ್ಸಿನಲ್ಲಿ ವಿದ್ಯೆ ಕಲಿಯಲಾರಂಭಿಸಿ, ಸಾಹಸ ಭೀಮ ವಿಜಯಂನಂತಹ ಕಾವ್ಯವನ್ನು ನೀಡಿದ ರನ್ನ, ಸಂಸ್ಕೃತದ ದಟ್ಟ ಪ್ರಭಾವ ಕನ್ನಡದ ಮೇಲೆ ಆಗಿದ್ದಾಗ, ಅಚ್ಚ ಕನ್ನಡ ಪದಗಳನ್ನೇ ಬಳಸಿ ಕಾವ್ಯ ರಚಿಸುತ್ತೇನೆ ಎಂದು ಹೊರಟ ಮತ್ತೊಬ್ಬ ಕವಿ ಆಂಡಯ್ಯ. ಇನ್ನು ಛಂದಸ್ಸಿನಲ್ಲಾಗಲೀ ಭಾಷೆಯಲ್ಲಾಗಲೀ ಕನ್ನಡತನವನ್ನೇ ಮೆರೆಸಹೊರಟ ಮತ್ತೊಬ್ಬ ಅದ್ಭುತ ಕವಿ ನಮ್ಮ ಹಂಪೆಯ ಹರಿಹರ. ಅವನ ಕನ್ನಡದ ಪ್ರೀತಿ, ಅದರಲ್ಲೂ ದೇಸೀ ಭಾಷೆಯ ಸೊಗಡನ್ನು ಅವನ ರಗಳೆಗಳಲ್ಲಿಯೇ ನೋಡಬೇಕು.

ಹೀಗೆ ಕನ್ನಡದ ಪ್ರೀತಿ ಯಾರಿಂದ ಬೇಕಾದರೂ ಅದ್ಭುತ ಎಂದು ಅನಿಸಬಲ್ಲ ಕೆಲಸಗಳನ್ನು ಮಾಡಿಸಬಲ್ಲುದು. ಇನ್ನು ಆಧುನಿಕ ಕಾಲಕ್ಕೆ ಬರುವುದಾದರೆ, ಸ್ನಾತಕೋತ್ತರ ಪದವಿಯನ್ನು ಪಡೆದದ್ದು ಸಮಾಜಶಾಸ್ತ್ರದಲ್ಲಾದರೂ ತನ್ನಲ್ಲಿದ್ದ ನಿರಂತರ ಕನ್ನಡ ಪ್ರೀತಿಯು ಆಧುನಿಕ ಕಾಲದ ಅವಶ್ಯಕತೆಗೆ ತಕ್ಕಂತೆ ಇರುವ ಒಂದು ಪ್ರಯೋಗಕ್ಕೆ ತನ್ನನ್ನು ಒಡ್ಡೀತೆಂಬ ಅರಿವೂ ಇರಲಿಲ್ಲ ಆಕೆಗೆ. ಆಕೆಯ ತಾಯಿ ಕನ್ನಡದ ಜನಪ್ರಿಯ ಲೇಖಕಿ. ತಂದೆಯವರೂ ಸಹ ಸದಾ ಅಧ್ಯಯನ ಶೀಲರು. ಹೀಗಾಗಿ ಮಕ್ಕಳಲ್ಲಿ ಓದುವ ಹವ್ಯಾಸ ಮಾತ್ರ ತಾನೇ ತಾನಾಗಿ ಮನೆ ಮಾಡಿತ್ತು. ಓದು ಮುಗಿದ ನಂತರ ಈಕೆ ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿಕೊಳ್ಳುತ್ತಾರೆ. ಆಕೆ ಸೇರಿಕೊಂಡದ್ದು ಸಮಾಜ ಪರಿಚಯ ಮತ್ತು ಇಂಗ್ಲಿಷ್ ಭಾಷೆಯನ್ನು ಕಲಿಸಲು ಎಂದಿದ್ದರೂ ಆಕೆಯ ಹಿನ್ನೆಲೆಯನ್ನು ತಿಳಿದ ಪ್ರಾಂಶುಪಾಲರು ಅದರ ಜೊತೆಗೆ ಕನ್ನಡವನ್ನು ಕಲಿಸುವ ಹೆಚ್ಚಿನ ಕೆಲಸವನ್ನೂ ಆಕೆಯ ಹೆಗಲಿಗೇರಿಸುತ್ತಾರೆ. ಕನ್ನಡದ ಪ್ರೀತಿಯಿಂದಾಗಿ ಹುಮ್ಮಸ್ಸಿನಿಂದಲೇ ಅದನ್ನು ಮಾಡತೊಡಗಿದ ಆಕೆಗೆ ಉತ್ತರ ಭಾರತದ ಹುಡುಗನೊಬ್ಬನಿಗೆ ಕನ್ನಡ ಕಲಿಸಬೇಕಾದ ಸವಾಲು ಎದುರಾಗುತ್ತದೆ. ಕನ್ನಡದ ಗಂಧ ಗಾಳಿ ಅರಿಯದ ಆ ಬಾಲಕನಿಗೆ ಅದನ್ನು ಕಲಿಸಬೇಕಾದ ಅನಿವಾರ್ಯತೆಯು, ಅದರ ಬಗೆಗೆ ಆಕೆಯನ್ನು ಚಿಂತನೆಗೆ ಹಚ್ಚುತ್ತದೆ. ಅವನ ತಾಯಿಗೆ ಮೊದಲು ಕನ್ನಡವನ್ನು ಕಲಿಸಿದರೆ, ಅದರಿಂದ ಬಾಲಕ ಕಲಿಯಲು ಅನುಕೂಲವಾಗುತ್ತದೆ ಎಂದು ಅವನ ತಾಯಿಗೆ ಕನ್ನಡ ಕಲಿಯಲು ಈಕೆ ಹುರಿದುಂಬಿಸುತ್ತಾಳೆ. ಅದಕ್ಕಾಗಿ ಮನೆಯಲ್ಲಿದ್ದ ಹಳೆಯ ಆಹ್ವಾನ ಪತ್ರಿಕೆಗಳನ್ನು ಬಳಸಿಕೊಂಡು, ಅದನ್ನು ಕನ್ನಡದ ಅಕ್ಷರಗಳಂತೆ ಕತ್ತರಿಸಿ, ಅದರ ಒಂದು ಬದಿಯಲ್ಲಿ ಹಿಂದಿಯಲ್ಲಿ ಆ ಅಕ್ಷರವನ್ನು ಬರೆದು, ಮತ್ತೊಂದು ಬದಿಯಲ್ಲಿ ಕನ್ನಡದಲ್ಲಿ ಬರೆದು, ಅವರಿಗೆ ಕಲಿಸುವ ಪ್ರಯತ್ನ ಆರಂಭವಾಗುತ್ತದೆ. ಅಕ್ಷರಗಳನ್ನು ಮುಗಿಸಿದ ನಂತರ ಅವರಿಗೆ ಕಾಗುಣಿತ ಕಲಿಸುವ ಸವಾಲು. ಅದಕ್ಕಾಗಿ ಮತ್ತೆ ಆಹ್ವಾನ ಪತ್ರಿಕೆಗಳನ್ನು ಕತ್ತರಿಸಿ, ದೀರ್ಘ, ಕೊಂಬು, ಇಳಿ, ಏತ್ವ ಇತ್ಯಾದಿಗಳ ರಾಶಿ ಮುಂದೆ ಬೀಳುತ್ತದೆ.

ಹೀಗೆ ಅದು ಮುಂದೆ ಸಾಗಿದಂತೆ ಈಕೆಯ ತಲೆಯಲ್ಲಿ ಅನೇಕ ವಿಚಾರಗಳು ಅಸ್ಪಷ್ಟವಾಗಿ ರೂಪುಗೊಳ್ಳುತ್ತಿರುತ್ತವೆ. ಈಕೆಗೆ ಇಂಗ್ಲೀಷಿನ ಸ್ಕ್ರ್ಯಾಬಲ್ ಎಂಬ ಜನಪ್ರಿಯ ಆಟ ಆಡುವ ಅಭ್ಯಾಸ ಇರುತ್ತದೆ. ಕಣ್ಣ ಮುಂದೆ ಕನ್ನಡದ ಗುಣಿತಾಕ್ಷರಗಳ ರಾಶಿ ನಗುತ್ತಿರುತ್ತದೆ. ಅರೆ, ಇದನ್ನೇ ಬಳಸಿ ಕನ್ನಡದಲ್ಲೇಕೆ ಅಂತಹ ಆಟವನ್ನು ಸಿದ್ಧಗೊಳಿಸಬಾರದು? ಎಂಬ ವಿಚಾರ ತಲೆಯಲ್ಲಿ ಬಂದದ್ದೇ, ಅದು ಆಕೆಯ ತನುಮನಗಳನ್ನು ಆವರಿಸಿಕೊಂಡುಬಿಡುತ್ತದೆ. ಕನ್ನಡದಲ್ಲಿ ಪದಬಂಧವನ್ನು ಬಿಟ್ಟರೆ, ಅಂತಹ ಹೇಳಿಕೊಳ್ಳುವ ಆಟಗಳು ಇಲ್ಲ ಎಂಬುದೂ ಸಹ ಆಕೆಯ ಗಮನಕ್ಕೆ ಬರುತ್ತದೆ. ಅಕ್ಷರಗಳನ್ನು, ಕಾಗುಣಿತವನ್ನು ಜೋಡಿಸುತ್ತಾ ಪದವನ್ನು ಹೆಣೆಯುತ್ತಾ ಹೋಗುವ ಆಸಕ್ತಿಕರ ಆಟವೊಂದು ಆಕೆಯ ಕಣ್ಣ ಮುಂದೆ ಹೊಸಲೋಕವನ್ನೇ ತೆರೆದಿಡುತ್ತದೆ. ಅದಕ್ಕಾಗಿ ಮಾಡಿಕೊಳ್ಳಬೇಕಾದ ಸಿದ್ಧತೆಯೇನೂ ಕಡಿಮೆ ಆಗಿರಲಿಲ್ಲ. ಮನದೊಳಗೆ ಇದ್ದ ಕನ್ನಡದ ಅದಮ್ಯ ಪ್ರೀತಿಯ ಮುಂದೆ ಅದ್ಯಾವುದೂ ಕಷ್ಟ ಎಂದು ಅನಿಸಲೇ ಇಲ್ಲ. ಪದಬಳ್ಳಿ ಎಂಬ ಹೆಸರನ್ನು ಪಡೆದ ಆ ಆಟವನ್ನು ರೂಪಿಸುತ್ತಾ ಹೋದಂತೆ, ಒಂದೊಂದು ಗುಣಿತಾಕ್ಷರದಲ್ಲೂ, ಆರಂಭದ ಮತ್ತು ಕೊನೆಯ ಅಕ್ಷರದಲ್ಲೂ ಇರಬಹುದಾದ ಪದಗಳನ್ನು ಪರಿಚಯಿಸುವ ಹೊಣೆಗಾರಿಕೆಯೂ ತನ್ನ ಮೇಲಿದೆ ಎಂಬುದನ್ನು ಅರಿತ ಆಕೆ ಅದಕ್ಕಾಗಿ ಕನ್ನಡದಲ್ಲಿ ಉಪಲಬ್ಧವಿರುವ ಎಲ್ಲ ಶಬ್ದಕೋಶಗಳ ಅನ್ವೇಷಣೆಗೆ ಆರಂಭಿಸುತ್ತಾರೆ. ಅದೆಲ್ಲವನ್ನೂ ಜಾಲಾಡಿ, ತಮ್ಮ ಆಟಗಳಿಗೆ ಬೇಕಾದ ಸಹಾಯ ಮಾಡುವಂತಹ ಹೊಸ ಪದಕೋಶವನ್ನು ತಯಾರು ಮಾಡುವ ಅಗಾಧ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ.

ಇತರ ಪದಕೋಶದಲ್ಲಿರುವಂತೆ ಇದರಲ್ಲಿ ಕಾಗುಣಿತದ ಅಕ್ಷರದ ಪ್ರಕಾರ ಪದಗಳಿರುವುದಿಲ್ಲ. ಬದಲಾಗಿ ಪದಬಳ್ಳಿ ಆಟಕ್ಕೆ ಸಹಾಯವಾಗುವಂತಹ 2–3–4–5 ಅಕ್ಷರಗಳ ಪದಗಳಿವೆ. ಜೊತೆಗೆ ಸಜಾತೀಯ–ವಿಜಾತೀಯ ಒತ್ತಕ್ಷರದ ಪದಗಳಿವೆ. ಆಟ ಆಡುವಾಗ ಕೆಲವು ಕೊನೆಯ ಅಕ್ಷರಗಳಿಂದ ಆರಂಭವಾಗುವ ಪದಗಳು ಸಿಗಲು ಕಠಿಣವಾಗಬಹುದು. ಉದಾಹರಣೆಗೆ ಳ ಮತ್ತು ಣ ಅಕ್ಷರಗಳಿಂದ ಆರಂಭವಾಗುವ ಪದಗಳು ಸಿಗುತ್ತವೆಯೇ? ಅಂತಹ ಸಮಯದಲ್ಲಿ ಅವುಗಳಿಂದ ಕೊನೆಗೊಳ್ಳುವ ಪದಗಳನ್ನು ಬಳಸಬಹುದು. ಅಂತಹ ಪದಗಳು ಈ ಪದಕೋಶದಲ್ಲಿ ಸಿಗುತ್ತವೆ. ವಿಶೇಷ ಪದಕೋಶವಾದ ಈ ಅಂತ್ಯಾಕ್ಷರೀ ಪದಕೋಶದಲ್ಲಿ ಸುಮಾರು 60–70 ಸಾವಿರ ಕನ್ನಡ ಪದಗಳಿವೆ ಎಂದರೆ ನಂಬುತ್ತೀರಾ? ಕನ್ನಡ ಭಾಷೆಯನ್ನು ಕಲಿಯುವವರು–ಮಾತನಾಡುವವರೇ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಮಕ್ಕಳಲ್ಲಿ ಆಟ ಆಡುತ್ತಾ ಕನ್ನಡವನ್ನು ಕಲಿಸುವ, ಆಸಕ್ತಿ ಹುಟ್ಟಿಸುವ ಇಂತಹ ಯತ್ನಗಳು ನಿಜಕ್ಕೂ ಶ್ಲಾಘನೀಯ ಎಂದನಿಸುವುದಿಲ್ಲವೇ?

ಈ ಪದಬಳ್ಳಿಯು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಮತ್ತು ಕನ್ನಡ ಪ್ರೀತಿ ಉಳ್ಳವರೆಲ್ಲರಿಗೂ ಸಮಾನವಾಗಿ ಉಪಯೋಗವಾಗುತ್ತದೆ. ಚಿಕ್ಕ ಮಕ್ಕಳಿಗೆ, ಅಂದರೆ ಕೇವಲ ವರ್ಣಮಾಲೆಯ ಅಕ್ಷರಗಳನ್ನು ಕಲಿತವರಿಗೆ, ಕಾಗುಣಿತ ಬಲ್ಲವರಿಗೆ ಮತ್ತು ಒತ್ತಕ್ಷರಗಳ ಪರಿಚಯ ಇರುವವರಿಗೆ ಎಂದು ವಿವಿಧ ಹಂತಗಳಲ್ಲಿ ಈ ಆಟವನ್ನು ರೂಪಿಸಲಾಗಿದೆ. ಹಿಂದಿನ ಪದದ ಯಾವುದಾದರೂ ಒಂದು ಅಕ್ಷರಕ್ಕೆ ಇತರ ಅಕ್ಷರಗಳನ್ನು ಜೋಡಿಸುತ್ತಾ ಪದವನ್ನು ಮಾಡುವುದು ಪದಬಳ್ಳಿ. ಮಧ್ಯದಲ್ಲಿ ಇಟ್ಟ ಒಂದಕ್ಷರಕ್ಕೆ ಹೊಂದುವಂತೆ ಸುತ್ತಲೂ ಬೇರೆ ಬೇರೆ ಅಕ್ಷರಗಳನ್ನು ಜೋಡಿಸುವುದು ಪದವೃತ್ತ. ಒಬ್ಬರು ಹ್ರಸ್ವ ಸ್ವರವನ್ನು ಮಾತ್ರ, ಮತ್ತೊಬ್ಬರು ದೀರ್ಘ ಸ್ವರವನ್ನು ಮಾತ್ರ ಬಳಸಿ ಮೆಟ್ಟಿಲು ಮೆಟ್ಟಿಲಾಗಿ ಬೆಳೆಸುವುದು ಪದಸೋಪಾನ. ಎದುರಾಳಿ ನೀಡಿದ ಪದದಲ್ಲಿ ಒಂದೆರಡು ಅಕ್ಷರಗಳನ್ನು ಮಾತ್ರ ಉಳಿಸಿಕೊಂಡು ಉಳಿದುದನ್ನು ತೆಗೆದು, ತನ್ನ ಹೊಸ ಅಕ್ಷರಗಳಿಂದ ಹೊಸ ಪದವನ್ನು ರಚಿಸುತ್ತಾ ಹೋಗುವುದು ಪದ ಸೆಣಸು. ಇದನ್ನು ಆಡುತ್ತಾ ನಮ್ಮ ಅರಿವಿಲ್ಲದಂತೆ ನಮ್ಮ ಪದಗಳ ಸಂಪತ್ತನ್ನು ಹೆಚ್ಚಿಸಿಕೊಳ್ಳಬಹುದು. ಎರಡಕ್ಷರದ ಪದಗಳು ಏಣಿಯಂತೆ ಮೇಲೆ ಮೇಲೆ ಸಾಗಿದರೆ, ಮೂರಕ್ಷರದ ಪದಗಳು ವೃತ್ತಾಕಾರದಲ್ಲಿ ಕೊನೆಗೊಳ್ಳುತ್ತವೆ. ಹಾಗೇ ನಾಕಕ್ಷರದ ಪದಗಳು ಚೌಕಾಕಾರವನ್ನು ಪಡೆದರೆ, ಐದು ಅಕ್ಷರದ ಆಟವು ಸ್ವಸ್ತಿಕದಂತೆ ರೂಪ ಪಡೆಯುತ್ತವೆ. ಈ ಆಟದಿಂದ ನಮ್ಮ ಕಾಗುಣಿತವು ಸುಧಾರಿಸುತ್ತದೆ. ತಪ್ಪು ತಪ್ಪಾಗಿ ಬರೆಯುವುದು ನಿಂತು ಬರವಣಿಗೆ ಶುದ್ಧಗೊಳ್ಳುತ್ತದೆ. ಕನ್ನಡದಲ್ಲಿ ಇರುವ ಅಸಂಖ್ಯಾತ ಪದಗಳ ಪರಿಚಯ ಆಗುವುದರ ಜೊತೆಗೆ ಅವುಗಳ ಬಳಕೆಗೂ ಪ್ರೇರೇಪಣೆ ಸಿಗಬಹುದು. ಒಟ್ಟಾರೆ, ಇದನ್ನು ಕನ್ನಡದ ಸೇವೆ ಅಲ್ಲದೆ ಮತ್ತಿನ್ನೇನು ಎಂಬುದಾಗಿ ಕರೆಯಲು ಸಾಧ್ಯ? ಆಕೆ ಅಪ್ಪಟ ಕನ್ನಡತಿ ಶ್ರೀಮತಿ ಉಷಾಮೂರ್ತಿ.

ಈ ಆಟದಲ್ಲಿ ನಿಮಗೂ ಆಸಕ್ತಿ ಇದೆಯೇ? ಹಾಗಿದ್ದಲ್ಲಿ, ನೀವು ಸಂಪರ್ಕಿಸಬೇಕಾದ ದೂರವಾಣಿ–9449060528.

ಇಂದು ಮೈಸೂರಿಗೆ ಉಪರಾಷ್ಟ್ರಪತಿ ಭೇಟಿ

ಚಾಮುಂಡಿಬೆಟ್ಟದ ಶ್ರೀಚಾಮುಂಡೇಶ್ವರಿ ದೇಗುಲಕ್ಕೆ ಸಾರ್ವಜನಿಕ ಪ್ರವೇಶ ನಿರ್ಬಂಧ

ಮೈಸೂರು,ನ.8(ಪಿಎಂ)– ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರ ಭೇಟಿ ಹಿನ್ನೆಲೆಯಲ್ಲಿ ನ.9ರಂದು ಮಧ್ಯಾಹ್ನ 2ರಿಂದ ಸಂಜೆ 4ರವರೆಗೆ ಚಾಮುಂಡಿಬೆಟ್ಟದ ಶ್ರೀಚಾಮುಂಡೇಶ್ವರಿ ದೇವಾಲಯಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.



ನ.9ರಂದು 12.20ಕ್ಕೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಉಪರಾಷ್ಟ್ರಪತಿಗಳು, ಬಳಿಕ ರಸ್ತೆ ಮೂಲಕ ಮೈಸೂರಿನ ಬನ್ನಿಮಂಟಪದ ಶಿವರಾತ್ರೀಶ್ವರನಗರಕ್ಕೆ ಆಗಮಿಸಲಿದ್ದಾರೆ. ನಂತರ ಇಲ್ಲಿ ಮಧ್ಯಾಹ್ನ 1.25ಕ್ಕೆ ನಡೆಯುವ ಜೆ ಎಸ್ ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 16ನೇ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ರಸ್ತೆ ಮೂಲಕ ಮಧ್ಯಾಹ್ನ 2.40ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡಲಿದ್ದಾರೆ. ಇಲ್ಲಿಂದ ಮಧ್ಯಾಹ್ನ 3.10ಕ್ಕೆ ನಿರ್ಗಮಿಸಿ, ಮಧ್ಯಾಹ್ನ 3.25ಕ್ಕೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ತಾಯಿ ದರ್ಶನ ಪಡೆಯಲಿದ್ದಾರೆ.

ನಂತರ ಸಂಜೆ 4.15ಕ್ಕೆ ಚಾಮುಂಡಿ ಬೆಟ್ಟದಿಂದ ನಿರ್ಗಮಿಸುವ ಉಪರಾಷ್ಟ್ರಪತಿಗಳು, ರಸ್ತೆ ಮೂಲಕ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಬಳಿಕ ಸಂಜೆ 4.40ಕ್ಕೆ ಇಲ್ಲಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ನಿರ್ಗಮಿಸಿ, ಬೆಂಗಳೂರು ಹೆಚ್‌ಎಎಲ್ ಏರ್‌ಪೋರ್ಟ್ ಮೂಲಕ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ಸಮಾಜದ ಉನ್ನತಿಗಾಗಿ ತ್ಯಾಗ ಮಾಡಿದ ಮಹನೀಯರ ಬದುಕು ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಅಭಿಮತ



'ಸಾಮಾಜಿಕ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ' ವಿಷಯದ ಕುರಿತು ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಮಾತನಾಡಿದರು.

ಮೈಸೂರು, ನ.8(ಎಸ್‌ಪಿಎನ್)– ಸಮಾಜದ ಉನ್ನತಿಗಾಗಿ ತಮ್ಮ ಬದುಕಿನ ಅಮೂಲ್ಯ ಕ್ಷಣವನ್ನು ತ್ಯಾಗ ಮಾಡಿದ ಮಹನೀಯರ ಬದುಕು ಇಂದಿನ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು ಎಂದು ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಅಭಿಪ್ರಾಯಪಟ್ಟರು.


ಮೈಸೂರು ರಾಮಸ್ವಾಮಿ ವೃತ್ತದ ಎಐಡಿಎಸ್‌ಓ ಕಚೇರಿಯಲ್ಲಿ ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯಿಂದ ಏರ್ಪಡಿಸಿದ್ದ ಒಂದು ದಿನದ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ 'ಸಾಮಾಜಿಕ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ' ವಿಷಯದ ಕುರಿತು ಮಾತನಾಡಿದರು.

ಸ್ವಾಮಿ ವಿವೇಕಾನಂದ, ಭಗತ್ ಸಿಂಗ್, ನೇತಾಜಿ ಸುಭಾಷ್ ಚಂದ್ರಬೋಸ್ ಹಾಗೂ ಶಿಕ್ಷಣಕ್ಕಾಗಿ ಹೋರಾಟ ಮಾಡಿದ ಸಾವಿತ್ರಿ ಬಾಯಿ ಫುಲೆ ಸೇರಿದಂತೆ ಇತರೆ ಮಹನೀಯರ ಜೀವನದಿಂದ ಸ್ಫೂರ್ತಿ ಪಡೆದು ವಿದ್ಯಾರ್ಥಿಗಳು ಸದಾ ಸಾಮಾಜಿಕ ಬದಲಾವಣೆಗೆ ಚಿಂತಿಸಬೇಕು. ವಿದ್ಯಾರ್ಥಿಗಳನ್ನು ಕೇವಲ ವೈಯಕ್ತಿಕ ಯಶಸ್ಸಿಗಾಗಿ ಮಾತ್ರವಲ್ಲದೆ ಸಮಾಜದ ಪ್ರಗತಿ ಮತ್ತು ಉನ್ನತಿಗಾಗಿ ಸಿದ್ಧಪಡಿಸುವ ಸಮಗ್ರ ವ್ಯಕ್ತಿತ್ವ ವಿಕಸನದ ಅಗತ್ಯತೆ ಕುರಿತು ಅವರು ವಿವರಿಸಿದರು.

ಸಭೆಯಲ್ಲಿ ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ ಉಪಾಧ್ಯಕ್ಷೆ ಸ್ವಾತಿ, ಸಂಚಾಲಕ ನಿತಿನ್, ಪದಾಧಿಕಾರಿಗಳಾದ ಚಂದ್ರಕಲಾ, ಚಂದನ, ಚಂದ್ರಿಕಾ, ಹೇಮಾ, ದಿಶಾ, ಅಂಜಲಿ, ಅಭಿಷೇಕ್, ನಂದೀಶ್ ಸೇರಿದಂತೆ ಇತರರಿದ್ದರು. ಮೈಸೂರಿನ ವಿವಿಧ ಕಾಲೇಜಿನ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಮೂರನೇ ಮಹಾಯುದ್ಧದ ಸಾಧ್ಯತೆ ದೂರವಿಲ್ಲ

ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂ.ಕೆ. ನಾರಾಯಣನ್



ಬೆಂಗಳೂರು, ನ.8– ಮೂರನೇ ಮಹಾಯುದ್ಧದ ಸಾಧ್ಯತೆ ಇನ್ನು ಮುಂದೆ ದೂರವಿಲ್ಲ. ಅದು ಹೆಚ್ಚು ಸಂಭವನೀಯವಾಗಿದೆ ಎಂದು ಬೆಂಗಳೂರು ಮೂಲದ ಸಿನರ್ಜಿಯಾ ಫೌಂಡೇಶನ್ ತನ್ನ 'ಗ್ಲೋಬಲ್ ಫ್ಯೂಚರ್ಸ್ 2035' ವರದಿಯನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ನಡೆದ ದುಂಡು ಮೇಜಿನ ಚರ್ಚೆಯಲ್ಲಿ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂ.ಕೆ. ನಾರಾಯಣನ್ ಹೇಳಿದ್ದಾರೆ.

ತಾಂತ್ರಿಕ ಮಿಲಿಟರೀಕರಣ, ಸೈಬರ್ ವಾರ್ ಮತ್ತು ಪ್ರಮುಖ ಶಕ್ತಿಗಳ ನಡುವಿನ ಹೊಂದಾಣಿಕೆ, ಸಂಯಮದ ಕೊರತೆ ಇದಕ್ಕೆ ಕಾರಣ ಎಂದು ನಾರಾಯಣನ್ ಹೇಳಿದ್ದಾರೆ. ಜಾಗತಿಕ ಕ್ರಮಗಳು ಪ್ರಕ್ಷುಬ್ಧವಾಗುತ್ತಿರುವ ಇತ್ತೀಚಿನ ದಿನಗಳಲ್ಲಿ, ವಿಶ್ವ ಕ್ರಮದಲ್ಲಿ ವಿಶ್ವಾಸಾರ್ಹ ಚೌಕಟ್ಟಿನಂತೆ ಅಲಿಪ್ತತೆಯ ಪುನರುಜ್ಜೀವನವನ್ನು ನಾರಾಯಣನ್ ಪ್ರತಿಪಾದಿಸಿದ್ದಾರೆ.

1965 ಮತ್ತು 1971ರ ಯುದ್ಧಗಳ ನಂತರ ಭಾರತವು ಪಶ್ಚಿಮ ಪಾಕಿಸ್ತಾನವನ್ನು ವಿಭಜಿಸುವ ಅವಕಾಶವನ್ನು ಕಳೆದುಕೊಂಡಿತು. ಪಾಕಿಸ್ತಾನದೊಂದಿಗೆ ವ್ಯವಹರಿಸದೆ ಭಯೋತ್ಪಾದನೆಯನ್ನು ನಿಭಾಯಿಸುವುದು ಕಷ್ಟಕರವಾಗಿರುತ್ತದೆ ಎಂದು ಅವರು ಈ ಹಿಂದೆ ಹೇಳಿದ್ದರು.

ದುಂಡು ಮೇಜಿನ ಸಭೆಯು ಹಿರಿಯ ರಾಜತಾಂತ್ರಿಕರು, ನೀತಿ ನಿರೂಪಕರು, ಹಿರಿಯ ಭಾರತೀಯ ಸೇನಾ ಅಧಿಕಾರಿಗಳು, ಕಾರ್ಯತಂತ್ರದ ತಜ್ಞರು, ಉದ್ಯಮ ಮುಖಂಡರು, ನವೋದ್ಯಮಗಳು ಮತ್ತು ಶೈಕ್ಷಣಿಕ ವಲಯವನ್ನು ಒಟ್ಟುಗೂಡಿಸಿ ಜಾಗತಿಕ ಶಕ್ತಿ, ಅರ್ಥಶಾಸ್ತ್ರ ಮತ್ತು ತಂತ್ರಜ್ಞಾನದ ಉದಯೋನ್ಮುಖ ವಾಸ್ತುಶಿಲ್ಪ, ಪರಿಸರ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಚರ್ಚೆ ನಡೆಯಿತು. ಚರ್ಚೆಗಳು ಭೌಗೋಳಿಕ ರಾಜಕೀಯ ಬದಲಾವಣೆಗಳ ಒಮ್ಮುಖ, ತಾಂತ್ರಿಕ ಅಡಚಣೆ ಮತ್ತು ಹೆಚ್ಚುತ್ತಿರುವ ಅನಿಶ್ಚಿತ ಜಗತ್ತಿನಲ್ಲಿ ಕಾರ್ಯತಂತ್ರದ ಸ್ವಾಯತ್ತತೆಯ ಅನ್ವೇಷಣೆಗೆ ಕಾರಣವಾಗಿದೆ.

ಅಧಿಕಾರದ ದೋಷಗಳ ಕುರಿತು ಮಾತನಾಡಿದ ಮಾಜಿ ವಿದೇಶಾಂಗ ಕಾರ್ಯದರ್ಶಿ ಕನ್ವಾಲ್ ಸಿಬಲ್, ರಾಜತಾಂತ್ರಿಕತೆಯ ಸಾರವು ಯಾವಾಗಲೂ ಮಾತುಕತೆ ಮತ್ತು ರಾಜಿಗಳನ್ನು ಒಳಗೊಂಡಿರುತ್ತದೆ ಎಂದರು. ಆದರೆ ಪ್ರಸ್ತುತ ಮಾದರಿಯು ರಾಜತಾಂತ್ರಿಕತೆಯಿಂದ ನೈತಿಕ ಪರಿಗಣನೆಗಳನ್ನು ತೆಗೆದುಹಾಕಿದೆ.

ನಾಗರಿಕ ದೃಷ್ಟಿಕೋನವನ್ನು ಆಧರಿಸಿ, ಮಾಜಿ ವಿದೇಶಾಂಗ ಕಾರ್ಯದರ್ಶಿ ನಿರುಪಮಾ ರಾವ್, ಭಾರತವು ಏಕಕಾಲದಲ್ಲಿ ಛಿದ್ರಗೊಂಡ, ಜಾಲಬಂಧ ಮತ್ತು ಪರಸ್ಪರ ಅವಲಂಬಿತವಾದ ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ವಿವರಿಸಿದರು. ಭಾರತವು ತನ್ನ ಆಡಳಿತ ಸ್ಥಿರತೆ, ಡಿಜಿಟಲ್ ಮೂಲಸೌಕರ್ಯ ಮತ್ತು ಪ್ರಮಾಣದ ಕಾರಣದಿಂದಾಗಿ ವಿಶ್ವಾಸಾರ್ಹ ಆಧಾರ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಡಾ. ಅನಿಲ್ ಕಾಕೋಡ್ಕರ್ ಇಂದಿನ ವಿಶ್ವ ಕ್ರಮದ ನೈತಿಕ ಮತ್ತು ರಚನಾತ್ಮಕ ವಿರೋಧಾಭಾಸಗಳ ಬಗ್ಗೆ ಪ್ರತಿಬಿಂಬಿಸಿದರು ಎಂದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮಾಜಿ ಅಧ್ಯಕ್ಷ ಎಸ್. ಸೋಮನಾಥ್ ಅವರು ಶೈಕ್ಷಣಿಕ ಮತ್ತು ಕೈಗಾರಿಕೆಗಳ ನಡುವಿನ ಸಿನರ್ಜಿಯ ಮಹತ್ವವನ್ನು ಒತ್ತಿ ಹೇಳಿದರು. ದೇಶದಲ್ಲಿ ಆರೋಗ್ಯಕರ ತಾಂತ್ರಿಕ ಪರಿಸರ ವ್ಯವಸ್ಥೆಗಾಗಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಸರ್ಕಾರದ ಕೊಡುಗೆ ಮತ್ತು ಬೆಂಬಲವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕನಕದಾಸರ ಚಿಂತನೆಗಳ ಅರ್ಥೈಸಿಕೊಂಡರೆ ಸಮಸಮಾಜ ನಿರ್ಮಾಣ ಸಾಧ್ಯ

- ಕನಕ ಜಯಂತಿಯಲ್ಲಿ ಶ್ರೀ ಕಾಗಿನೆಲೆ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅಭಿಮತ
- ಸಿದ್ದರಾಮಯ್ಯ 'ಗ್ಯಾರಂಟಿ' ಕೊಟ್ಟಿದ್ದಾರೆ; ಮುಂಬರುವವರು ಬಾಯಿಗೆ ನೀರು ಬಿಡಲ್ಲ ಅನ್ನಿಸುತ್ತೆ!

ಮೈಸೂರು,ನ.8(ಎಂಟಿವೈ)– ಭಕ್ತ ಕನಕದಾಸರ ಪವಾಡವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಕೌಟುಂಬಿಕ ಸಮಸ್ಯೆಗಳು ನಿವಾರಣೆಯಾಗುವುದರೊಂದಿಗೆ ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಶ್ರೀ ಕಾಗಿನೆಲೆ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಕನಕದಾಸ ಜಯಂತೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಸಂತ ಶ್ರೇಷ್ಠ ಭಕ್ತ ಕನಕದಾಸ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಧರ್ಮದ ಉನ್ನತಿಗೆ, ಅಧರ್ಮವನ್ನು ಹೋಗಲಾಡಿಸಲು ಹಲವಾರು ಮಹಾತ್ಮರು ಜನ್ಮ ತಾಳಿ ಹೋರಾಟ ಮಾಡಿದ್ದಾರೆ. ಹೀಗೆ ಆಯಾ ಕಾಲದಲ್ಲಿ ಒಬ್ಬೊಬ್ಬರೇ ಹೋರಾಟ ಮಾಡಿ ಸುಧಾರಣೆ ತರುತ್ತಿದ್ದರು. ಆದರೆ, ಪ್ರಸ್ತುತ ಆ ನಿಟ್ಟಿನಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ದಲಿತರು ಹೋರಾಟ ಮಾಡುತ್ತಿದ್ದೇವೆ. ಆದರೆ, ಸಮ ಸಮಾಜ ಇನ್ನೂ ನಿರ್ಮಾಣವಾಗಿಲ್ಲ. ಇದಕ್ಕೆ ಈ ಸಮಾಜಗಳ ದೌರ್ಬಲ್ಯವೇ ಕಾರಣ ಎಂದು ಹೇಳಿದರು.



ಮೈಸೂರಿನ ಕಲಾಮಂದಿರದಲ್ಲಿ ನಡೆದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್ ಅವರು ಕನಕದಾಸರ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು.

ಕನಕದಾಸರ ಪವಾಡಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಾಗ ಕೌಟುಂಬಿಕ ಸಮಸ್ಯೆಗಳು ಬಗೆಹರಿಯಲಿವೆ. ಪ್ರಾಣಿವಧೆ ತಡೆಹಿಡಿದವರು ಕನಕದಾಸರು. ಈಗ ಸಮುದ್ರದಲ್ಲಿರುವ ಪ್ರಾಣಿಗಳು ಮನುಷ್ಯನಿಗೇ ಸಾಲುತ್ತಿಲ್ಲ. ಇದು ಈಗಿನ ಆಹಾರ ಪದ್ಧತಿ ಆಗಿರಬಹುದು. ಆದರೆ, ಅದು ಮಿತವಾಗಿರಬೇಕು ಎಂದು ಸಲಹೆ ನೀಡಿದರು.

ಮುಂದಿನ ಸರ್ಕಾರ ಬಾಯಿಗೆ ನೀರು ಬಿಡುವುದಿಲ್ಲ: ರಾಜ್ಯ ಸರ್ಕಾರದ ಐದು ಗ್ಯಾರಂಟಿ ಗಳನ್ನು ತೆಗೆದುಕೊಂಡಿರುವವರಿಗೆ ಈ ಯೋಜನೆ ಬಗ್ಗೆ ಕಾಳಜಿ ಇರಬೇಕು. ಇದರ ಫಲಾನುಭವಿಗಳು ಯೋಜನೆ ಪರ ಇರಬೇಕು. ಹಿಂದುಳಿದ ಸಮುದಾಯಗಳೇ ಯೋಜನೆಗಳ ವಿರುದ್ಧ ಮಾತನಾಡಬಾರದು. ಸಿದ್ದರಾಮಯ್ಯ ಇರುವವರೆಗೂ ಸಮಾಜ ಕಲ್ಯಾಣ ಯೋಜನೆಗಳು ಜಾರಿಯಲ್ಲಿರುತ್ತವೆ. ಮುಂದೆ ಇರುತ್ತದೆಯೋ ಇಲ್ಲವೋ ತಿಳಿದಿಲ್ಲ. ಮುಂದಿನ ಸರ್ಕಾರಗಳು ಸಾಯುತ್ತಿದ್ದರು ಬಾಯಿಗೆ ನೀರು ಬಿಡುವುದಿಲ್ಲ ಅನಿಸಲಿದೆ ಎಂದು ಕಿಡಿಕಾರಿದರು.

ಕೌಟುಂಬಿಕ ಸ್ಥಿತಿ ಸುಧಾರಣೆ: ರಾಜ್ಯ ಸರ್ಕಾರ ಪುರುಷರಿಗೆ ಯೋಜನೆ ಕೊಟ್ಟರೆ ದುರುಪಯೋಗ ಆಗುವುದನ್ನು ಮನಗಂಡು ಮಹಿಳೆಯರಿಗೆ ಕೊಟ್ಟು ಕೌಟುಂಬಿಕ ವ್ಯವಸ್ಥೆ ಸುಧಾರಣೆಗೆ ಮುಂದಾಗಿದೆ. ದುಶ್ಚಟಗಳನ್ನು ಬಿಡಿ ಎಂದರೆ ಅದರಲ್ಲಿ ಸಂತೋಷ ಸಿಗಲಿದೆ ಎನ್ನುತ್ತಾರೆ. ದುಡಿಯಲು ಹೋಗಬೇಕು ಎಂಬ ಭಾವನೆ ಕೆಲವರಲ್ಲಿದೆ. ಇಂದು ಎಲ್ಲರೂ ಮಹಿಳೆಯರ ಪರ ಯಾಕೆ ಮಾತನಾಡುತ್ತಾರೆ ಎಂದರೆ ಪುರುಷರ ದೌರ್ಬಲ್ಯ ಸಮಾಜದಲ್ಲಿ ಎದ್ದು ಕಾಣುತ್ತಿದೆ. ಅಬಕಾರಿ ಇಲಾಖೆ ಸಾಕುತ್ತಿರುವುದೇ ಹಿಂದುಳಿದ ಸಮುದಾಯಗಳು ಎಂದು ಬೇಸರ ವ್ಯಕ್ತಪಡಿಸಿದರು.

> “ನಾಡಿನ ಸಾಹಿತ್ಯ ಲೋಕದ ಅಮೂಲ್ಯ ರತ್ನ ಕನಕದಾಸರು. ಕ್ರಾಂತಿಕಾರಿ ವಿಚಾರಗಳನ್ನು ಮಂಡಿಸಿದವರು. ಅವರನ್ನು ಮೆರವಣಿಗೆಯಲ್ಲಿ ಕಾಣುವುದಕ್ಕಿಂತ ಬರವಣಿಗೆಯಲ್ಲಿ ಕಾಣಬೇಕು. ಅವರ ಒಂದೊಂದು ಕೀರ್ತನೆಗಳ ಮೇಲೆ ಒಂದೊಂದು ಪಿಎಚ್‌ಡಿ ಪಡೆಯಬಹುದು. ಅಹಿಂದ ವರ್ಗಕ್ಕೆ ಆರಾಧನೆ, ಆಚರಣೆ, ಅನುಸರಣೆ ಮೂರು ಆಯ್ಕೆಗಳಿವೆ.
> –ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶ್ರೀ ಉರಿಲಿಂಗ ಪೆದ್ದಿಮಠ

ಶಾಸಕ ತನ್ವೀರ್ ಸೇಠ್ ಮಾತನಾಡಿ, ಮಹನೀಯರ ಆದರ್ಶಗಳನ್ನು ಇಂದಿನ ಸಮಾಜ ಅನುಸರಿಸುತ್ತಿಲ್ಲ. ಹೀಗಾಗಿ ಸಮಾಜದಲ್ಲಿ ಮೌಲ್ಯಗಳು ಅಧಃಪತನವಾಗುತ್ತಿವೆ. ಸಮ ಸಮಾಜ ನಿರ್ಮಾಣಕ್ಕೆ ದಾರ್ಶನಿಕರ ಆದರ್ಶಗಳು ಮುಖ್ಯ. ಇವುಗಳನ್ನು ನಾವು ಪಾಲಿಸಬೇಕು ಎಂದು ಅಭಿಪ್ರಾಯಪಟ್ಟರು.

ಶಾಸಕ ಹರೀಶ್ ಗೌಡ ಮಾತನಾಡಿ, ಇಂದಿನ ಯುವ ಸಮೂಹಕ್ಕೆ ಹಳಗನ್ನಡ, ಗದ್ಯ ಕನ್ನಡದಲ್ಲಿ ಇರುವ ಕೀರ್ತನೆಗಳನ್ನು ಹೊಸಗನ್ನಡಕ್ಕೆ ಪರಿವರ್ತಿಸಿ ಜನರಿಗೆ ತಲುಪಿಸುವ ಕೆಲಸ ಆಗಬೇಕು. ಆಗ ಮಾತ್ರ ಎಲ್ಲಾ ಸಮುದಾಯದವರಿಗೂ ದಾರ್ಶನಿಕರ ಸಂದೇಶ ತಲುಪುತ್ತದೆ. ಮನೆ–ಮನಗಳಲ್ಲಿ ಕನಕರ ಚಿಂತನೆಗಳು ಬೆಳಗಲಿವೆ. ಪದವಿ ಓದುವಾಗ ಕವಿರತ್ನ ಕಾಳಿದಾಸ ಪಠ್ಯ ಇತ್ತು. ಕನಕದಾಸ ಹುಟ್ಟೂರಾದ ಬಾಡದಗೆ ಭೇಟಿ ನೀಡಿ ಅವರ ಇತಿಹಾಸ ಅರಿತುಕೊಳ್ಳಬಹುದು. ಆರೋಗ್ಯ, ಶಿಕ್ಷಣ ಕ್ಷೇತ್ರಕ್ಕೆ ಸಿಎಂ ಸಿದ್ದರಾಮಯ್ಯ ಅತೀ ಹೆಚ್ಚು ಅನುದಾನ ನೀಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ ಸಿ.ಎನ್.ಮಂಜೇಗೌಡ, ಕೆ.ಶಿವಕುಮಾರ್, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಜಿಲ್ಲಾಧಿಕಾರಿ ಜಿ ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ. ಸಿಇಓ ಯುಕೇಶ್ ಕುಮಾರ್, ಎಡಿಸಿ ಡಾ.ಪಿ.ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಯಂತಿ ಸಮಿತಿಯ ಸದಸ್ಯರಾದ ಮಹಾದೇವಗೌಡ, ವಿಶ್ವನಾಥ, ಟಿ.ಬಿ.ಚಿಕ್ಕಣ್ಣ, ನಾಗೇಂದ್ರ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ರೈಲ್ವೆ ಕನಕ ಕ್ರಿಯಾ ಸಮಿತಿ ವತಿಯಿಂದ ಮೈಸೂರಿನ ಅಶೋಕಪುರಂನ ರೈಲ್ವೆ ಕಾರ್ಯಾಗಾರದಲ್ಲಿ ಸಂತಶ್ರೇಷ್ಠ ಭಕ್ತಕನಕದಾಸರ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಿ, ಕನಕದಾಸರ ಪ್ರತಿಮೆಯನ್ನು ಪೂಜಿಸಲಾಯಿತು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ಕನಕದಾಸರ ಜಯಂತಿ ಆಚರಿಸಲಾಯಿತು. ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಮುಖಂಡ ಹಾಗೂ ನಟ ಜಯಪ್ರಕಾಶ್ (ಜೆಪಿ), ಪಕ್ಷದ ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಹಿರಿಯ ಮುಖಂಡರಾದ ಡಿ.ಮಹೇಶ ನಾಯಕ, ದಯಾನಂದ ಪಾಟೀಲ, ಕಾರ್ತಿಕ್, ಹನುಮಂತೇಗೌಡ, ನಾಗೇಂದ್ರ, ಕೃಷ್ಣನಾಯಕ, ಸೋಮು, ವಕೀಲ ಶಿವರಾಜ್, ನಾಗನಾಯಕ, ಕಾಳೇಗೌಡ, ಸಿದ್ದರಾಜು, ಕೃಷ್ಣಮೂರ್ತಿ, ರಾವತ್ ಪರಿಷತ್ ರಾಜ್ ಅರಸ್, ಕೃಷ್ಣೇಗೌಡ ಇತರರಿದ್ದರು.

ಕನಕದಾಸರು ಯಾವುದೇ ಜಾತಿಗೆ ಸೀಮಿತರಲ್ಲ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಮತ



ಮೈಸೂರು, ನ.8–ಮೈಸೂರಿನ ಕಂಸಾಳೆ ಮಹದೇವಯ್ಯ ವೃತ್ತದಲ್ಲಿ ಭಕ್ತ ಕನಕದಾಸರ 538ನೇ ಜಯಂತಿಯ ಅಂಗವಾಗಿ ಶ್ರೀ ಕನಕ ಸೇವಾ ಸಮಿತಿ ವತಿಯಿಂದ ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ಸಾರ್ವಜನಿಕರಿಗೆ ಮೈಸೂರು ಪಾಕ್ ವಿತರಿಸಲಾಯಿತು

ಈ ವೇಳೆ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷರೂ ಆದ ಕೆಪಿಸಿಸಿ ಸದಸ್ಯ ಹೆಚ್.ವಿ. ರಾಜೀವ್ ಅವರು, ಕನಕ ದಾಸರು ಯಾವುದೇ ಜಾತಿಗೆ ಸೀಮಿತ ವಲ್ಲ. ಕುಲ ಕುಲವೆಂದು ಹೊಡೆದಾಡದಿರಿ ಎನ್ನುವ ಮೂಲಕ ಅಂದೇ ಜಾತಿ ಸಂಘ ರ್ಷಕ್ಕೆ ವಿರುದ್ಧವಾಗಿ ಸಾಮಾಜಿಕ ಜಾಗೃತಿ ಮೂಡಿಸಿದ್ದರು. ಭಕ್ತಿ ಪರಂಪರೆ ಕಾಲದಲ್ಲಿ ಅವರು ಎದುರಿಸಿದ ಸಂಕಷ್ಟಕ್ಕೆ ಬದಲಾಗಿ ತಮ್ಮ ವೈಚಾರಿಕ, ಪ್ರತಿಭಟನಾ ನೆಲೆಗಟ್ಟಿನಿಂದ ದಾಸ ಸಾಹಿತ್ಯಕ್ಕೆ ವೈಚಾ ರಿಕ ಪ್ರಭೆ ನೀಡಿದರು ಎಂದರು.

ಭೂಮಿ ಅಗೆಯುತ್ತಿದ್ದಾಗ ತಮಗೆ ಸಿಕ್ಕ ನಿಧಿಯನ್ನು ತಾವು ಬಳಸದೇ ಬಡವರ ಉದ್ಧಾರಕ್ಕೆ, ದೇವಸ್ಥಾನ ಜೀರ್ಣೋದ್ಧಾರ ಹೀಗೆ ಸಮಾಜಮುಖಿ ಕೆಲಸಕ್ಕೆ ನೀಡಿದರು. ಕೀರ್ತನೆ, ಕಾವ್ಯದ ಮೂಲಕ ಜನರ ಅಜ್ಞಾನ ಹೋಗಲಾಡಿಸುವ ಕೆಲಸ ಮಾಡಿದರು. ವ್ಯಾಸರಾಯರ ಶಿಷ್ಯನಾಗಿ ಅವರ ಮನಗೆದ್ದ ಹಲವು ಘಟನೆ ಇಂದಿಗೂ ಕಥೆಯಾಗಿ ಜನಪ್ರಿಯವಾಗಿವೆ. ಕನಕದಾಸರ ಜೀವನ ಎಲ್ಲರೂ ಅನುಸರಿಸುವಂತದ್ದು ಎಂದು ಹೇಳಿದರು.

ಮುಖಂಡರಾದ ರವಿತೇಜ, ಕೇಬಲ್ ಮಹದೇವ್, ಶಿವನಂಜು, ಟಿಂಬರ್ ನಾಗರಾಜ್, ಕೃಷ್ಣಕುಮಾರ್ (ಕಿಟ್ಟಿ) ಕಂಸಾಳೆ ರವಿ, ನಾಗೇಶ್, ಪುಟ್ಟಸ್ವಾಮಿ, ಮಲ್ಲೇಶ್, ನಾಗರಾಜು, ಎಸ್ ಎನ್ ರಾಜೇಶ್, ಯತೀಶ್, ಗೋಬಿ ಸಂತೋಷ್, ದಿನೇಶ್, ರೈಸ್ ಕುಮಾರ್, ಹಾಗೂ ಇನ್ನಿತರರಿದ್ದರು.

ಶ್ರೀ ಭಕ್ತ ಕನಕದಾಸರ 538ನೇ ಜಯಂತ್ಯುತ್ಸವ



ಮೈಸೂರಲ್ಲಿ ಶನಿವಾರ ನಡೆದ ದಾಸಶ್ರೇಷ್ಠ ಶ್ರೀ ಭಕ್ತ ಕನಕದಾಸರ 538ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಎಸ್.ಆರ್.ರವಿಕುಮಾರ್ ಭಾಗವಹಿಸಿದ್ದರು. ಈ ವೇಳೆ ಕ್ಯಾಂಟೀನ್ ರವಿಪ್ರಕಾಶ್, ಬಿಎಸ್‌ಎನ್‌ಎಲ್ ಮಾದೇಗೌಡ, ಬೋರಪ್ಪ, ಮಹೇಶ್‌ಕುಮಾರ್ ಉಪಸ್ಥಿತರಿದ್ದರು.



ಪಿರಿಯಾಪಟ್ಟಣ ತಾಲೂಕಿನ ರಾಮದೂರು ಹೋಬಳಿ ಅರೇನಹಳ್ಳಿ ಗ್ರಾಮದಲ್ಲಿ ಸಂತಶ್ರೇಷ್ಠ ಕನಕದಾಸರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಭಕ್ತಿಯಿಂದ ನಮಿಸಲಾಯಿತು. ಮೆರವಣಿಗೆಯಲ್ಲಿ ಗ್ರಾಮದ ಪ್ರಮುಖರು, ಯಜಮಾನರು, ಭಕ್ತ ಕನಕದಾಸ ಯುವಕ ಮಂಡಲದ ಸದಸ್ಯರು, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಕರ್ನಾಟಕದ ಪಬ್ಲಿಕ್ ಶಾಲೆಯಲ್ಲಿ ಕನಕ ಜಯಂತಿ



ಸಿದ್ದರಾಮನಹುಂಡಿಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 538ನೇ ಕನಕ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ರಾಜಶ್ರೀ, ಉಪಪ್ರಾಂಶುಪಾಲರಾದ ಎ.ಮಾದೇಶ್, ಎಪಿಎಂಸಿ ಮಾಜಿ ಸದಸ್ಯ ಬಸವರಾಜು, ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಸಿದ್ದರಾಮ, ಕರ್ನಾಟಕ ಪಬ್ಲಿಕ್ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಲರಾಮ, ಉಪಾಧ್ಯಕ್ಷ ಶ್ರೀನಿವಾಸ, ಹೊಸಹಳ್ಳಿ ಶೇಖರ್, ಚಂದ್ರಶೇಖರ್, ಕೆಂಪರಾಮು, ರಾಜು, ಗ್ರಾಪಂ ಉಪಾಧ್ಯಕ್ಷ ಉಮೇಶ್, ಸದಸ್ಯ ಕುಮಾರ್, ಹಿರಿಯ ಉಪನ್ಯಾಸಕ ಸೋಮಣ್ಣ, ಕಾಲೇಜಿನ ಉಪನ್ಯಾಸಕ ವರ್ಗದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಮಾರು 900 ವಿದ್ಯಾರ್ಥಿಗಳಿಗೆ ಮುಖಂಡ ಬಸವರಾಜು ನೋಟಬುಕ್‌ಗಳನ್ನು ವಿತರಿಸಿದರು.



ಮೈಸೂರಿನ ವಿಜಯನಗರ ಕೆಎಸ್‌ಆರ್‌ಟಿಸಿ ಬಸ್ ಡಿಪೋದಲ್ಲಿ 538ನೇ ಕನಕದಾಸ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಭದ್ರತಾಧಿಕಾರಿ ಶಿವರಾಜೇಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ರಾಜೇಶ್ ಹೆಚ್ ಮಡಹಳ್ಳಿ, ಮಹೇಶ್ ಹೆಚ್‌ಎಸ್, ಎಸ್ ಡಿ ರಾಜು, ಪುರುಷೋತ್ತಮ್, ಸಿ ಮಾದೇಶ್, ಎಂ ಎ ಯೋಗೇಶ್, ಶ್ರೀಧರ್ ಮತ್ತಿತರರಿದ್ದರು

ಚಾಮುಂಡಿಬೆಟ್ಟದ ನಂದಿಗೆ ಮಹಾ ಅಭಿಷೇಕ ನ.17ಕ್ಕೆ ಮುಂದೂಡಿಕೆ

ಮೈಸೂರು,ನ.8(ಜಿಎ)–ಮೈಸೂರು ಬೆಟ್ಟದ ಬಳಗ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನ.9ರಂದು (ಭಾನುವಾರ) ಚಾಮುಂಡಿಬೆಟ್ಟದ ನಂದಿಗೆ ಏರ್ಪಡಿಸಿದ್ದ ಮಹಾ ಅಭಿಷೇಕವನ್ನು ಮುಂದೂಡಲಾಗಿದೆ

ಇಂದು ಬೆಳಗ್ಗೆ 9.30ಕ್ಕೆ ಚಾಮುಂಡಿ ಬೆಟ್ಟದ ನಂದಿಗೆ ಮಹಾ ಅಭಿಷೇಕ ನೆರವೇರಿಸಲು ಬಳಗ ನಿರ್ಧರಿಸಿತ್ತು. ಆದರೆ, ಭಾರತದ ಉಪ ರಾಷ್ಟ್ರಪತಿ ರಾಧಕೃಷ್ಣನ್ ಅವರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಪ್ರವೇಶವಿಲ್ಲದ ಕಾರಣ ಮಹಾಭಿಷೇಕ ಕಾರ್ಯಕ್ರಮವನ್ನು ಮುಂದೂಡಲಾಗಿದೆ.



ನ.17ರಂದು ಬೆಳಗ್ಗೆ 8.30ಕ್ಕೆ ನಂದಿಗೆ ಮಹಾ ಅಭಿಷೇಕ ನೆರವೇರಿಸಲು ನಿರ್ಧರಿಸಲಾಗಿದೆ. ಅಂದು ಶ್ರೀ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಹೊಸಮಠದ ಚಿದಾನಂದ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಮಹಾಭಿಷೇಕದಲ್ಲಿ ಪಂಚಾಮೃತ, ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ. ಫಲ ಪೂಜಾಮೃತ ದಲ್ಲಿ ಬಾಳೆಹಣ್ಣು, ದ್ರಾಕ್ಷಿ, ಬೇಲದ ಹಣ್ಣು, ಖರ್ಜೂರ, ಸೌತೆಕಾಯಿ ಸೇರಿದಂತೆ ಎಲ್ಲಾ ತರಹದ ಹಣ್ಣುಗಳ ಬಳಸಲಾಗುತ್ತದೆ. ರಸ ಪಂಚಾಮೃತಗಳಾಗಿ ಕಬ್ಬಿನ ರಸ, ಎಳನೀರು, ನಿಂಬೆ ಹಣ್ಣು, ಎಳ್ಳೆಣ್ಣೆ, ಪಾಯಸ, ಪಿಷ್ಟ ಪಂಚಕಾಬಿಷೇಕ ಗೋಧಿ ಹಿಟ್ಟು, ಕಡಲೆಹಿಟ್ಟು, ಹೆಸರಿಟ್ಟು, ದರ್ಬೆ ಅಭಿಷೇಕ ನೆರವೇರಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯೋತ್ಸವ ಆಚರಣೆ



ಮೈಸೂರಿನ ಶಿಕ್ಷಕರ ಬಡಾವಣೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಲಕ್ಷ್ಮೀಶಂಕರ್, ಭಾಗ್ಯಮ್ಮ ರೇವತಿ, ಶೋಭಾ, ಛಾಯಾ, ನಾಗರತ್ನ, ಗಾಯತ್ರಿ ಗೌರಮ್ಮ, ರುಕ್ಮಿಣಿ ಅಮ್ಮ, ಪೊಲೀಸ್ ಬಾಬಣ್ಣ, ಗಾಯಕ ಸುರೇಶ, ಸುಭೋದ್, ಮೈಕ್ ಪ್ರಕಾಶ್ ಭಾಗವಹಿಸಿದ್ದರು

ಮಿನಿ ದಸರಾ ಮೆರವಣಿಗೆ ಕಣ್ಣಿಗೆ ಕಟ್ಟಿದ ಕನಕದಾಸರ ಮೂರ್ತಿ ಉತ್ಸವ

ಮೆರವಣಿಗೆ ಮೆರುಗು ತಂದ ಕಲಾತಂಡಗಳು, ಸ್ತಬ್ಧಚಿತ್ರಗಳು





ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂದೆ ಶನಿವಾರ ಬೆಳಗ್ಗೆ ಭಕ್ತ ಕನಕದಾಸರ ಪ್ರತಿಮೆ ಮೆರವಣಿಗೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಇನ್ನಿತರರು ಭಾಗಿಯಾಗಿದ್ದರು. ಮತ್ತೊಂದು ಚಿತ್ರದಲ್ಲಿ ಮೆರವಣಿಗೆಯಲ್ಲಿ ಸಾಗುತ್ತಿರುವ ಸ್ತಬ್ಧಚಿತ್ರ, ಸಾಂಸ್ಕೃತಿಕ ಕಲಾತಂಡಗಳನ್ನು ಕಾಣಬಹುದು

ಮೈಸೂರು, ನ.8(ಎಂಟಿವೈ)– ಸಂತ ಶ್ರೇಷ್ಠ ಭಕ್ತ ಕನಕದಾಸರ ಜನ್ಮ ದಿನದ ಅಂಗವಾಗಿ ಮೈಸೂರಲ್ಲಿ ವಿವಿಧ ಜಾನಪದ ಕಲಾತಂಡ ಹಾಗೂ ಕುರುಬ ಸಮುದಾಯ ದಾರ್ಶನಿಕರ ಜೀವನ ಚರಿತ್ರೆಯ ಸಂದೇಶ ಬಿಂಬಿಸುವ ಸ್ತಬ್ಧಚಿತ್ರಗಳೊಂದಿಗೆ ಕನಕದಾಸರ ಮೂರ್ತಿ ಹಾಗೂ ಭಾವಚಿತ್ರವನ್ನು ಅಲಂಕೃತ ವಾಹನದಲ್ಲಿಟ್ಟು ಭವ್ಯ ಮೆರವಣಿಗೆ ನಡೆಸಲಾಯಿತು.

ಭಕ್ತ ಕನಕದಾಸರ ಜಯಂತ್ಯುತ್ಸವ ಸಮಿತಿ ಹಾಗೂ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಈ ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡ ಹಾಗೂ ಸ್ತಬ್ಧಚಿತ್ರಗಳು ಸಾಗಿ ದಸರಾ ಮೆರವಣಿಗೆಯನ್ನು ನೆನಪಿಸಿತು. ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಶನಿವಾರ ಬೆಳಗ್ಗೆ ಆಯೋಜಿಸಿದ್ದ ಮೆರವಣಿಗೆಯಲ್ಲಿ ಅಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಕನಕದಾಸರ ಪ್ರತಿಮೆಗೆ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಲ್.ನಾಗೇಂದ್ರ ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಇನ್ನಿತರರು ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಬಳಿಕ ಆರಂಭವಾದ ಮೆರವಣಿಗೆ ಕೆ.ಆರ್.ವೃತ್ತ ನ್ಯೂ ಸಯ್ಯಾಜಿರಾವ್ ರಸ್ತೆ ಪಾಠಶಾಲೆ ವೃತ್ತ, ಚಾಮರಾಜ ಜೋಡಿ ರಸ್ತೆ, ಶಾಂತಲಾ ಟಾಕೀಸ್ ವೃತ್ತ ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಅರಸ್ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.

ಮೆರವಣಿಗೆಯಲ್ಲಿ ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಚಂಡೆಮದ್ದಳೆ, ಗೊಂಬೆ ಕುಣಿತ, ಗೊರವರ ಕುಣಿತ, ವೀರಮಕ್ಕಳ ಕುಣಿತ, ಕಂಗೀಲು ನೃತ್ಯ, ಯಕ್ಷಗಾನ ವೇಷಧಾರಿಗಳು ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಸಾಗಿ ಗಮನ ಸೆಳೆದವು. ಇದರೊಂದಿಗೆ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಮಾಹಿತಿಯುಳ್ಳ ಸ್ತಬ್ಧಚಿತ್ರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಭಕ್ತ ಕನಕದಾಸರು, ಮಲೆ ಮಹಾದೇಶ್ವರ ಬೆಟ್ಟದ ದೇವಾಲಯ ನಿರ್ಮಾತೃ ಆಲಂಬಾಡಿ ಜುಂಜೇಗೌಡ, ಹಕ್ಕಬುಕ್ಕ ಸೇರಿದಂತೆ ಕುರುಬ ಸಮುದಾಯದ ಮಹನೀಯರು ಹಾಗೂ ದಾರ್ಶನಿಕರ ಜೀವನ ಸಂದೇಶ ಸಾರುವ ಸ್ತಬ್ಧಚಿತ್ರಗಳು ಸಾಗಿ ಮೆರವಣಿಗೆಗೆ ಮೆರಗು ತುಂಬಿದವು.

ಬೀರೇಶ್ವರರ ಉತ್ಸವ ಮೂರ್ತಿ ಮೆರವಣಿಗೆ: ಕನಕದಾಸರ ಮೂರ್ತಿ ಮೆರವಣಿಗೆಯಲ್ಲಿ ಮೈಸೂರು ಜಿಲ್ಲೆಯ ವಿವಿಧೆಡೆ ಇರುವ ಕುರುಬ ಸಮುದಾಯ ಕುಲದೇವರಾದ ಬೀರೇಶ್ವರ ದೇವಾಲಯಗಳಲ್ಲಿ ಬೀರೇಶ್ವರ ಉತ್ಸವಮೂರ್ತಿ, ಪೂಜಾ ಕುಣಿತವನ್ನು ಸಂಪ್ರದಾಯದಂತೆ ಪೂಜೆ ಸಲ್ಲಿಸಿ ಮೆರವಣಿಗೆಗೆ ತರಲಾಗಿತ್ತು. ಮೆರವಣಿಯುದ್ದಕ್ಕೂ ಪೂಜಾ ಕುಣಿತವನ್ನು ತಮಟೆ, ಡೊಳ್ಳಿನ ತಾಳಕ್ಕೆ ಪೂಜೆ ಹೊತ್ತವರು ನೃತ್ಯ ಮಾಡುತ್ತಾ ಗಮನ ಸೆಳೆದರು.

ಡಿಜೆ ಶಬ್ದಕ್ಕೆ ಕುಣಿದು ಕುಪ್ಪಳಿಸಿದ ಯುವಕರು: ಮೆರವಣಿಗೆಯಲ್ಲಿ ಡಿಜೆ ಶಬ್ದಕ್ಕೆ ಯುವ ಜನರು ದಾರಿಯುದ್ದಕ್ಕೂ ಕುಣಿದು ಕುಪ್ಪಳಿಸಿದರು. ಹಾಲುಮತ ಹಾಗೂ ಕುರುಬ ಸಮುದಾಯವನ್ನು ಬಣ್ಣಿಸುವ ಗೀತೆಗಳಿಗೆ ದಾರಿಯುದ್ದಕ್ಕೂ ನೂರಾರು ಮಂದಿ ಕುಣಿಯುತ್ತಾ ಸಂಭ್ರಮಿಸಿದರು.

ತಮ್ಮ ಕೀರ್ತನೆಗಳ ಮೂಲಕ ಸಮಾಜದ ಡೊಂಕುಗಳನ್ನು ತಿದ್ದಿದವರು ಕನಕದಾಸರು



ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮುದಾಯದ ಸಾಧಕರನ್ನು ಕನಕದಾಸ ಜಯಂತಿ ಆಚರಣೆ ವೇಳೆ ಸನ್ಮಾನಿಸಲಾಯಿತು.

ಮಂಡ್ಯ, ನ.8– ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಡೊಂಕುಗಳನ್ನು ತಿದ್ದಿದವರು ಎಂದು ಶಾಸಕ ಪಿ.ರವಿಕುಮಾರ್ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಕನಕದಾಸ ಜಯಂತಿ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಒಬ್ಬ ಸಾಮಾನ್ಯ ವ್ಯಕ್ತಿಯು ಸಹ ದೇವರನ್ನು ಒಲಿಸಿಕೊಳ್ಳಬಹುದು ಎಂದು ತೋರಿಸಿ ಕೊಟ್ಟವರು ಕನಕದಾಸರು. ಕನಕದಾಸರ ಭಕ್ತಿಗೆ ಶ್ರೀಕೃಷ್ಣ ಮೆಚ್ಚಿ ದಾಸರಿಗೆ ದರ್ಶನ ಕೊಟ್ಟದ್ದು ಇಂದಿಗೂ ಸಹ ಉಡುಪಿಯಲ್ಲಿ ನಾವು ಕಾಣಬಹುದು ಎಂದು ಹೇಳಿದರು.

ಸರ್ಕಾರ 2023ರಲ್ಲಿ ಗ್ಯಾರಂಟಿಗಳನ್ನು ಘೋಷಿಸಿದಾಗ ಇಡೀ ದೇಶದಲ್ಲಿ ಇದು ಸಾಧ್ಯವಿಲ್ಲವೆಂದು ವ್ಯಾಪಕ ಚರ್ಚೆ ಉಂಟಾಗಿತ್ತು. ಒಂದು ಲಕ್ಷ ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಮುಡಿಪಾಗಿಸಿ ರಾಜ್ಯದ ಜನರ ಏಳಿಗೆಗಾಗಿ ಸರ್ಕಾರ ಶ್ರಮಿಸುತ್ತಿದೆ. ಇಂದು ಇಡೀ ದೇಶವೇ ಈ ಯಶಸ್ಸನ್ನು ಕೊಂಡಾಡುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಭ್ರಷ್ಟಾಚಾರ ಮುಕ್ತವಾಗಿ ಆಡಳಿತ ನೀಡಿದ ಏಕೈಕ ಮುಖ್ಯಮಂತ್ರಿ ಎಂದರೆ ಸಿದ್ದರಾಮಯ್ಯನವರು ಎಂದರೆ ತಪ್ಪಾಗಲಾರದು. ಇಂದು ಅನೇಕ ರಾಜ್ಯಗಳು ಗ್ಯಾರಂಟಿ ಯೋಜನೆಗಳ ಮಾದರಿಯನ್ನು ತಮ್ಮ ರಾಜ್ಯದಲ್ಲಿ ಅಳವಡಿಸಿಕೊಂಡಿವೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕನಕದಾಸರ ತತ್ವಗಳನ್ನು ಜೀವಂತವಾಗಿಡಲು ರೂ. 1 ಕೋಟಿ ವೆಚ್ಚದಲ್ಲಿ ಪಾರ್ಕ್ ನಿರ್ಮಾಣಕ್ಕೆ ಸಿದ್ಧತೆ ಮಾಡಲಾಗಿದೆ. ಬಸರಾಳಿನಲ್ಲಿ ಅರ್ಧಕ್ಕೆ ನಿಂತು ಹೋಗಿದ್ದ ಕನಕಭವನ ನಿರ್ಮಾಣಕ್ಕೆ 30 ಲಕ್ಷ ಬಿಡುಗಡೆ ಮಾಡಲಾಗಿದೆ. ಉಮ್ಮಡಹಳ್ಳಿ ಭೀರೇಶ್ವರ ಸಮುದಾಯ ಭವನಕ್ಕೆ 20 ಲಕ್ಷ ಬಿಡುಗಡೆ ಮಾಡಲಾಗಿದೆ. ನೀವೂ ಆಯ್ಕೆ ಮಾಡಿರುವ ಸರ್ಕಾರ ಭ್ರಷ್ಟಾಚಾರ ಮುಕ್ತ ಆಡಳಿತವನ್ನು ನಿಮಗೆ ನೀಡುತ್ತದೆ ಎಂದು ಹೇಳಿದರು. ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, 500 ವರ್ಷಗಳು ಕಳೆದರೂ ಸಹ ಕನಕದಾಸರ ಚಿಂತನೆ ಇಂದಿಗೂ ಪ್ರಸ್ತುತ ಅವರ ತತ್ವಗಳು, ಆದರ್ಶಗಳನ್ನು ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು, ಕನಕ ದಾಸರ ಜಯಂತಿ ಕೇವಲ ಇವತ್ತಿಗೆ ಸೀಮಿತವಾಗಬಾರದು. ಅವರು ಜಗತ್ತಿಗೆ ಸಾರಿದ ಮೌಲ್ಯಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳುವ ಮೂಲಕ ಅವರ ಆಶಯಗಳನ್ನು ಜೀವಂತವಾಗಿ ಇಡಬೇಕು ಎಂದು ಹೇಳಿದರು.

ಕನಕದಾಸರು ತಮ್ಮ ಕೀರ್ತನೆಗಳನ್ನು ಸಾರಿದ ಜಾಗಗಳೆಲ್ಲ ಇಂದು ಪುಣ್ಯ ಸ್ಥಳವಾಗಿವೆ. ವಿಶ್ವಕ್ಕೆ ಏಕತೆ ಸಾರಿದ ಅವರ ಸಂದೇಶಗಳನ್ನು ನಾವು ಮನನ ಮಾಡಿಕೊಳ್ಳಬೇಕು. ಅಂದಿನ ಕಾಲಘಟ್ಟದಲ್ಲೆ ಬಡತನ, ಮೌಢ್ಯತೆ, ಅನಕ್ಷರತೆ ಎಲ್ಲವನ್ನೂ ನೈತಿಕವಾಗಿ ಧಿಕ್ಕರಿಸಿ ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದರು.

ಸಮಾಜದಲ್ಲಿನ ಅಸಮಾನತೆ, ತಾರತಮ್ಯವನ್ನು ನಿರ್ಮೂಲನೆ ಮಾಡಿ ಸಮ ಸಮಾಜವನ್ನು ನಿರ್ಮಾಣ ಮಾಡಬೇಕು ಎಂಬುದು ಅವರ ಆಶಯವಾಗಿತ್ತು ಹಾಗಾಗಿ 'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯ ನಿವೇನಾದರು ಬಲ್ಲಿರಾ" ಎಂಬ ಸಂದೇಶವನ್ನು ವಿಶ್ವಕ್ಕೆ ಸಾರಿದರು ಎಂದು ತಿಳಿಸಿದರು.

ಅಂದಿನ ಕಾಲಘಟ್ಟದಲ್ಲಿ ಸಂಸ್ಕೃತವನ್ನು ಕೃತಿಗಳ ರಚನೆಯಲ್ಲಿ ಬಳಸುತ್ತಿದ್ದರು. ಸಂಸ್ಕೃತ ಕೇವಲ ಶ್ರೀಮಂತ ವರ್ಗದವರಿಗೆ ಮಾತ್ರ ಅರ್ಥವಾಗುತ್ತಿತ್ತು ಹಾಗೂ ಕಲಿಯುತ್ತಿದ್ದರು. ಆದರೆ ಕನಕದಾಸರು ಜನಸಾಮಾನ್ಯರಿಗೂ ತಮ್ಮ ಕೀರ್ತನೆಗಳು ಸುಲಭ ಭಾಷೆಯಲ್ಲಿ ಅರ್ಥವಾಗುವಂತೆ ಬರೆಯುತ್ತಿದ್ದರು ಎಂದು ಹೇಳಿದರು.

ಸಾಹಿತಿಗಳಾದ ಚಿಕ್ಕಣ್ಣ ಮಾತನಾಡಿ, ಕನಕದಾಸರು ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಶ್ರೇಷ್ಠ ನಾಯಕರಲ್ಲಿ ಒಬ್ಬರು, ತಮ್ಮ ತತ್ವಗಳನ್ನು ಸಾರುವ ಮೂಲಕ ಸಮಾಜದ ಡೊಂಕುಗಳನ್ನು ತಿದ್ದಿದವರು. ಅವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳೋಣ ಎಂದು ಕರೆ ನೀಡಿದರು.

ನಂತರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮುದಾಯದ ಸಾಧಕರಿಗೆ ಗೌರವಿಸಿ ಸನ್ಮಾನಿಸಲಾಯಿತು. ಉಪವಿಭಾಗಾಧಿಕಾರಿ ಶಿವಮೂರ್ತಿ, ಮಂಡ್ಯ ತಹಸೀಲ್ದಾರ್ ವಿಶ್ವನಾಥ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ರಾಜ್ಯ ಸಣ್ಣ ಕೈಗಾರಿಕೆಗಳ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆಯ ಅಧ್ಯಕ್ಷ ಸಂದೇಶ್ ಉಪಸ್ಥಿತರಿದ್ದರು.

ನಾಗಮಂಗಲದಲ್ಲೂ ಕನಕ ಜಯಂತಿ ಆಚರಣೆ



ನಾಗಮಂಗಲದಲ್ಲಿ ಶನಿವಾರ ಕನಕ ಜಯಂತಿಯನ್ನು ಆಚರಿಸಲಾಯಿತು.

ನಾಗಮಂಗಲ: ಇಂದು ನಾಗಮಂಗಲ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಶ್ರೀ ಕನಕದಾಸ ಜಯಂತಿ ಕಾರ್ಯಕ್ರಮ ಆಚರಿಸಲಾಯಿತು.

ತಹಸೀಲ್ದಾರ್ ಆದರ್ಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನಕದಾಸರು ಸಮಾಜ ಸುಧಾರಕರೂ ಆಗಿದ್ದರು. ತಮ್ಮ ಕೀರ್ತನೆ, ಉಗಾಭೋಗ ಮಾತ್ರವಲ್ಲದೆ ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತ ಸಾಗರ ಇತ್ಯಾದಿ ಕಾವ್ಯಗಳ ಮೂಲಕ ಸಾಹಿತ್ಯ, ಆಧ್ಯಾತ್ಮಿಕತೆ ಮಾತ್ರವಲ್ಲದೆ ಸಮಾಜ ಸುಧಾರಣೆಗೆ ಹಲ ವಾರು ಕೊಡುಗೆಗಳನ್ನು ನೀಡಿದ್ದಾರೆ. ಸಹಜ ಬದುಕಿನಿಂದ ಕೀರ್ತನಕಾರರಾಗಿ, ತತ್ವಜ್ಞಾನಿಯಾಗಿ, ಸಂತರಾಗಿ, ದಾರ್ಶನಿಕರಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಗೆ ಕನಕದಾಸರು ಅನನ್ಯ ಕೊಡುಗೆಯನ್ನು ನೀಡಿದ್ದಾರೆ ಎಂದರು.

ಕುರುಬ ಸಮುದಾಯದ ಮುಖಂಡ ಪ್ರಸನ್ನ ಮಾತನಾಡಿ ಕುಲ, ಕುಲ ಎಂದು ಹೊಡೆದಾಡದಿರಿ ಹುಚ್ಚಪ್ಪಗಳಿರಾ ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ? ಆತ್ಮ, ಜೀವ, ಗಾಳಿ, ನೀರು, ಅನ್ನ ಯಾವ ಕುಲ?. ಸಮಾಜದಲ್ಲಿ ಜಾತಿ ಪದ್ಧತಿ, ತಾರತಮ್ಯ ತಾಂಡವವಾಡುತ್ತಿದ್ದ ಕಾಲದಲ್ಲಿ ತಮ್ಮ ಕೀರ್ತನೆಗಳ ಮೂಲಕ ಜಾತಿ ಪದ್ಧತಿ ಸೇರಿದಂತೆ ಸಮಾಜದಲ್ಲಿನ ಪಿಡುಗುಗಳ ವಿರುದ್ಧ ಹೋರಾಡಿವರು, ಸಮಾನತೆಯ ತತ್ವ ಸಾರಿದವರು ದಾಸ ಶ್ರೇಷ್ಠ ಕನಕದಾಸರು ಎಂದರು.

ಈ ವೇಳೆ ಕಾರ್ಯನಿರ್ವಹಣಾಧಿಕಾರಿ ಸತೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್, ಕಂದಾಯ ಇಲಾಖೆಯ ಶಿರಸ್ತೇದಾರ್ ಉಮೇಶ್, ಗೋವಿಂದರಾಜು ಇತರ ಅಧಿಕಾರಿ ಉಪಸ್ಥಿತರಿದ್ದರು.

ಧರ್ಮದ ಸಂಘರ್ಷಕ್ಕೆ ಅಂತ್ಯವಾಡದಿದ್ದರೆ ಜಗತ್ತು ಅಧೋಗತಿಗೆ



ಪಾಂಡವಪುರ ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಕನಕದಾಸರ ಜಯಂತಿಯನ್ನು ಶಾಸಕ ದರ್ಶನ್‌ಪುಟ್ಟಣ್ಣಯ್ಯ ಅವರು ಉದ್ಘಾಟಿಸಿದರು.

ಪಾಂಡವಪುರ: ಜಗತ್ತಿನಲ್ಲಿ ನಡೆಯುತ್ತಿರುವ ಜಾತಿ, ಧರ್ಮದ ಸಂಘರ್ಷಗಳಿಂದಾಗಿ ದೇಶದ ಅಭಿವೃದ್ಧಿ ಕುಂಠಿತವಾಗುತ್ತಿದೆ. ಜಾತಿ, ಧರ್ಮದ ಸಂಘರ್ಷಕ್ಕೆ ಅಂತ್ಯವಾಡದಿದ್ದರೆ ಜಗತ್ತು ಅಧೋಗತಿಗೆ ತಲುಪಲಿದೆ ಎಂದು ನಿವೃತ್ತ ಉಪನ್ಯಾಸಕ ಎನ್.ಚಲುವೇಗೌಡ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತ ಹಾಗೂ ನಾಡಹಬ್ಬ ಆಚರಣಾ ಸಮಿತಿ ವತಿಯಿಂದ ಭಕ್ತ ಕನಕದಾಸರ ಜಯಂತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಧಾನ ಭಾಷಣ ಮಾಡಿದರು.

ಜಾತಿ, ಧರ್ಮ ಸಂಘರ್ಷದಿಂದ ಯಾವುದೂ ಉಳಿಯೋದಿಲ್ಲ, ಮನುಷ್ಯ ಜಾತಿ ಒಂದೇ ಎಂಬ ಭಾವನೆಗಳಿಂದ ನಾವೆಲ್ಲರು ಬದುಕಬೇಕು, ಹಾಗಾಗಿ ಜಾತಿ, ಧರ್ಮದ ವ್ಯವಸ್ಥೆಯನ್ನು ಹೋಗಲಾಡಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಜಯಂತಿಗಳು ಕೇವಲ ಜಾತಿಗಳಿಗೆ ಸೀಮಿತಗೊಂಡಿರುವುದು ನಿಜಕ್ಕೂ ದುರಂತವಾಗಿದೆ. 500 ವರ್ಷಗಳ ಹಿಂದೆ ಇದ್ದಂತಹ ಜಾತಿ ವ್ಯವಸ್ಥೆಯ ಇಂದಿಗೂ ಜೀವಂತವಾಗಿದೆ. ಭೂಮಿಯಲ್ಲಿ ಜಾತಿ ವ್ಯವಸ್ಥೆಗೆ ಹತ್ತಿರವಾಗುತ್ತಿದೆ. ರಾಜಕಾರಣಿಗಳು ಹೊಡೆದು ಆಳುತ್ತಿರುವುದರಿಂದ ಜಾತಿ ವ್ಯವಸ್ಥೆ ಜೀವಂತವಾಗಿದೆ. ಜಾತಿ ವಿಚಾರ ಬಂದಾಗ ಜಯಂತಿಗಳನ್ನು ಎಲ್ಲಾ ಸಮುದಾಯಗಳು ಸೇರಿ ಒಗ್ಗಟ್ಟಿನಿಂದ ಜಯಂತಿ ಆಚರಣೆ ಮಾಡಬೇಕು ಎಂದರು.

ಬ್ರಿಟಿಷರು ನಮ್ಮ ದೇಶಕ್ಕೆ ಬಂದಾಗ ನಮ್ಮ ದೇಶದ ಆಹಾರ ಪದ್ದತಿ, ಆಚಾರ–ವಿಚಾರಗಳು, ಸಂಸ್ಕೃತಿ, ಸಂಸ್ಕಾರವನ್ನು ನೋಡಿ ಆಶ್ಚರ್ಯಪಟ್ಟರು. ಭಾರತೀಯರ ಆಚಾರ ವಿಚಾರ ಜತೆಗೆ ನಮ್ಮನ್ನು ಒಡೆದು ಆಳಬೇಕು ಎಂದು ತೀರ್ಮಾನಿಸಿ ನಮ್ಮ ದೇಶವನ್ನಾಳಿದರು. ಹಾಗಾಗಿ ನಾವೆಲ್ಲರು ಜಾಗೃತರಾಗಿ ನಮ್ಮ ಪರಿಸರ, ಆಚಾರ–ವಿಚಾರಗಳನ್ನು ಕಾಪಾಡುವುದು ಹೀಗೆ ನಮ್ಮಪೂರ್ವಿಕರು ನಡೆದುಕೊಂಡ ಬಂದದಾರಿಯಲ್ಲಿ ಸಾಗುವ ಮೂಲಕ ಉತ್ತಮ ಬದುಕುಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಪಂ ಇಓ ವೀಣಾ, ಕುರುಬರ ಸಂಘದ ಕಾರ್ಯದರ್ಶಿ ಗೋಪಾಲ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಸತೀಶ್, ಪುರಸಭೆ ಸದಸ್ಯೆ ಜಯಲಕ್ಷ್ಮಿ ಬಿಇಓ ಧರ್ಮಶೆಟ್ಟಿ ಕಿಸಾನ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಕುರುಬರ ಸಂಘದ ಅಧ್ಯಕ್ಷ ಡಿ.ಹುಚ್ಚೇಗೌಡ, ಉಪಾಧ್ಯಕ್ಷ ಕರೀಗೌಡ, ಕಾರ್ಯದರ್ಶಿ ಗೋಪಾಲ್, ಜಿಲ್ಲಾ ಉಪಾಧ್ಯಕ್ಷ ರೇವಣ್ಣ, ಮುಖಂಡರಾದ ಸಿ.ಸ್ವಾಮೀಗೌಡ, ಗೋಪಾಲ್, ಮಾಕೇಗೌಡ, ರೈತ ಸಂಘದ ಅಧ್ಯಕ್ಷ ವಿಜಯ್ ಕುಮಾರ್, ದಸಂಸ ಮುಖಂಡ ಅಂಕಯ್ಯ, ವೀರ ಶೈವ ಮುಖಂಡ ಮಂಡಿಬೆಟ್ಟಹಳ್ಳಿ ಮಂಜುನಾಥ್, ಕೆಆರ್‌ಎಸ್ ಪಕ್ಷದ ಶಾಂತಿ ಪ್ರಸಾದ್, ಸೇರಿದಂತೆ ಹಲವರು ಇದ್ದರು.

ರೈತನ ಕೃಷಿ ಪಂಪ್‌ಸೆಟ್ ಧ್ವಂಸಗೊಳಿಸಿ ಹಲ್ಲೆ ಆರೋಪ

ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು, ರಕ್ಷಣೆಗೆ ಮನವಿ



ಪಂಪ್‌ಸೆಟ್ ಮನೆಯನ್ನು ಧ್ವಂಸಗೊಳಿಸಿರುವುದು.

ಕೆ.ಆರ್.ಪೇಟೆ: ವಯೋವೃದ್ಧ ರೈತನೊಬ್ಬ ಬೇಸಾಯಕ್ಕೆ ಲಕ್ಷಾಂತರ ರೂ. ಖರ್ಚು ಮಾಡಿ ಕೊರೆಸಿದ್ದ ಕೃಷಿ ಪಂಪ್‌ಸೆಟ್ ಮತ್ತು ಪಂಪ್‌ಸೆಟ್ ಮನೆಯನ್ನು ಹಾಡಹಗಲೇ ಧ್ವಂಸಗೊಳಿಸಿ ರೈತ ಕುಟುಂಬದ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿರುವ ಘಟನೆ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯ ರಂಗನಾಥಪುರ ಗ್ರಾಮದಲ್ಲಿ ನಡೆದಿದೆ.

ರಂಗನಾಥಪುರ ಗ್ರಾಮದ ವಯೋ ವೃದ್ಧ ಬಡ ರೈತ ಜವರಯ್ಯ ರಂಗನಾಥ ಪುರ ಗ್ರಾಮದ ಜಮಾಬಂಧಿಗೆ ಸೇರಿದ ಸರ್ವೆ ನಂ.39/2ರಲ್ಲಿ ಸುಮಾರು 1 ಎಕರೆ 6 ಗುಂಟೆ ಪಿತ್ರಾರ್ಜಿತ ಜಮೀನು ಹೊಂದಿದ್ದು, ಜಮೀನಿನಲ್ಲಿ ಸುಮಾರು 5 ಲಕ್ಷ ರೂ. ಖರ್ಚು ಮಾಡಿ ಕೊಳವೆ ಬಾವಿ ಕೊರೆಸಿ, ಕೃಷಿ ಪಂಪ್ ಸೆಟ್ ಅಳವಡಿಸಿ, ವಿದ್ಯುತ್ ಪಂಪ್ ಸೆಟ್ ಮೀಟರ್ ಸಂರಕ್ಷಣೆಗೆ ಕೃಷಿ ಪಂಪ್‌ಸೆಟ್ ಮನೆ ನಿರ್ಮಾಣ ಮಾಡಿದ್ದರು. ಆದರೆ ಅದೇ ಗ್ರಾಮದ ಕೆಲವರು ಹಳೆಯ ದ್ವೇಷದಿಂದ ಸದರಿ ಜಮೀನಿನಲ್ಲಿ ಕಟ್ಟಿಸಿದ್ದ ಪಂಪ್‌ಸೆಟ್ ಮನೆಯ ಮೇಲ್ಛಾವಣಿ ಮತ್ತು ಬಾಗಿಲನ್ನು ಧ್ವಂಸ ಮಾಡಿ, ಕೊಳವೆ ಬಾವಿಗೆ ಹಾಕಿದ್ದ ಕೇಬಲ್ ಮತ್ತು ವಿದ್ಯುತ್ ಸಂಪರ್ಕ ವೈರ್‌ಗಳನ್ನು ಕೊಯ್ದು ನಾಶ ಮಾಡಿದ್ದಾರೆ.

ಅಲ್ಲದೆ ಸುಮಾರು 20 ಕೆಜಿಯಷ್ಟು ತೂಕ ವಿದ್ದ ಕೊಳವೆ ಬಾವಿಯ ಮೋಟಾರಿಗೆ ಅಳವಡಿಸಿದ್ದ ಕೇಬಲ್ ವೈರ್ ಅನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಇದನ್ನು ಕಣ್ಣಾರೆ ಕಂಡ ಜವರಯ್ಯ ಅವರ ಪತ್ನಿಯ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಯೋವೃದ್ಧ ಜವರಯ್ಯ ಮನವಿ ಮಾಡಿದ್ದಾರೆ.

ರಕ್ಷಣೆಗೆ ಮೊರೆ: ರಂಗನಾಥಪುರ ಗ್ರಾಮದ ವಯೋವೃದ್ಧ ಜವರಯ್ಯ ಮಾತನಾಡಿ, ನಮ್ಮ ಕೃಷಿ ಪಂಪ್‌ಸೆಟ್ ಧ್ವಂಸ ಮಾಡಿ, ಕೇಬಲ್ ಕಳವು ಮಾಡಿ ಸುಮಾರು 5ಲಕ್ಷ ರೂ ನಷ್ಟ ಉಂಟು ಮಾಡಿರುತ್ತಾರೆ. ಅಲ್ಲದೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಪರಿಕರಗಳನ್ನು ನಾಶ ಮಾಡಿರುವ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

ಬಲಿಯಾಗುತ್ತಿರುವ ಹಿರಿಯ ಜೀವಗಳು


ಐಪಿಓಗಳಲ್ಲಿ ಹೂಡಿಕೆ ಮಾಡಲು ಪ್ರೇರೇಪಿಸಿದ್ದಾರೆ. ವಂಚಕರ ಮಾತು ನಂಬಿ, ವಿವಿಧ ರೀತಿ ಒಟ್ಟು 1,44,64,527 ರೂ. ಹಣವನ್ನು ವಂಚಕರು ನೀಡಿದ್ದ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ. ನಂತರದಲ್ಲಿ ಹಣವನ್ನು ವಿತ್ ಡ್ರಾ ಮಾಡಲು ಸಾಧ್ಯವಾಗಿಲ್ಲ. ಗಾಬರಿಯಿಂದ ವಾಟ್ಸಾಪ್ ಮೂಲಕ ಸಂಪರ್ಕಿಸಿ ಪ್ರಶ್ನಿಸಿದಾಗ ಬ್ಯಾಂಕ್‌ನಲ್ಲಿ 58 ಲಕ್ಷ ಭದ್ರತಾ ಠೇವಣಿ ಇಡಬೇಕೆಂದು ಬೇಡಿಕೆ ಬಂದಿದೆ. ಎಷ್ಟು ಬಾರಿ ಪ್ರಯತ್ನಿಸಿದರೂ ವಿವಿಧ ಕಾರಣಗಳನ್ನು ಹೇಳಿದ್ದಾರೆಯೇ ಹೊರತು, ವಿತ್‌ಡ್ರಾಗೆ ಅವಕಾಶ ನೀಡಿಲ್ಲ.

ಪ್ರಕರಣ 3: ಸುಬ್ರಮಣ್ಯನಗರದ 34 ವರ್ಷದ ಸರ್ಕಾರಿ ಉದ್ಯೋಗಿಯೊಬ್ಬರು ಗೂಗಲ್ ಸರ್ಚ್ ಮಾಡಿದಾಗ ಕಾಣಿಸಿದ ಯಾವುದೋ ವೆಬ್‌ಸೈಟ್ ಲಿಂಕ್ ಮೇಲೆ ಕ್ಲಿಕ್ ಮಾಡಿ ಆಪ್ ಡೌನ್ಲೋಡ್ ಮಾಡಿ, ಕುತೂಹಲದಿಂದ ಅದರಲ್ಲಿ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ ನಮೂದಿಸಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ನಂತರ ವಂಚಕರು ಯಾವುದೋ ವಿಶೇಷ ರೀತಿಯ ಮೊಬೈಲ್ ಸಂಖ್ಯೆಯಿಂದ ಹಣ ವರ್ಗಾಯಿಸಬೇಕಾದ ಬ್ಯಾಂಕ್ ಖಾತೆಗಳ ವಿವರ ಹಾಗೂ ವೆರಿಫಿಕೇಷನ್ ಕೋಡ್ ಕಳುಹಿಸಿದ್ದಾರೆ. ಅಧಿಕ ಲಾಭದಾಸೆಯಲ್ಲಿದ್ದ ಸರ್ಕಾರಿ ಉದ್ಯೋಗಿ, ವಂಚಕರು ಸೂಚಿಸಿದ ವಿವಿಧ ಖಾತೆಗಳಿಗೆ ಒಟ್ಟು 87,54,589 ರೂ. ವರ್ಗಾವಣೆ ಮಾಡಿದ್ದಾರೆ. ಪ್ರಾರಂಭದಲ್ಲಿ 1 ಲಕ್ಷ ರೂ. ರಿಟರ್ನ್ಸ್ ನೀಡಿದ್ದು, ಹೆಚ್ಚು ಹಣ ವರ್ಗಾಯಿಸಿದ ನಂತರ ಸಂಪರ್ಕವನ್ನೇ ಕಡಿದುಕೊಂಡಿದ್ದಾರೆ. ಬ್ಯಾಂಕ್ ಖಾತೆಯ ಡೆಬಿಟ್ ಫ್ರೀಜ್ ಆಗಿದೆ ಎಂಬ ಸಂದೇಶ ಬಂದ ನಂತರ ಬ್ಯಾಂಕ್‌ಗೆ ತೆರಳಿ ವಿಚಾರಿಸಿದಾಗ ಮೋಸ ಹೋಗಿರುವುದು ತಿಳಿದಿದೆ.

ಪ್ರಕರಣ 4: ಶ್ರೀರಾಂಪುರದ 63 ವರ್ಷದ ನಿವೃತ್ತರೊಬ್ಬರು ವಾಟ್ಸಾಪ್‌ಗೆ ಬಂದ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಒಂದು ಆಪ್ ಡೌನ್ಲೋಡ್ ಆಗಿದೆ. ನಂತರ ತಮ್ಮ ಮೊಬೈಲ್, ಬ್ಯಾಂಕ್ ಖಾತೆ ಸಂಖ್ಯೆಯನ್ನು ನಮೂದಿಸಿ ನೋಂದಣಿ ಮಾಡಿಕೊಂಡಿದ್ದಾರೆ. ಅಷ್ಟರಲ್ಲೇ ಬ್ಲಾಕ್ ಟ್ರೇಡಿಂಗ್ ಮೂಲಕ ಹಣ ಗಳಿಸುವ ಬಗ್ಗೆ ವಾಟ್ಸಾಪ್ ಸಂದೇಶ ಬಂದಿದೆ. ಅದನ್ನು ನಂಬಿ ಹಂತಹಂತವಾಗಿ 21,71,000 ರೂ. ಹೂಡಿಕೆ ಮಾಡಿ, ಮೋಸ ಹೋಗಿದ್ದಾರೆ.

ನಿಧನ

ಧನರಾಜ್




ಮೈಸೂರು: ಮೈಸೂರು ಪಡುವಾರಹಳ್ಳಿ ಐದನೇ ಮೇನ್, ನಾಲ್ಕನೇ ಕ್ರಾಸ್ ನಿವಾಸಿ ಧನರಾಜ್ (46) ಅವರು ಶುಕ್ರವಾರ (ನ.7) ನಿಧನರಾದರು. ಮೃತರು ಪತ್ನಿ ಪವಿತ್ರ, ಪುತ್ರ ರೋಹನ್, ಪುತ್ರಿ ದೀಕ್ಷಿತ್ ಸೇರಿದಂತೆ ಅಪಾರ ಬಂಧುವರ್ಗ ಮತ್ತು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ಅಂದೇ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಬಿಜೆಪಿ ವಾರ್ಡ್ ಅಧ್ಯಕ್ಷ ಮಂಜಪ್ಪ, ಟೈಲರ್‌ಗಳಾದ ಸ್ವಾಮಿ, ಶಂಕರ್, ಮಂಜು, ಕಂಟ್ರಾಕ್ಟರ್ ಶ್ರೀಧರ್ ಸಂತಾಪ ಸೂಚಿಸಿದ್ದಾರೆ.

ಜಿ.ವಿ.ರಾವ್



ಮೈಸೂರು: ಮೈಸೂರು ಬಡಗನಾಡು ಬಳಗದ ಸಂಸ್ಥಾಪಕ ಸದಸ್ಯ ಹಾಗೂ ಮೊದಲ ಕಾರ್ಯದರ್ಶಿ ಜಿ.ವಿ. ರಾವ್ (95) ಅವರು ಶುಕ್ರವಾರ ವೆಲ್ಲೂರಿನ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು. ಇವರು ವೊಲ್ವಸ್, ವೊಲ್‌ಕಾರ್ಟ್ ಹಾಗೂ ಬಲ್ಲಿಬೋಯ್ (ಮುಂಬೈ)ಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ವೆಲ್ಲೂರಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ವಿ.ಸೂರ್ಯಕಾಂತಿ



ಮೈಸೂರು: ಮೈಸೂರು ಜನತಾನಗರ 5ನೇ ಕ್ರಾಸ್ ನಂ.991 ನಿವಾಸಿ ಹಾಗೂ ವೇಣು ಕಲರ್ ಲ್ಯಾಬ್ ಮಾಲೀಕರಾಗಿದ್ದ ದಿವಂಗತ ವೇಣುಗೋಪಾಲ್ ಅವರ ಪತ್ನಿ ಸೂರ್ಯಕಾಂತಿ (69) ಅವರು ಇಂದು ಬೆಳಿಗ್ಗೆ ನಿಧನರಾದರು. ಮೃತರು ಪುತ್ರ ಶ್ಯಾಂ ಸುಂದರ್, ಪುತ್ರಿ ಹೇಮಲತಾ ಹಾಗೂ ಅಪಾರ ಬಂಧುವರ್ಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಪ್ರತಿ ಟನ್ ಕಬ್ಬಿಗೆ 3,300 ರೂ. ದರ; ಸರ್ಕಾರದ ಆದೇಶ



ಬೆಂಗಳೂರು, ನ.8(ಕೆಎಂಶಿ)– ಪ್ರತಿ ಟನ್ ಕಬ್ಬಿಗೆ 3,300 ರೂ. ದರ ಸಕ್ಕರೆ ಕಾರ್ಖಾನೆ ಮಾಲೀಕರ ಸಮ್ಮುಖದಲ್ಲಿಯೇ ನಿಗದಿಯಾಗಿದ್ದು, ಈ ಸಂಬಂಧ ಸರ್ಕಾರದ ಆದೇಶ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ತೀರ್ಮಾನವನ್ನು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಪ್ರತಿಭಟನೆ ನಡೆಸುತ್ತಿರುವ ರೈತರ ಸಮ್ಮುಖದಲ್ಲಿಯೇ ಘೋಷಣೆ ಮಾಡಲಿದ್ದಾರೆ ಎಂದರು.

ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ರೈತ ಮುಖಂಡರೊಂದಿಗೆ ಚರ್ಚಿಸಿ ರಾಜ್ಯ ಸರ್ಕಾರ ಕೈಗೊಂಡ ನಿರ್ಧಾರದ ಬಗ್ಗೆ ಮಾಜಿ ಸಚಿವ ಮುರುಗೇಶ್ ನಿರಾಣಿ ಸೇರಿದಂತೆ ಸಕ್ಕರೆ ಮಾಲೀಕರ ಸಮ್ಮುಖದಲ್ಲಿಯೇ ತೀರ್ಮಾನ ಮಾಡಲಾಗಿದೆ.

ಪ್ರತಿ ಟನ್ ಕಬ್ಬಿಗೆ 3,200 ರೂ.ಗೆ ಮೊದಲು ಒಪ್ಪಿರಲಿಲ್ಲ, ನಂತರದಲ್ಲಿ ಒಪ್ಪಿಕೊಂಡರು, ಕಬ್ಬು ಬೆಳೆಗಾರರಿಗೆ 50 ರೂ.ಗಳನ್ನು ಕಾರ್ಖಾನೆ ಮಾಲೀಕರು ಕೊಡಲಿದ್ದು, ಇನ್ನುಳಿದ 50 ರೂ.ಗಳನ್ನು ಸರ್ಕಾರ ಪ್ರೋತ್ಸಾಹ ಧನವಾಗಿ ಪಾವತಿಸಲಿದೆ. ರಿಕವರಿ ದರ ಶೇಕಡ 10.25 ಇದ್ದರೆ 3,100 ರೂ. ಹಾಗೂ ಜೊತೆಗೆ 100 ರೂ. ಸೇರಿಸಿ ಟನ್ ಕಬ್ಬಿಗೆ 3,200 ರೂ. ನೀಡಲಾಗುವುದು, ರಿಕವರಿ ದರ ಶೇಕಡ 11.25 ಇದ್ದರೆ 3,200 ಜೊತೆಗೆ 100 ರೂ. ಸೇರಿಸಿ ಟನ್ ಕಬ್ಬಿಗೆ ಒಟ್ಟು 3,300 ನೀಡಲಾಗುವುದು, ಬೇರೆ ವಿಚಾರಗಳ ಬಗ್ಗೆ ಪ್ರತ್ಯೇಕ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.



ರಾಜಾತಿಥ್ಯ ಪರಿಶೀಲನೆ : ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕೈದಿಗಳಿಗೆ ರಾಜಾತಿಥ್ಯ ದೊರಕುತ್ತಿರುವ ವಿಡಿಯೊ ವೈರಲ್ ಆಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಕನಕದಾಸರ ಸಂದೇಶ: ಇದಕ್ಕೂ ಮುನ್ನ ದಾಸಶ್ರೇಷ್ಠ ಕನಕದಾಸ ಜಯಂತಿ ಅಂಗವಾಗಿ ಶಾಸಕರ ಭವನ ಆವರಣದಲ್ಲಿನ ಪ್ರತಿಮೆ ಮುಂಭಾಗ ಕನಕದಾಸರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದ ಮುಖ್ಯಮಂತ್ರಿ, ಸಂತ ಕನಕದಾಸರ ಜಯಂತಿಯನ್ನು ಸರ್ಕಾರ ಶ್ರದ್ಧಾಭಕ್ತಿಯಿಂದ ರಾಜ್ಯಾದ್ಯಂತ ಆಚರಿಸುತ್ತಿದೆ. ದಾಸರ ಸಂದೇಶ ನಾಡಿನ ಜನತೆಗೆ ತಿಳಿಸುವ ಪ್ರಯತ್ನ ಮಾಡುತ್ತಿದೆ ಎಂದರು. ಕನಕದಾಸರು ಸಮಾಜದಲ್ಲಿ ಬದಲಾವಣೆ ತರಲು ಬಯಸಿದ್ದರು, ಶ್ರೀಕೃಷ್ಣನ ಮಹಾ ಭಕ್ತರಾಗಿ ಉಡುಪಿಯಲ್ಲಿ ಕನಕನ ಕಿಂಡಿ ನಿರ್ಮಾಣವಾಗಲು ಕಾರಣರಾದರು, ಅಂಥವರ ಜನ್ಮದಿನ ಆಚರಿಸುವ ಮೂಲಕ ಜನತೆಗೆ ಕನಕದಾಸರ ಬಗ್ಗೆ ತಿಳಿಸಿಕೊಡಲಾಗುತ್ತಿದೆ, ಅವರು ಕುರುಬ ಜನಾಂಗದಲ್ಲಿ ಹುಟ್ಟಿದ್ದರೂ ವಿಶ್ವಮಾನವರಾದರು ಎಂದರು.

ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಹೇಳುವ ಮೂಲಕ ಮನುಷ್ಯರೆಲ್ಲರೂ ಒಂದೇ ಎಂದು ಸಾರಿದರು ಎಂದರು.

ಬೆಳಗಾವಿ ರೈತರ ಸಂಭ್ರಮ; ಬಾಗಲಕೋಟೆಯಲ್ಲಿ ಪ್ರತಿಭಟನೆ

ಬೆಳಗಾವಿ, ನ.8–ಕಬ್ಬು ದರ ನಿಗದಿಗೆ ಒತ್ತಾಯಿಸಿ ಬೆಳಗಾವಿಯಲ್ಲಿ ಧರಣಿ ನಡೆಸುತ್ತಿದ್ದ ರೈತರು, ಶನಿವಾರ ಸಕ್ಕರೆ ಸಚಿವರ ಮನವಿ ಆಧರಿಸಿ ಪ್ರತಿಭಟನೆಯನ್ನು ವಾಪಸು ಪಡೆದು ಸಂಭ್ರಮಾಚರಣೆ ಮಾಡಿದ್ದಾರೆ. ಅದೇ ವೇಳೆ ಬಾಗಲಕೋಟೆ ರೈತರು ಪ್ರತಿಭಟನೆ ಮುಂದುವರೆಸಿದ್ದಾರೆ. ಬೆಳಗಾವಿಯಲ್ಲಿ ಧರಣಿನಿರತರನ್ನು ಭೇಟಿಯಾದ ಸಕ್ಕರೆ ಸಚಿವರು, ದರ ಗೊಂದಲಕ್ಕೆ ಕೇಂದ್ರ ಕಾರಣ. ರೈತರ ಮೇಲಿನ ಕಾಳಜಿಗೆ ನಾವು ಏನು ಮಾಡಲು ಸಾಧ್ಯವೋ ಮಾಡಿದ್ದೇವೆ. ಧರಣಿ ಕೈಬಿಡಬೇಕು ಎಂದು ಕೋರಿದರು. ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ, ಅಧ್ಯಕ್ಷ ಚೂಣಪ್ಪ ಪೂಜಾರಿ ಧರಣಿ ಕೈಬಿಡಲಾಗಿದೆ ಎಂದು ಪ್ರಕಟಿಸಿದರು. ಈ ವೇಳೆ ರೈತರು ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ಆದರೆ, ಬಾಗಲಕೋಟೆ ರೈತರು ರೂ. 3500 ದರ ನಿಗದಿಪಡಿಸಬೇಕೆಂಬ ಪಟ್ಟು ಸಡಲಿಸದೇ ಶನಿವಾರವೂ ಪ್ರತಿಭಟನೆ ಮುಂದುವರೆಸಿದ್ದಾರೆ.

ರೈತ ಸಂಘದ ಹೋರಾಟಗಾರ ಪ್ರಕಾಶ ನಾಯ್ಕರ ಮಾತನಾಡಿ, ರಾಜ್ಯದಲ್ಲಿ ರಾಜಕಾರಣಿಗಳ ಬಿಟ್ಟರೆ ಬೇರೆ ಯಾರದ್ದೂ ಸಕ್ಕರೆ ಕಾರ್ಖಾನೆಗಳು ಇಲ್ಲ. ಇದರಿಂದ ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ಪ್ರಮಾಣದಲ್ಲಿ ರಾಜ್ಯದಲ್ಲಿ ಆಡಳಿತವಿರುವ ಸರ್ಕಾರಕ್ಕೆ ಕಬ್ಬು ಬೆಲೆ ನಿಗದಿಗೆ ಅಡ್ಡಿಯಾಗಿವೆ ಎಂದು ತಿಳಿದಿದೆ. ರೂ. 3,500 ಕಬ್ಬು ಬೆಲೆ ನಿಗದಿ ಮಾಡದೆ ಇರುವ ಕಾರ್ಖಾನೆ ಮಾಲೀಕರ ಹಾಗೂ ರಾಜ್ಯ, ಕೇಂದ್ರ ಸರ್ಕಾರಗಳ ವಿರುದ್ಧ ಹರಿಹಾಯ್ದರು.

ಡಿ.1ರಿಂದ 19ರವರೆಗೆ ಸಂಸತ್ತಿನ ಚಳಿಗಾಲದ ಅಧಿವೇಶನ

ನವದೆಹಲಿ: ಡಿಸೆಂಬರ್ 1ರಿಂದ 19ರವರೆಗೆ ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದು, 2025ರ ಡಿ.1ರಿಂದ 19ರವರೆಗೂ ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಸುವ ಸರ್ಕಾರದ ಪ್ರಸ್ತಾವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಹಾಗೂ ಜನರ ಆಶೋತ್ತರಗಳನ್ನು ಈಡೇರಿಸಲು ರಚನಾತ್ಮಕ ಹಾಗೂ ಅರ್ಥಪೂರ್ಣ ಅಧಿವೇಶನವನ್ನು ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ.

ಬಿಹಾರ ಚುನಾವಣೆ ನಂತರ ನಡೆಯುತ್ತಿರುವ ಸಂಸತ್ತಿನ ಚಳಿಗಾಲದ ಅಧಿವೇಶನ ಮಹತ್ವದ್ದಾಗಿದೆ. ಬಿಹಾರದಲ್ಲಿ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ನಂತರ ಮೊದಲ ಹಂತದ ಚುನಾವಣೆ ನಡೆಸಲಾಗಿದೆ. ವಿರೋಧ ಪಕ್ಷಗಳು ರಾಷ್ಟ್ರವ್ಯಾಪಿ SIR, ಹರಿಯಾಣ, ಕರ್ನಾಟಕ, ಮಹಾರಾಷ್ಟ್ರದಲ್ಲಿ ಮತ ಕಳ್ಳತನ ಆರೋಪ ವಿಚಾರ ಪ್ರಸ್ತಾಪಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ. ಜು.21ರಿಂದ ಆ.21ರವರೆಗೆ ನಡೆದ ಕೊನೆಯ ಸಂಸತ್ ಅಧಿವೇಶನ ಪದೇ ಪದೇ ಅಡ್ಡಿ, ಮುಂದೂಡಿಕೆ ಮತ್ತು ಸಭಾ ತ್ಯಾಗಗಳಿಗೆ ಸಾಕ್ಷಿಯಾಗಿತ್ತು.

ದೇಶದ ಮುಂದಿನ ಕಾರ್ಯಾಚರಣೆ ಯೋಜನೆಯಾಗಿರುವ ಎಲ್‌ಸಿಎ ಏರ್ ಫೋರ್ಸ್ ಎಂಕೆ 2 ತೇಜಸ್ ಯುದ್ಧ ವಿಮಾನ; ಮುಂದಿನ ಒಂದೂವರೆ ವರ್ಷದಲ್ಲಿ ಮೊದಲ ಹಾರಾಟದ ನಿರೀಕ್ಷೆ

ಎಡಿಎ ಸಂಸ್ಥೆಯ ವಿಜ್ಞಾನಿ ಡಾ.ಅಂಬಾಲಾಲ್ ವಿ.ಪಟೇಲ್



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಯುದ್ಧ ವಿಮಾನಗಳ ಕುರಿತು ಎಡಿಎ ಸಂಸ್ಥೆಯ ವಿಜ್ಞಾನಿ ಡಾ.ಅಂಬಾಲಾಲ್ ವಿ.ಪಟೇಲ್ ಮಾತನಾಡಿದರು.

ಮೈಸೂರು,ನ.8(ಪಿಎಂ)– ದೇಶದ ಮುಂದಿನ ಕಾರ್ಯಾಚರಣೆಯ ಯೋಜನೆಯಾಗಿರುವ 'ಎಲ್‌ಸಿಎ ಏರ್ ಫೋರ್ಸ್ ಎಂಕೆ 2 (ತೇಜಸ್ ಯುದ್ಧ ವಿಮಾನ)' ಮುಂದಿನ ಒಂದೂವರೆ ವರ್ಷದಲ್ಲಿ ಮೊದಲ ಹಾರಾಟ ನಡೆಸುವ ನಿರೀಕ್ಷೆ ಇದೆ ಎಂದು ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಬೆಂಗಳೂರಿನಲ್ಲಿರುವ ಎಡಿಎ (ವೈಮಾನಿಕ ಅಭಿವೃದ್ಧಿ ಸಂಸ್ಥೆ) ಸಂಸ್ಥೆಯ ಫ್ಲೈಟ್ ಕಂಟ್ರೋಲ್ ಲಾಸ್‌ನ ಅಸೋಸಿಯೇಟ್ ಟೆಕ್ನಾಲಜಿ ನಿರ್ದೇಶಕ ಡಾ.ಅಂಬಾಲಾಲ್ ವಿ.ಪಟೇಲ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆಯ ಎಸ್‌ಪಿ ಭಟ್ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ 'ಫ್ಲೈಟ್ ಕಂಟ್ರೋಲ್ ಸಿಸ್ಟಮ್; ಡಿಸೈನ್ ಅಂಡ್ ಡೆವಲಪ್‌ಮೆಂಟ್ ಫಾರ್ ಹೈ ಪರ್ಫಾರ್ಮೆನ್ಸ್ ಕೊಂಬಾಟ್ ಏರ್‌ಕ್ರಾಫ್ಟ್ (ಹಾರಾಟ ನಿಯಂತ್ರಣ ವ್ಯವಸ್ಥೆ; ಉನ್ನತ ಕಾರ್ಯಕ್ಷಮತೆಯ ಯುದ್ಧ ವಿಮಾನಗಳಿಗಾಗಿ ವಿನ್ಯಾಸ ಮತ್ತು ಅಭಿವೃದ್ಧಿ)' ಕುರಿತು ಶನಿವಾರ ಹಮ್ಮಿಕೊಂಡಿದ್ದ ವಿಚಾರಗೋಷ್ಠಿಯಲ್ಲಿ ವಿಚಾರ ಮಂಡಿಸಿದರು.

ಭಾರತವು 2035ರ ವೇಳೆಗೆ ಯುದ್ಧ ವಿಮಾನಗಳ ಸಂಬಂಧ ಸಂಪೂರ್ಣ ಸ್ವಾವಲಂಬನೆ ಸಾಧಿಸುವ ಗುರಿ ಹೊಂದಿದೆ. 1980ರ ದಶಕದ ಸಂದರ್ಭದಲ್ಲಿ ದೇಶದಲ್ಲಿ ನಮ್ಮದೇ ಆದ ವಾಯುಯಾನ ಹೊಂದುವ ನಿಟ್ಟಿನಲ್ಲಿ ಹೆಜ್ಜೆ ಹಾಕಲಾಯಿತು. ಈ ಸಂಬಂಧ ಸಮೀಕ್ಷೆ ಸೇರಿದಂತೆ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸುಮಾರು 2ರಿಂದ 3 ವರ್ಷಗಳು ಬೇಕಾದವು ಎಂದರು.

ಈಗ ನಾವು ಮುಂದಿನ ಪೀಳಿಗೆಯ ವಿಮಾನ ಸಹ ಹೊಂದುತ್ತಿದ್ದು, ವಿನ್ಯಾಸ ನಿರ್ಣಾಯಕ ಹಂತದಲ್ಲಿದೆ. ಈಗಾಗಲೇ ಸರ್ಕಾರ ಅಗತ್ಯ ಅನುದಾನ ಮಂಜೂರು ಮಾಡಿದೆ. ಇದು ಮಧ್ಯಮ ಯುದ್ಧ ವಿಮಾನವಾಗಿದ್ದು, ಸಂಕ್ಷಿಪ್ತವಾಗಿ ಎಎಂಸಿಎ ಎಂದು ಕರೆಯಲಾಗುತ್ತದೆ. ಪೈಲಟ್ ಇಲ್ಲದೇ ಹಾರಾಟ ಹಾಗೂ ಕಾರ್ಯಾಚರಣೆ ಎರಡನ್ನೂ ನಡೆಸುವ ಎಲ್‌ಸಿಎ ವರ್ಗದ ಯುದ್ಧ ವಿಮಾನದ ಯೋಜನೆ ಇದಾಗಿದೆ. ದೇಶವು ಹೈಸ್ಪೀಡ್ ಕಾಂಪ್ಯಾಕ್ಟ್ ವಿಮಾನಗಳ ಉನ್ನತ ತಂತ್ರಜ್ಞಾನವನ್ನು ಹೊಂದಿದೆ ಎಂದು ತಿಳಿಸಿದರು.

ಎಲ್‌ಸಿಎ (ತೇಜಸ್) ವಿನ್ಯಾಸ ಮತ್ತು ಅಭಿವೃದ್ಧಿಗೆ ಎಡಿಎ ನೋಡಲ್ ಏಜೆನ್ಸಿಯಾಗಿದೆ. ಈ ಯುದ್ಧ ವಿಮಾನ ಅಭಿವೃದ್ಧಿಯಲ್ಲಿ ಹೆಚ್‌ಎಎಲ್ ಪ್ರಮುಖ ಪಾಲುದಾರ ಸಂಸ್ಥೆಯಾಗಿದೆ. ಅಲ್ಲದೆ, ಡಿಆರ್‌ಡಿಓ, ಸಿಎಸ್‌ಐಆರ್, ಇತರ ಸರ್ಕಾರಿ ಪ್ರಯೋಗಾಲಯಗಳು, ಸಾರ್ವಜನಿಕ ವಲಯದ ಉದ್ಯಮಗಳು, ಖಾಸಗಿ ಕೈಗಾರಿಕೆಗಳು, ಶೈಕ್ಷಣಿಕ ಸಂಸ್ಥೆಗಳು, ಭಾರತೀಯ ವಾಯು ಪಡೆ, ಸರ್ಕಾರಿ ಪ್ರಮಾಣೀ ಕೃತ ಸಂಸ್ಥೆಗಳು ಸೇರಿದಂತೆ ಹಲವು ಸಂಸ್ಥೆಗಳು ತಂತ್ರಜ್ಞಾನ ಅಭಿವೃದ್ಧಿಯ ಪಾಲುದಾರರಾಗಿ ಭಾಗವಹಿಸಿವೆ ಎಂದರು. ಎಲ್‌ಸಿಎ ಯುದ್ಧ ವಿಮಾನಗಳ ಸಂಬಂಧ ಯಾವುದೇ ಪ್ರಮುಖ ಅಪಘಾತವಿಲ್ಲದೆ ಸುಮಾರು 5 ಸಾವಿರ ಪರೀಕ್ಷಾರ್ಥ ಹಾರಾಟ ನಡೆಸಿರುವುದು ದೇಶದ ಹೆಗ್ಗಳಿಕೆ ಎಂದರು. ಇಂಜಿನಿಯರ್‌ಗಳ ಸಂಸ್ಥೆಯ ಮೈಸೂರು ಘಟಕದ ಅಧ್ಯಕ್ಷ ಹೆಚ್.ಎಸ್. ಸುರೇಶ್‌ಬಾಬು, ಕಾರ್ಯಕ್ರಮದ ಸಂಚಾಲಕ ಡಾ.ಆರ್.ದೀಪು ಮತ್ತಿತರರು ಹಾಜರಿದ್ದರು.

ಮೈಸೂರಿನ ಸಂಗೀತ ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ

ಜನ್ನಿ ಸೇರಿ ಮೂವರಿಗೆ ರಾಜ್ಯಪಾಲರಿಂದ ಗೌರವ ಡಾಕ್ಟರೇಟ್ ಪ್ರದಾನ

ಮೈಸೂರು, ನ.8(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಇಂದು ನಡೆಯಿತು.

ಮೈಸೂರಿನ ಲಕ್ಷ್ಮಿಪುರಂನ ವಿಶ್ವವಿದ್ಯಾನಿಲಯದ ಆವರಣದಲ್ಲಿ ಇಂದು ನಡೆದ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು, ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ(ಜನ್ನಿ), ಸಂಸ್ಕೃತ ಮತ್ತು ಸಂಗೀತ ಕ್ಷೇತ್ರದ ಪ್ರೊ.ಬಿ.ಆರ್.ಶೇಷಾದ್ರಿ ಅಯ್ಯಂಗಾರ್ ಹಾಗೂ ಜಾನಪದ ಕ್ಷೇತ್ರದ ಜಿ.ಎಂ.ಶಿವಪ್ರಸಾದ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ತರುವಾಯ ಬೆಂಗಳೂರಿನ ಹವ್ಯಾಸಿ ತಂಡಗಳ ಸಾಂಸ್ಕೃತಿಕ ಅಧ್ಯಯನ ವಿಭಾಗದ ಡಾ.ಕೆ.ವಿ.ನಾಗರಾಜ್ ಮೂರ್ತಿ, ಜಾನಪದ ಪ್ರದರ್ಶನ ಕಲೆಗಳ ಮೇಲೆ ಡಿಜಿಟಲ್ ಮಾಧ್ಯಮ ರೂಪಾಂತರ ಪ್ರಭಾವ: ಬಹು ಆಯಾಮದ ವಿಶ್ಲೇಷಣೆಗೆ ಡಾ.ಶಿವಕುಮಾರ್ ಕನಸೋಗಿ, ಚಲನ ಶಾಸ್ತ್ರ ಸಂಪ್ರದಾಯ ಮತ್ತು ಪರಿವರ್ತನೆ ನೃತ್ಯನಾದ ಯೋಗದಲ್ಲಿ ಅಧ್ಯಯನ ಮಾಡಿದ ಡಾ.ಹೆಚ್.ಕೆ.ಶೀಲಾ ಶ್ರೀಧರ್ ಅವರಿಗೆ ಡಿ.ಲಿಟ್ (ಡಾಕ್ಟರೇಟ್ ಆಫ್ ಲಿಟ್ರೇಚರ್) ಅನ್ನು ರಾಜ್ಯಪಾಲರು ಪ್ರದಾನ ಮಾಡಿದರು

ಅಲ್ಲದೆ ಕಲ್ಯಾಣ ಕರ್ನಾಟಕ ಸಾಮಾಜಿಕ ಜಾಗೃತಿಯಲ್ಲಿ ರಂಗಭೂಮಿ ಕುರಿತ ಅಧ್ಯಯನಕ್ಕಾಗಿ ಡಾ.ಕೆ.ಎಂ.ಕುಮಾರಸ್ವಾಮಿ, ಡಾ.ಚಂದ್ರಶೇಖರ ಕಂಬಾರರ ನಾಟಕಗಳ ವೈವಿಧ್ಯತೆಯ ಆಯಾಮಗಳು ವಿಚಾರದಲ್ಲಿ ಡಾ.ಕೆಂಪೇಗೌಡ, Exploring Nayikabheda in the leghukavyas of Sanskrit and Kannada Literature and its Adaption to Dance ಅಧ್ಯಯನ ಮಾಡಿದ ಡಾ.ರಶ್ಮಿ ಪ್ರಸಾದ್ ಹಾಗೂ ರಂಗಭೂಮಿಯಲ್ಲಿ ಪಾರಂಪರಿಕ ಸಮರ ಕಲೆಗಳ ಪ್ರಯೋಗದಲ್ಲಿ ಅಧ್ಯಯನ ಮಂಡಿಸಿದ ಡಾ.ಹಾಸನ್ ರಘು ಅವರಿಗೆ ಡಿ.ಲಿಟ್ ಪ್ರದಾನ ಮಾಡಲಾಯಿತು.

ಜೊತೆಗೆ 2024–25 ನೇ ಶೈಕ್ಷಣಿಕ ಸಾಲಿನಲ್ಲಿ ರ್‍ಯಾಂಕ್ ಪಡೆದ ಸ್ನಾತಕ ಪದವಿಯ 7 ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ಪದವಿಯ 5 ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಚಿನ್ನದ ಪದಕ ನೀಡಿದರು.

ಕಲೆ, ಸಂಸ್ಕೃತಿ ಅಪಾಯದಲ್ಲಿಲ್ಲ ಎಂಬ ಆತಂಕ ದೂರವಾಗಿದೆ: ಘಟಿಕೋತ್ಸವ ಭಾಷಣ ಮಾಡಿದ ಕೇರಳದ ಕುಲಪತಿ ಪ್ರೊ.ಅನಂತ ಕೃಷ್ಣ ಅವರು, ನಮ್ಮ ಕಲೆ ಮತ್ತು ಸಂಸ್ಕೃತಿ ಯಾವುದೇ ಸಂದರ್ಭದಲ್ಲೂ ಅಪಾಯದಲ್ಲಿಲ್ಲ ಹಾಗೂ ಸ್ಥಳಾಂತರಗೊಳ್ಳುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಭವಿಷ್ಯದ ಕಲಾತ್ಮಕ ಸಂಪ್ರದಾಯಗಳಿಗೆ ಧಕ್ಕೆಯಾಗುತ್ತದೆ ಎಂಬ ಆತಂಕವಿತ್ತು. ನಮ್ಮ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಅದರ ಮೌಲ್ಯಗಳು ಮರೆಯಾಗಬಹುದು ಎಂಬ ಭಯವಿತ್ತು ಹಾಗೂ ಈಗಲೂ ಇದೆ. ಆದರೆ ಸಾಂಸ್ಕೃತಿಕ ಹಾಗೂ ಸಂಗೀತದಲ್ಲಿ ಇಂದು ಅದ್ಭುತ ಕಲಾವಿದರ ಗುಂಪು ಪದವಿ ಪಡೆಯುತ್ತಿರುವುದನ್ನು ನೋಡಿ ನನ್ನ ಕೆಟ್ಟ ಭಯ ಅಸಂಗತವಾದವು. ಈ ಮೂಲಕ ನಮ್ಮ ಕಲೆ ಹಾಗೂ ಸಂಸ್ಕೃತಿಗಳು ಯಾವುದೇ ಸಂದರ್ಭದಲ್ಲೂ ಅಪಾಯದಲ್ಲಿಲ್ಲ ಅಥವಾ ಸ್ಥಳಾಂತರಗೊಳ್ಳುವುದಿಲ್ಲ ಎಂದು ಚಿಂತೆ ಈಗ ದೂರವಾಗಿದೆ ಎಂದು ಹೇಳಿದರು.

ನಾವು ಸಮಕಾಲಿನ ಜಗತ್ತಿನಲ್ಲಿ ವಾಸ ಮಾಡುತ್ತಿದ್ದೇವೆ. ಕಲೆ, ಸಾಂಪ್ರದಾಯಿಕ ಹಾಗೂ ಆಧುನಿಕ ಅಭಿವ್ಯಕ್ತಿ ರೂಪಗಳೊಂದಿಗೆ ವ್ಯವಹರಿಸುತ್ತಿದ್ದೇವೆ ಎಂಬ ಗ್ರಹಿಕೆಯನ್ನು ದೃಢೀಕರಿಸಬೇಕು. ಸಾಂಪ್ರದಾಯಿಕ ಅಥವಾ ಶಾಸ್ತ್ರೀಯ ರೂಪಗಳು ಆಧುನಿಕವಾಗಿಲ್ಲದಿರಬಹುದು. ಆದರೆ ಅವುಗಳ ಅಸ್ತಿತ್ವದ ಕಾರಣದಿಂದ ಸಮಕಾಲೀನವಾಗಿವೆ ಎಂದು ತಿಳಿಸಿದರು.



ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಶನಿವಾರ ನಡೆದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಜಿ.ಎಂ.ಶಿವಪ್ರಸಾದ್, ಪ್ರೊ.ಬಿ.ಆರ್.ಶೇಷಾದ್ರಿ ಅಯ್ಯಂಗಾರ್, ಹೆಚ್.ಜನಾರ್ಧನ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಜಗತ್ತಿನ ಸಂಕೀರ್ಣ ಸವಾಲು ಎದುರಿಸಲು ಕಲೆಯೇ ಮದ್ದು

“ಜಗತ್ತು ಇಂದು ಸಂಕೀರ್ಣ ಸವಾಲುಗಳನ್ನು ಎದುರಿಸುತ್ತಿದೆ. ಆದರೆ ಈ ಸವಾಲುಗಳನ್ನು ದಿಟ್ಟತನದಿಂದ ಎದುರಿಸುವ ಹಾಗೂ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕಲೆ ಪ್ರಮುಖ ಪಾತ್ರ ವಹಿಸುತ್ತದೆ. ಸಂವಾದವನ್ನು ಪ್ರೇರೇಪಿಸುವ, ಚಿಂತನೆ ಹೆಚ್ಚಿಸುವ ಹಾಗೂ ಸಾಮಾಜಿಕ ಬದಲಾವಣೆಯನ್ನು ಪ್ರತಿಪಾದಿಸುವ ಸಾಮರ್ಥ್ಯವನ್ನು ಕಲೆ ಹೊಂದಿದೆ. ಪ್ರತಿಯೊಬ್ಬರು ವೈಯಕ್ತಿಕ ಯಶಸ್ಸು ಗಳಿಸಿ, ಸಮಾಜದ ಸುಧಾರಣೆಗೆ ಕೊಡುಗೆ ನೀಡಲು ತಮ್ಮ ಪ್ರತಿಭೆ ಬಳಸಿಕೊಳ್ಳಬೇಕು. ಇದಕ್ಕೆ ನನ್ನ ಸಂಪೂರ್ಣ ಪ್ರೋತ್ಸಾಹವಿದೆ. ಪದವೀಧರರಾಗಿ ಜಗತ್ತಿಗೆ ಕಾಲಿಡುತ್ತಿರುವ ನೀವು ಕೇವಲ ಪದವಿಯನ್ನು ಹೊಂದಿರುವ ವ್ಯಕ್ತಿಗಳೆಂದು ಭಾವಿಸದೆ ನಾವು ಕಲೆಗಳ ರಾಯಭಾರಿಗಳೆಂದು ಭಾವಿಸಿ. ಸಂಸ್ಕೃತಿ ರೂಪಿಸುವ, ಸಕಾರಾತ್ಮಕ ಬದಲಾವಣೆ ತರುವ ಶಕ್ತಿ ನಿಮಗಿದ್ದು, ಗಡಿಗಳನ್ನು ಮೀರಿ ಕಲೆ ಮೂಲಕ ಎಲ್ಲರನ್ನು ಒಟ್ಟುಗೂಡಿಸಿ.

–ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್



ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯಲ್ಲಿ ನಡೆದ 10ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ (ಎಡದಿಂದ) ಎ.ಶ್ರಾವ್ಯ, ವಿ.ಲತಾ, ಪಿ.ಪುನೀತ, ಡಿ.ಎನ್.ಇಂದ್ರಕುಮಾರ್, ಎಂ.ಸಂಜಯ್, ಎಸ್.ಶ್ರೀಕಾಂತ್, ಎಂ.ಬಿ.ಸುಜನ ಹಾಗೂ ಸಿ.ನಂಜುಂಡಸ್ವಾಮಿ ಅವರನ್ನು ಕಾಣಬಹುದು.

ಸಂಗೀತ ಕಲಿಕೆಗೆ ರೇಡಿಯೋ ಸ್ಫೂರ್ತಿ, ಮರು ಮೌಲ್ಯಮಾಪನದಿಂದ 3 ಚಿನ್ನ

ಇಂದು ನಡೆದ ಸಂಗೀತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ಪಡೆದ ಪ್ರತಿಯೊಬ್ಬರಲ್ಲೂ ಒಂದು ರೀತಿಯ ಸ್ಫೂರ್ತಿ, ಕಠಿಣ ಶ್ರಮದ ಅನುಭವವಿದೆ.

ನಾಲ್ಕು ಚಿನ್ನದ ಪದಕ ಪಡೆದ ಪಿ.ಪುನೀತ ಅವರು ಇಂದು ಸಂಗೀತ ಕ್ಷೇತ್ರದಲ್ಲಿ ಬೆಳವಣಿಗೆ ಸಾಧಿಸಿ ಚಿನ್ನದ ಪದಕ ಪಡೆಯಲು ರೇಡಿಯೋ ಸ್ಫೂರ್ತಿ ಎಂದು ತಿಳಿಸಿದರು.

ಚಿಕ್ಕ ವಯಸ್ಸಿನಿಂದ ರೇಡಿಯೋ ಕೇಳುತ್ತಿದ್ದೆ. ಅಲ್ಲಿ ಬರುತ್ತಿದ್ದ ಸಂಗೀತ ಕಾರ್ಯಕ್ರಮಗಳ ಬಗ್ಗೆ ಪೋಷಕರು ಆಸಕ್ತಿ ಮೂಡಿಸಿದರು. ನಂತರ ಪ್ರತಿದಿನ ಸಂಗೀತ ಕಾರ್ಯಕ್ರಮ ಆಲಿಸುತ್ತಿದ್ದೆ ಎಂದರು.

ಟಿವಿಯಲ್ಲಿ ಬರುವ ಸಂಗೀತ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡುತ್ತಾ ಸಂಗೀತ ಅಧ್ಯಯನವನ್ನು ಮತ್ತಷ್ಟು ಚುರುಕುಗೊಳಿಸಿಕೊಂಡೆ. ಸಂಗೀತ, ಫ್ಯೂಜನ್ ಸೇರಿದಂತೆ ಇತರೆ ಸಂಗೀತ ವಿಚಾರಗಳನ್ನು ಯೂಟ್ಯೂಬ್ ಮೂಲಕ ಅಧ್ಯಯನ ಮಾಡಿದೆ. ಮೊಬೈಲ್ ಅನ್ನು ಈ ಒಂದು ಕಾರ್ಯಕ್ಕಾಗಿ ಹೆಚ್ಚು ಬೆಳೆಸಿಕೊಂಡೆ. ಇದರ ಫಲವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ನನಗೆ 4 ಚಿನ್ನದ ಪದಕ ಬಂದಿದೆ ಎಂದು ಪುನೀತ ತಿಳಿಸಿದರು.

ಎರಡು ಚಿನ್ನದ ಪದಕ ಪಡೆದ ಎಸ್.ಶ್ರೀಕಾಂತ್, ಆರ್ಥಿಕವಾಗಿ ನಾನು ತುಂಬಾ ಕಷ್ಟದಲ್ಲಿದ್ದೆ. ಮೈಸೂರಿನ ರಂಗಾಯಣದಲ್ಲಿ ರಂಗಭೂಮಿ ಬಗ್ಗೆ ಅಧ್ಯಯನ ಮಾಡುತ್ತಾ. ಸಂಗೀತ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ. ಆದರೆ ನನ್ನ ನಿರೀಕ್ಷೆಯಂತೆ ಅಂಕ ಬಾರದಿರುವುದು ನನ್ನನ್ನು ಚಿಂತೆಗೀಡು ಮಾಡಿತು ಎಂದರು.

ಬೆಸ್ತರ ಕುಟುಂಬದಿಂದ ಬಂದಿರುವ ನಾನು ಹಳ್ಳಿಯಲ್ಲಿ ಕಷ್ಟದಿಂದ ಓದಿದೆ. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮದಲ್ಲಿ ನಾಟಕ ಪ್ರದರ್ಶನ ನೀಡುತ್ತಿದ್ದೆ. ತರುವಾಯ ನಾಟಕ ವಿಭಾಗದಲ್ಲಿ ವ್ಯಾಸಂಗ ಮಾಡಿ ಇಂದು ಒಂದು ಪಡೆದಿದ್ದೇನೆ ಎಂದು ನಂಜುಂಡಸ್ವಾಮಿ ತಿಳಿಸಿದರು.

ಶಾಸಕರ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ



ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಕಚೇರಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ವಾಲ್ಮೀಕಿ ಅವರ ಭಾವಚಿತ್ರಕ್ಕೆ ಶಾಸಕ ಕೆ.ಹರೀಶಗೌಡರು ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು. ಈ ವೇಳೆ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಮಹದೇಶ್, ಡಾ.ನಟರಾಜು, ಮಾಜಿ ಉಪಮೇಯರ್ ಕೃಷ್ಣಪ್ಪ, ಪುಷ್ಪವಲ್ಲಿ, ನಗರಪಾಲಿಕೆ ಮಾಜಿ ಸದಸ್ಯ ನಾಗಭೂಷಣ, ಜೆ.ಯೋಗೇಶ್, ಬಿ, ಕುಮಾರ, ಪ್ರಾಧ್ಯಾಪಕರಾದ ಡಾ.ಮಂಜುನಾಥ್, ಜಯಲಕ್ಷ್ಮೀಪುರಂ ಶಿವಪ್ರಕಾಶ್, ನಜರಬಾದ್ ರವಿನಾಯಕ, ಮಂಜುನಾಥಪುರಂ ನಟರಾಜು, ರಮೇಶ್, ಹೇಮಾವತಿ, ಸುಣ್ಣದಕೇರಿ ರೋಹಿತ್, ಗೋಕುಲಂ ಸೋಮಣ್ಣ, ಮಂಜುನಾಥ್, ಇಬ್ರಾಹಿಂ, ಅನಂತು, ಮಂಜು, ಈಶ್ವರ್ ಚಕ್ಕಡಿ, ಬಾಲರಾಜು, ಗುರುರಾಜು, ಬೈಪಾಸ್ ಮಂಜುನಾಥ್, ಜಿನ್ನಹಳ್ಳಿ ರಾಜನಾಯಕ, ಕೆಪಿ ಚಲುವರಾಜು, ರೈಲ್ವೆ ಸಿದ್ದಯ್ಯ, ಮರಿಸ್ವಾಮಿ, ಸಿದ್ದನಾಯಕ, ರಾಜಕೀಯ ಕುಮಾರ, ಕಳಲೆ ಮಹೇಶ್, ಲೋಕೇಶ, ಸೋಮನಾಯಕ, ಡಾ,ಗೋಪಾಲ ಇನ್ನಿತರರು ಉಪಸ್ಥಿತರಿದ್ದರು.

ಯೋಗ ಶಿಕ್ಷಕರ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ

ಮೈಸೂರು,ನ.8(ಜಿಎ)–ಪರಮಹಂಸ ಯೋಗ ಮಹಾ ವಿದ್ಯಾಲಯ, ಇಂಟರ್ ನ್ಯಾಷನಲ್ ಯೋಗ ಶಾಲೆ, ಇಂಟರ್ ನ್ಯಾಷನಲ್ ಯೋಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ಶಿಕ್ಷಕರ ತರಬೇತಿ ಪಡೆದ 15 ನೇ ತಂಡದ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಹಾಗೂ ನೂತನ ತಂಡಕ್ಕೆ ಸ್ವಾಗತ ಕಾರ್ಯಕ್ರಮವನ್ನು ಜಿಲ್ಲಾ ಪತ್ರಕರ್ತರ ಸಂಘದ ಆವರಣದಲ್ಲಿ ನಡೆಸಲಾಯಿತು.

ಈ ವೇಳೆ ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ ಮಾತನಾಡಿ, ಇಂದು ವಿಶ್ವಕ್ಕೆ ಯೋಗ ಶಿಕ್ಷಕರ ಅವಶ್ಯಕತೆಯಿದೆ. ತರಬೇತಿ ಪಡೆದವರಿಗೆ ಆಯುಷ್ ಸಚಿವಾಲಯದ ಮಾನ್ಯತೆ ಪಡೆದ ಪ್ರಮಾಣ ಪತ್ರ ನೀಡಲಾಗುತ್ತಿದೆ. ಇದರಿಂದ ಹೆಚ್ಚಿನ ಉದ್ಯೋಗಾವಕಾಶ ಲಭ್ಯವಿವೆ. ಆಸಕ್ತಿಯುಳ್ಳವರು ದೂ.70901 57993 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಡಾ.ಲಕ್ಷ್ಮಿನಾರಾಯಣ ಶೆಣೈ, ಡಾ.ತರುಣ್ ಕುಮಾರ್, ಡಾ.ಭಾವನಾ, ಬಿ.ಜಿ. ವಿಜಯಕುಮಾರ್, ಡಾ.ಎಸ್.ಕಾವ್ಯ ಮತ್ತಿತರರು ಉಪಸ್ಥಿತರಿದ್ದರು.

ಜೆಕೆ ಟೈರ್ ಸಂಸ್ಥೆಯಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ

ಮೈಸೂರು, ನ.8– ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಸಂಸ್ಥಾಪಕರಾದ ದಿವಂಗತ ಕಮಲಪತಿ ಸಿಂಘಾನಿಯಾ ಅವರ ಜನ್ಮ ದಿನಾಚರಣೆ ಸ್ಮರಣಾರ್ಥ ಹಾಗೂ ಜೆ.ಕೆ.ಟೈರ್ಸ್ ಸಂಸ್ಥಾಪಕರ ದಿನದ ಅಂಗವಾಗಿ ಲಯನ್ಸ್ ಬ್ಲಡ್ ಸೆಂಟರ್–ಜೀವಧಾರ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಮೂರು ಉತ್ಪಾದನಾ ಘಟಕಗಳು ಮತ್ತು ಕಂಪನಿ ಅತಿಥಿಗೃಹ ಒಳಗೊಂಡಂತೆ ಮೈಸೂರಿನ ಜೆಕೆ ಟೈರ್ ಸಂಸ್ಥೆಯ ನಾಲ್ಕು ಸ್ಥಳಗಳಲ್ಲಿ ಏಕಕಾಲದಲ್ಲಿ ನಡೆಸಲಾಯಿತು.

ಜೆಕೆ ಟೈರ್ ಮೈಸೂರು ಘಟಕದ ಉಪಾಧ್ಯಕ್ಷ ವಿ.ಈಶ್ವರರಾವ್, ಏಡ್ಸ್ ನಿಯಂತ್ರಣ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್ ಶಿಬಿರವನ್ನು ಉದ್ಘಾಟಿಸಿದರು.

ಬಳಿಕ ಜೆಕೆ ಟೈರ್ ಉಪಾಧ್ಯಕ್ಷ (ವರ್ಕ್ಸ್) ವಿ.ಈಶ್ವರರಾವ್ ಮಾತನಾಡಿ, ಈ ವರ್ಷ ಜೂನ್ ತಿಂಗಳಲ್ಲಿ 1414 ಯೂನಿಟ್ ರಕ್ತದಾನ ಮಾಡಿ ಇಡೀ ರಾಜ್ಯಕ್ಕೆ ಹೊಸ ಮೈಲಿಗಲ್ಲು ಸ್ಥಾಪಿಸಿದ್ದೇವೆ ಎಂದರು. ತುರ್ತು ಸಂದರ್ಭ ದಲ್ಲೆಲ್ಲಾ ಜೀವಧಾರವು ತಕ್ಷಣ ಸ್ಪಂದಿಸಿದೆ. ಅದು ಯಾವುದೇ ಗುಂಪಿನ ರಕ್ತ ವಾದರೂ ಸರಿ. ಜವಾಬ್ದಾರಿಯುತ ನಾಗ ರಿಕರಾಗಿ, ಇತರರಿಗೆ ಮಾತ್ರವಲ್ಲದೆ ನಮ್ಮ ಸ್ವಂತ ಆರೋಗ್ಯವನ್ನು ಕಾಪಾಡಿಕೊಳ್ಳುವ ಒಂದು ಮಾರ್ಗವಾಗಿಯೂ ರಕ್ತದಾನ ಮಾಡುವುದು ನಮ್ಮ ಕರ್ತವ್ಯ. ರಕ್ತದಾನವು ಆರೋಗ್ಯಕ್ಕೆ ಹಾನಿ ಮಾಡುತ್ತದೆ ಎಂಬ ತಪ್ಪು ಕಲ್ಪನೆಗಳು ಸಂಪೂರ್ಣವಾಗಿ ಆಧಾರರಹಿತವಾಗಿದೆ ಎಂದರು.

ಜೀವಧಾರ ಲಯನ್ಸ್ ಬ್ಲಡ್ ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ಇ. ಗಿರೀಶ್ ಮಾತನಾಡಿ, ಸ್ವಯಂಪ್ರೇರಿತ ರಕ್ತದಾನಕ್ಕೆ ಜೆಕೆ ಟೈರ್‌ನ ಅಪ್ರತಿಮ ಬದ್ಧತೆಯನ್ನು ಪ್ರಶಂಸಿಸಿದರು. ಕರ್ನಾಟಕದಲ್ಲಿ, ಜೆಕೆ ಟೈರ್ ಉದ್ಯೋಗಿಗಳೇ ಅಗ್ರಗಣ್ಯ ರಕ್ತದಾನಿಗಳು ಎಂದರು.

ಜೆಕೆ ಟೈರ್‌ನ ಹಿರಿಯ ಪ್ರಧಾನ ವ್ಯವಸ್ಥಾಪಕ (ಹೆಚ್.ಆರ್., ಐ.ಆರ್. ಮತ್ತು ಇ.ಹೆಚ್.ಎಸ್.) ಜಗದೀಶ್ ಆರ್.; ಜೆಕೆ ಟೈರ್ ಸಂಸ್ಥೆಯ ಅಧಿಕಾರಿಗಳಾದ ರಾಜೀವ್ ಕುಮಾರ್, ನವೀನ್, ರಾಮ್‌ಪ್ರಸಾದ್, ಡೊನಾಲ್ಡ್, ಆರಾಧ್ಯ, ಪರಮೇಶ, ದಿವಾಕರ್ ಹಾಗೂ ವಿಕ್ರಾಂತ ಟೈರ್ಸ್ ಎಂಪ್ಲಾಯೀಸ್ ಯೂನಿಯನ್ ಸಂಘದ ಪದಾಧಿಕಾರಿಗಳಾದ ಕಾಂತರಾಜು, ಚನ್ನಕೇಶವ, ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಜೆ.ಕೆ.ಟೈರ್ಸ್ ಸಂಸ್ಥಾಪಕರ ದಿನದ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.



ಮಂಚೇಗೌಡನಕೊಪ್ಪಲು ಅಭಿಷೇಕ್ ಸರ್ಕಲ್‌ನಲ್ಲಿ ಮಂಚೇಗೌಡ ಟೈಗರ್ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕೃತ ಕೆ.ಬಿ.ಲಿಂಗರಾಜು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯೆ ಪ್ರೇಮಾ ಶಂಕರೇಗೌಡ, ಯುವ ಮುಖಂಡ ಪುನೀತ್, ರವಿ ಡೆಲ್ಲಿ, ಎನ್.ರವಿ, ಶ್ರೀಧರ್, ಮಲ್ಲಿಕಾರ್ಜುನ, ಕೇಬಲ್ ಪುಟ್ಟರಾಜು, ಅವಿನಾಶ್, ವಿಜಯನಗರ ಮಂಜು, ಸಂಘದ ಸದಸ್ಯರು ಉಪಸ್ಥಿತರಿದ್ದರು.

ಕನ್ನಡ ಚಿತ್ರಗೀತೆಗಳ ಕಾರ್ಯಕ್ರಮ ನಾಳೆ

ಮೈಸೂರು,ನ.8(ಜಿಎ)–ಜನ ಚೈತನ್ಯ ಫೌಂಡೇಷನ್ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನ.10ರಂದು ಸಂಜೆ 4.30ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಶೀರ್ಷಿಕೆಯ ಕನ್ನಡ ಚಿತ್ರಗೀತೆ ಹಾಗೂ ಜನಚೈತನ್ಯ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಉದ್ಘಾಟಿಸುವರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಸಿ.ಎನ್.ವೆಂಕಟರಾಜು ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕನ್ನಡ ನಾಡು, ನುಡಿಗೆ ಸಂಬಂಧಿಸಿದ ಗೀತೆಗಳಿಗೆ ಪ್ರಾಧಾನ್ಯತೆ ನೀಡಲಾಗುವುದು ಎಂದರು. ಗೋಷ್ಠಿಯಲ್ಲಿ ಜಾಯ್ಸ್ ವೈಶಾಕ್, ಕೆ.ಎಸ್.ಶೇಷಾದ್ರಿ, ವಿಜಯ ಆನಂದ್, ವಿಕಾಸ್ ಇದ್ದರು.



ರಾಜ್ಯೋತ್ಸವ ಪುರಸ್ಕಾರ

ಮಹಾರಾಜ ಕಾಲೇಜಿನ ಜಾನಪದ ಪ್ರಾಧ್ಯಾಪಕಿ ಪ್ರೊ.ವಿಜಯಲಕ್ಷ್ಮಿ ಮನಾಪುರ ಅವರು ಕನ್ನಡ ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಜಿಲ್ಲಾಡಳಿತದ ವತಿಯಿಂದ ನೀಡುವ 2025ನೇ ಸಾಲಿನ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರವನ್ನು ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪ್ರದಾನ ಮಾಡಿದರು.

ಪವಿತ್ರಾಗೌಡಗೆ ಸುಪ್ರೀಂಕೋರ್ಟ್‌ನಲ್ಲಿ ಮತ್ತೆ ಹಿನ್ನಡೆ



ನವದೆಹಲಿ: ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆದೇಶವನ್ನು ಪುನರ್ ಪರಿಶೀಲಿಸುವಂತೆ ಎ1 ಆರೋಪಿ ಪವಿತ್ರಾಗೌಡ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ತನ್ನ ಮಗಳು ಮತ್ತು ಪೋಷಕರ ಪೋಷಣೆಗಾಗಿ ಜಾಮೀನು ಕೋರಿ ಪವಿತ್ರಾ ಗೌಡ ಸುಪ್ರೀಂಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಜೆ.ಬಿ ಪರ್ದಿವಾಲಾ ಹಾಗೂ ಆರ್.ಮಹಾದೇವನ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಅರ್ಜಿ ವಜಾಗೊಳಿಸಿದೆ. ಅಲ್ಲದೇ ಅರ್ಜಿ ವಿಚಾರಣೆ ವೇಳೆ ನಾವು ಆದೇಶ ಮತ್ತು ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದೇವೆ. ಮತ್ತೊಮ್ಮೆ ಪರಿಶೀಲನೆ ನಡೆಸಿ ಆದೇಶ ಮಾಡುವ ಅಗತ್ಯವಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಈ ಹಿಂದೆ ಹೈಕೋರ್ಟ್ ನೀಡಿದ್ದ ಜಾಮೀನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿತ್ತು. ಆದೇಶ ಪರಿಶೀಲನೆ ಕೋರಿ ಸುಪ್ರೀಂಕೋರ್ಟ್‌ಗೆ ಪವಿತ್ರಾ ಗೌಡ ಅರ್ಜಿ ಸಲ್ಲಿಕೆ ಮಾಡಿದ್ದರು. ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಪವಿತ್ರಾ ಗೌಡ ಅವರು ಮತ್ತೆ ಜೈಲು ಸೇರಿದ್ದಾರೆ. ಅವರು ಎ1 ಆರೋಪಿ ಆದರೆ, ನಟ ದರ್ಶನ್ ಎ2 ಆರೋಪಿ ಆಗಿದ್ದಾರೆ.

ದೇಶ – ವಿದೇಶ


ಕುಪ್ವಾರಾದಲ್ಲಿ ಉಗ್ರರ ಹತ್ಯೆ



ಶ್ರೀನಗರ: ಜಮ್ಮು–ಕಾಶ್ಮೀರದ ಕುಪ್ವಾರಾ ಜಿಲ್ಲೆಯ ಕೇರನ್ ಪ್ರದೇಶದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಇಬ್ಬರು ಭಯೋತ್ಪಾದಕರನ್ನು ಹತ್ಯೆ ಮಾಡಿದ್ದಾರೆ. ಈ ಮಾಹಿತಿಯನ್ನು ಭಾರತೀಯ ಸೇನೆಯು ಎಕ್ಸ್ ಪೋಸ್ಟ್‌ನಲ್ಲಿ ಹಂಚಿಕೊಂಡಿದೆ. ಒಳನುಸುಳುವಿಕೆ ಪ್ರಯತ್ನದ ಕುರಿತು ಬಂದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ನಿನ್ನೆ ಕಾರ್ಯಾಚರಣೆ ಆರಂಭಗೊಂಡಿತು. ಅನುಮಾನಾಸ್ಪದ ಚಲನವಲನಗಳನ್ನು ಗಮನಿಸಿದ ಯೋಧರು ವ್ಯಕ್ತಿಗಳನ್ನು ಪ್ರಶ್ನಿಸಿದರು. ಆಗ ಭಯೋತ್ಪಾದಕರು ಒಂದೇ ಸಮನೆ ಗುಂಡು ಹಾರಿಸಲು ಪ್ರಯತ್ನಿಸಿದರು. ಪ್ರತಿದಾಳಿಯನ್ನು ಭದ್ರತಾ ಪಡೆ ಯೋಧರು ಮಾಡಿದಾಗ ಇಬ್ಬರು ಉಗ್ರರು ಹತರಾದರು ಎಂದು ಚಿನಾರ್ ಕಾರ್ಪ್ಸ್ ಎಕ್ಸ್ ಪೋಸ್ಟ್ ನಲ್ಲಿ ತಿಳಿಸಿದೆ.

ಮೊನ್ನೆ ಬುಧವಾರ ಮುಂಜಾನೆ ಕಿಶ್ತ್ವಾರ್ ಜಿಲ್ಲೆಯ ದೂರದ ಛಾತ್ರು ಪ್ರದೇಶದಲ್ಲಿ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ಎನ್‌ಕೌಂಟರ್ ನಡೆದ ಮೂರು ದಿನಗಳ ನಂತರ ಇದು ನಡೆದಿದೆ.

ಉಕ್ರೇನ್ ಮೇಲಿನ ಯುದ್ಧದಲ್ಲಿ ವಿಜಯದ ತುದಿಯಲ್ಲಿದ್ದೇವೆ



ಕೀವ್: ಉಕ್ರೇನ್‌ನ ವಿವಿಧ ಪ್ರದೇಶಗಳ ಮೇಲೆ ರಷ್ಯಾದಿಂದ ಕ್ಷಿಪಣಿ ಮತ್ತು ಡ್ರೋನ್ ದಾಳಿ ಮುಂದುವರಿದಿದೆ. ಶನಿವಾರ ನಡೆದ ದಾಳಿಯಲ್ಲಿ ಕನಿಷ್ಠ ನಾಲ್ವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ಈ ಮಧ್ಯೆ ನಮ್ಮ ಪಡೆಗಳು ವಿಜಯದ ಉತ್ತುಂಗದಲ್ಲಿವೆ ಎಂದು ಘೋಷಿಸಿಕೊಂಡಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಆದರೂ ಶಾಂತಿ ಸ್ಥಾಪನೆಯ ಪೂರ್ವ ಷರತ್ತಾಗಿ ಡೋನ್‌ಬಾಸ್ ಪ್ರದೇಶವನ್ನು ಉಕ್ರೇನ್ ಬಿಟ್ಟುಕೊಡಬೇಕು. ಡೋನ್‌ಟೆಸ್ಕ್ ಮತ್ತು ಲುಹಾನ್‌ಸ್ಕ್‌ಗಳಿಂದ ಹಿಂದೆ ಸರಿಯಬೇಕು ಎಂದು ಹೇಳಿದ್ದಾರೆ.

ಉಕ್ರೇನ್‌ನ ಪೋಕ್ರೋವ್‌ಸ್ಕ್ ಮತ್ತು ಮಿರ್ನೋಹಾಡ್ ಪ್ರದೇಶಗಳನ್ನು ಸೇನೆ ಸುತ್ತುವರೆದಿದ್ದು, ತನ್ನ ವಶಕ್ಕೆ ಪಡೆಯಲಿದೆ ಎಂದು ರಷ್ಯಾ ರಕ್ಷಣಾ ಇಲಾಖೆ ಹೇಳಿಕೊಂಡಿದೆ. ಆದರೆ, ಪರಿಸ್ಥಿತಿ ಆತಂಕಕಾರಿಯಾಗಿದ್ದರೂ ನಮ್ಮ ಹೋರಾಟ ಮುಂದುವರೆದಿದೆ. ರಷ್ಯಾದ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ತಾನೂ ದಾಳಿ ಮಾಡುತ್ತಿರುವುದಾಗಿ ಉಕ್ರೇನ್ ಹೇಳಿಕೊಂಡಿದೆ. ಉಕ್ರೇನ್‌ನ ದಾಳಿಯಲ್ಲಿ ಸರಟೋವ್‌ನಲ್ಲಿ ಇಬ್ಬರಿಗೆ ಗಾಯಗಳಾಗಿವೆ. 82 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾ ತಿಳಿಸಿದೆ.

ಶುಲ್ಕ ಪಾವತಿಸದ್ದಕ್ಕೆ ಪರೀಕ್ಷೆಗೆ ನಿರಾಕರಣೆ, ಬೆಂಕಿ ಹಚ್ಚಿಕೊಂಡು ವಿದ್ಯಾರ್ಥಿ ಆತ್ಮಹತ್ಯೆ



ಉತ್ತರ ಪ್ರದೇಶ: ಶುಲ್ಕ ಪಾವತಿಸದ್ದಕ್ಕೆ ಪರೀಕ್ಷೆಗೆ ನಿರಾಕರಿಸಿದ್ದರಿಂದ ಕಾಲೇಜು ವಿದ್ಯಾರ್ಥಿಯೊಬ್ಬ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಉತ್ತರ ಪ್ರದೇಶದ ಬುಧಾನಾ ಪಟ್ಟಣದಲ್ಲಿ ಶನಿವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬುಧಾನಾದಲ್ಲಿರುವ ಡಿಎವಿ ಕಾಲೇಜಿನಲ್ಲಿ ಎರಡನೇ ವರ್ಷದ ಬಿಎ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಉಜ್ವಲ್ ರಾಣಾ (22) ಶುಲ್ಕ ಪಾವತಿಸದ ಕಾರಣ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಿರಲಿಲ್ಲ. ಇದರಿಂದ ಮನನೊಂದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಶೇಕಡಾ 70ರಷ್ಟು ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಉಜ್ವಲ್‌ನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತದನಂತರ ಹೆಚ್ಚಿನ ಚಿಕಿತ್ಸೆಗಾಗಿ ಸ್ಥಳಾಂತರಿಸಲಾಗಿತ್ತು ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

15 ಪ್ಯಾಲೆಸ್ಟೀನಿಯನ್ನರ ಮೃತದೇಹ ಹಸ್ತಾಂತರಿಸಿದ ಇಸ್ರೇಲ್



ಖಾನ್ ಯೂನುಸ್: ಕದನವಿರಾಮ ಒಪ್ಪಂದದಂತೆ 15 ಪ್ಯಾಲೆಸ್ಟೀನಿಯನ್ನರ ಮೃತದೇಹಗಳನ್ನು ಇಸ್ರೇಲ್ ಶನಿವಾರ ಹಸ್ತಾಂತರಿಸಿದೆ ಎಂದು ಇಲ್ಲಿನ ನಾಸಿರ್ ಆಸ್ಪತ್ರೆ ಮಾಹಿತಿ ನೀಡಿದೆ. ಒಬ್ಬ ಒತ್ತೆಯಾಳುವಿನ ಮೃತದೇಹದ ಅವಶೇಷಗಳನ್ನು ಹಮಾಸ್‌ನವರು ಶುಕ್ರವಾರ ಹಸ್ತಾಂತರ ಮಾಡಿದ್ದರು. ಪ್ರತಿ ಒತ್ತೆಯಾಳುವಿಗೆ 15 ಪ್ಯಾಲೆಸ್ಟೀನಿಯನ್ನರನ್ನು ವಾಪಸು ನೀಡುವುದಾಗಿ ಇಸ್ರೇಲ್ ಒಪ್ಪಿಕೊಂಡಿತ್ತು. ಶನಿವಾರದವರೆಗೂ ಒಟ್ಟು 300 ಮೃತದೇಹಗಳನ್ನು ಇಸ್ರೇಲ್ ಹಸ್ತಾಂತರಿಸಿದೆ. ಆದರೆ, ಇವುಗಳಲ್ಲಿ 84 ಮೃತದೇಹಗಳ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಸಬೇಕಾಯಿತು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದರು. ಒಪ್ಪಂದದಂತೆ ಗಾಜಾದ ಒಳಗೆ ಆಹಾರ, ಔಷಧ ಸೇರಿ ನೆರವು ಸಾಮಗ್ರಿಗಳು ಹೋಗಬೇಕು. ಆದರೆ, ಈವರೆಗೂ ಇದಕ್ಕೆ ವೇಗ ದೊರಕಿಲ್ಲ. 2 ಲಕ್ಷ ಟನ್‌ನಷ್ಟು ನೆರವು ಸಾಮಗ್ರಿಗಳು ಗಾಜಾ ಪ್ರವೇಶಿಸಲು ಸಿದ್ಧವಾಗಿವೆ. ಆದರೆ, ಕೇವಲ 37 ಸಾವಿರ ಟನ್‌ನಷ್ಟು ಆಹಾರ ಸಾಮಾಗ್ರಿಗಳು ಮಾತ್ರ ಗಾಜಾ ಪ್ರವೇಶಿಸಲು ಇಸ್ರೇಲ್ ಅನುಮತಿ ನೀಡಿದೆ.

ಬಸ್ ನಿಲ್ದಾಣಕ್ಕೆ ಕಾರು ಡಿಕ್ಕಿ ಹೊಡೆದು ಮೂವರು ಸಾವು



ಕಾಕಿನಾಡ: ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಮೂವರು ಸಾವನ್ನಪ್ಪಿ, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅಣ್ಣಾವರಂನಿಂದ ಹಿಂತಿರುಗುತ್ತಿದ್ದ ಮದುವೆ ಕಾರು ರಾಷ್ಟ್ರೀಯ ಹೆದ್ದಾರಿಯಲ್ಲಿ ಇದ್ದಕ್ಕಿದ್ದಂತೆ ನಿಯಂತ್ರಣ ತಪ್ಪಿ ಕಿರ್ಲಂಪುಡಿ ಮಂಡಲದ ಮೋನೂರ್ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ.

ಪೊಲೀಸ್ ವರದಿಗಳ ಪ್ರಕಾರ ಕಾರಿನ ಮುಂಭಾಗದ ಟೈರ್ ಸಿಡಿದ ಪರಿಣಾಮ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆಬದಿಯಲ್ಲಿ ಬಸ್‌ಗಾಗಿ ಕಾಯುತ್ತಿದ್ದ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರ ಗುಂಪಿಗೆ ಡಿಕ್ಕಿ ಹೊಡೆದಿದೆ. ನಿಯಂತ್ರಣ ತಪ್ಪಿದ ಕಾರು ಎರಡು ಮೋಟಾರ್ ಸೈಕಲ್‌ಗಳು ಮತ್ತು ರಿಕ್ಷಾಕ್ಕೂ ಡಿಕ್ಕಿ ಹೊಡೆದು ಅವ್ಯವಸ್ಥೆ ಉಂಟು ಮಾಡಿದೆ. ದುರದೃಷ್ಟವಶಾತ್, ಮೂವರು ಸ್ಥಳದಲ್ಲೇ ಸಾವನ್ನಪ್ಪಿದರೆ, ಏಳು ಮಂದಿ, ಅವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೈಸೂರು ಮಿತ್ರ

ಭಾನುವಾರ 9 ನವೆಂಬರ್ 2025

ಇಂದು ಬುದ್ಧ ಧಮ್ಮ ಚಿಂತನ ಮಂಥನ ಸಭೆ

ಕುಶಾಲನಗರ: ಕರ್ನಾಟಕ ಬುದ್ಧ ಧಮ್ಮ ಸಮಿತಿಗಳ ಒಕ್ಕೂಟದ ವತಿಯಿಂದ ನ.9 ರಂದು ಪಟ್ಟಣದ ಅಯ್ಯಪ್ಪ ದೇವಾಲಯ ರಸ್ತೆಯ ಮಹಾಲಕ್ಷ್ಮಿ ಸಭಾಂಗಣದಲ್ಲಿ ರಾಜ್ಯಮಟ್ಟದ ಬುದ್ಧ ಧಮ್ಮ ಚಿಂತನ ಮಂಥನ ಸಭೆಯನ್ನು ಏರ್ಪಡಿಸಲಾಗಿದೆ.

ಬೆಳಿಗ್ಗೆ 10.30 ಗಂಟೆಗೆ ಒಕ್ಕೂಟದ ಗೌರವಾಧ್ಯಕ್ಷ ಬಿ.ಗೋಪಾಲ್ ಅವರು ಬುದ್ಧನ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಒಕ್ಕೂಟದ ಅಧ್ಯಕ್ಷ ಪ್ರೊ. ಆರ್.ಮಹದೇವಪ್ಪ, ಪ್ರಧಾನ ಕಾರ್ಯದರ್ಶಿ ಪ್ರೊ.ಹೆಚ್.ರಾಚಪ್ಪ, ಕಾರ್ಯದರ್ಶಿ ಕಾಂತಪ್ಪ ಅಲಂಗಾರ್ ಹಾಗೂ ಖಜಾಂಜಿ ಲಕ್ಷ್ಮಣ್ ಭಾಗವಹಿಸಲಿದ್ದಾರೆ. ಬುದ್ಧರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕೆಂದು ಕಾರ್ಯಕ್ರಮ ಸಂಚಾಲಕ ಸೋಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಾಟೆ ಸ್ಪರ್ಧೆ: ರಾಷ್ಟ್ರ ಮಟ್ಟಕ್ಕೆ ವಿಶ್ರುತ್ ವರದರಾಜ್ ಆಯ್ಕೆ



ಕುಶಾಲನಗರ: ಪಟ್ಟಣದ ಯೂನಿಕ್ ಅಕಾಡೆಮಿ ಶಾಲೆಯ 6ನೇ ತರಗತಿಯ ವಿದ್ಯಾರ್ಥಿ ವಿಶ್ರುತ್ ವರದರಾಜ್ ಕರಾಟೆ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ದಾವಣಗೆರೆಯ ಅಲ್-ಫತಹ್ ಕನ್ನಡ ಮತ್ತು ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆದ 14 ವರ್ಷ ವಯೋಮಿತಿ 25 ಕೆಜಿ ಕೆಳಗಿನ ವಿಭಾಗದ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ವಿಶ್ರುತ್ ವರದರಾಜ್ ಭಾಗವಹಿಸಿ ಚಿನ್ನದ ಪದಕ ಗೆಲ್ಲುವ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಡಿ.15 ರಂದು ಮಧ್ಯಪ್ರದೇಶದಲ್ಲಿ ರಾಷ್ಟ್ರ ಮಟ್ಟದ ಸ್ಪರ್ಧೆ ನಡೆಯಲಿದೆ.ಕುಶಾಲನಗರದ ಕರಾಟೆ ಶಿಕ್ಷಕ ಸಂಕೇತ್ ಅವರಲ್ಲಿ 6 ವರ್ಷದಿಂದ ಅಭ್ಯಾಸ ಮಾಡುತ್ತಿದ್ದಾನೆ.

ಕನಕದಾಸರ ಕೀರ್ತನೆಗಳ ಅಧ್ಯಯನ ಅಗತ್ಯ



ಕನಕದಾಸ ಜಯಂತಿ ಕಾರ್ಯಕ್ರಮಕ್ಕೆ ಆನಂದ್ ಪ್ರಕಾಶ್ ಮೀನಾ ಚಾಲನೆ ನೀಡಿದರು.

ಮಡಿಕೇರಿ: ಪ್ರತಿಯೊಬ್ಬರ ಉತ್ತಮ ಬದುಕಿಗೆ ಭಕ್ತ ಕನಕದಾಸರ ಕೀರ್ತನೆಗಳ ಅಧ್ಯಯನ ಅಗತ್ಯ ಎಂದು ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಅಭಿಪ್ರಾಯ ಪಟ್ಟಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಗರದ ಗಾಂಧಿ ಭವನದಲ್ಲಿ ನಡೆದ ಕನಕದಾಸ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕನಕದಾಸರು ಹಲವು ಕೀರ್ತನೆ ರಚಿಸುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ, ದಾಸ ಶ್ರೇಷ್ಠರಲ್ಲಿ ಕನಕದಾಸರು ಸಂತ ಕವಿಗಳಾಗಿದ್ದು, ತಮ್ಮ ದಾಸ ಕೀರ್ತನೆಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ. ಕನಕದಾಸರು ಭಕ್ತಿ ಮಾರ್ಗದ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಕನಕದಾಸರ ಕೀರ್ತನೆಗಳು ಉಪನಿಷತ್ತು ಹಾಗೂ ಭಗವದ್ಗೀತೆಯಲ್ಲಿನ ಸಾರವನ್ನು ಒಳಗೊಂಡಿದೆ ಎಂದರು.

ಭಕ್ತಿ ಹಾಗೂ ಮಾನವೀಯ ನೆಲೆಯಲ್ಲಿ ಪ್ರತಿಯೊಬ್ಬರೂ ಬದುಕಬೇಕು ಎಂದು ಭಕ್ತ ಕನಕದಾಸರು ಸಾರಿದ್ದಾರೆ. ಅವರ ಬದುಕೇ ಎಲ್ಲರಿಗೂ ದಾರಿದೀಪ, ಆ ನಿಟ್ಟಿನಲ್ಲಿ ಜೀವನ ಚರಿತ್ರೆ ತಿಳಿದುಕೊಳ್ಳುವಂತಾಗಬೇಕು. ಕನ್ನಡ ನಾಡಿನಲ್ಲಿ ಹುಟ್ಟಿದ ನಾವು ದಾಸರು, ಶರಣರು, ವಚನಕಾರರ ಪರಂಪರೆ ತಿಳಿಯಬೇಕು ಎಂದು ಹೇಳಿದರು.

ಜಿಲ್ಲಾ ಕುರುಬ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ ಮಾತನಾಡಿ, ಕನಕದಾಸರು ದಾಸ ಶ್ರೇಷ್ಠ ಕವಿಯಾಗಿ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ ಎಂದರು. ಯಾರಲ್ಲಿಯೂ ಸಹ ಅಹಂ ಇರಬಾರದು, ದುರಹಂಕಾರ ಹಾಗೂ ದುರಾಲೋಚನೆ ಇದ್ದಲ್ಲಿ ಬದುಕು ಅಪೂರ್ಣ ಎಂದು ಸಾರಿದ್ದಾರೆ ಎಂದರು.

ಸಂಗೊಳ್ಳಿ ರಾಯಣ್ಣ ಕುರುಬರ ಹಿತರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಡಿ.ಆರ್.ಪ್ರಭಾಕರ ಮಾತನಾಡಿದರು. ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ, ಬಿ.ಸಿ.ಶಂಕರಯ್ಯ, ಮಣಜೂರು ಮಂಜುನಾಥ್ ಇದ್ದರು.

ವಿಜೃಂಭಣೆಯಿಂದ ಜರುಗಿದ ಗಣಪತಿ ದೇವಾಲಯದ ವಾರ್ಷಿಕ ರಥೋತ್ಸವ



ಶ್ರೀ ಗಣಪತಿ ದೇವಾಲಯದ ವಾರ್ಷಿಕ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯೊಂದಿಗೆ ವಿಜೃಂಭಣೆಯಿಂದ ಜರುಗಿತು.

ಕುಶಾಲನಗರ, ನ.8–ಪಟ್ಟಣದ ಐತಿಹಾಸಿಕ ಹಿನ್ನೆಲೆ ಹೊಂದಿರುವ ಶ್ರೀ ಗಣಪತಿ ದೇವಾಲಯದ ವಾರ್ಷಿಕ ರಥೋತ್ಸವ ಶನಿವಾರ ಶ್ರದ್ಧಾಭಕ್ತಿಯೊಂದಿಗೆ ವಿಜೃಂಭಣೆಯಿಂದ ಜರುಗಿತು.

ರಥೋತ್ಸವಕ್ಕೆ ಹರಿದು ಬಂದ ಭಕ್ತ ಸಾಗರ ಉತ್ಸಾಹದ ಮಧ್ಯೆ ರಥವನ್ನು ಎಳೆದು ತಮ್ಮ ಭಕ್ತಿ ಮೆರೆದರು. ಶ್ರೀ ಗಣಪತಿ ದೇವಾಲಯ ಸೇವಾ ಸಮಿತಿ ವತಿಯಿಂದ ಕಾರ್ತೀಕ ಕೃಷ್ಣ ಪಕ್ಷದಲ್ಲಿ ಸಲ್ಲುವ ಅಭಿಜಿನ್ ಶುಭ ಲಗ್ನದಲ್ಲಿ ಶ್ರೀ ಗಣಪತಿ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು. ರಥ ಬಲಿ ಮತ್ತು ಪೂಜೆ ಹಾಗೂ ಮಹಾಮಂಗಳಾರತಿ ಬಳಿಕ 1 ಗಂಟೆಗೆ ಸರಿಯಾಗಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತರು ರಥವನ್ನು ಗಣಪತಿ ದೇವಾಲಯದಿಂದ ರಥ ಬೀದಿ ಮೂಲಕ ಆಂಜನೇಯ ದೇವಸ್ಥಾನದವರೆಗೆ ಎಳೆಯುವ ಮೂಲಕ ಭಕ್ತಿ ಸಮರ್ಪಿಸಿದರು. ದೇವಾಲಯದ ಪ್ರಧಾನ ಅರ್ಚಕ ಆರ್.ಕೆ.ನಾಗೇಂದ್ರ ಬಾಬು ನೇತೃತ್ವದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಎಂ.ಕೆ. ದಿನೇಶ್ ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ಮೊದಲು ಪಕ್ಕದ ಊರುಗಳಿಂದ ಬಂದಿದ್ದ ಗೋವುಗಳಿಗೆ ಗೋಪೂಜೆ ನೆರವೇರಿಸಲಾಯಿತು. ಸಮಿತಿಯ ಉಪಾಧ್ಯಕ್ಷ ಆರ್.ಬಾಬು, ಕಾರ್ಯದರ್ಶಿ ಬಿ.ಕೆ.ಮುತ್ತಣ್ಣ, ಖಜಾಂಚಿ ಎಸ್.ಕೆ. ಸತೀಶ್, ಸಹ ಕಾರ್ಯದರ್ಶಿ ಕೆ.ಎನ್.ದೇವರಾಜ್, ನಿರ್ದೇಶಕರಾದ ವಿ.ಡಿ. ಪುಂಡರೀಕಾಕ್ಷ, ವಿ.ಪಿ.ಶಶಿಧರ್, ಟಿ.ಆರ್.ಶರವಣಕುಮಾರ್, ಎಚ್.ಎಂ. ಚಂದ್ರು, ವಿಶೇಷ ಆಹ್ವಾನಿತರಾದ ಎಚ್.ಎನ್.ರಾಮಚಂದ್ರ, ಡಿ.ಅಪ್ಪಣ್ಣ, ಡಿ.ಸಿ.ಜಗದೀಶ್, ಕೆ.ಎನ್. ಸುರೇಶ್, ಕೆ.ಸಿ.ನಂಜುಂಡಸ್ವಾಮಿ, ಎಂ.ಮುನಿರಾಜು, ವ್ಯವಸ್ಥಾಪಕರಾಗಿ ಎಸ್.ಕೆ.ಶ್ರೀನಿವಾಸ್ ರಾವ್ ಇದ್ದರು. ರಥೋತ್ಸವಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಜಾತ್ರೋತ್ಸವ ಅಂಗವಾಗಿ ಇನ್ನು ಒಂದು ವಾರ ಇಲ್ಲಿನ ಗುಂಡೂರಾವ್ ಬಡಾವಣೆಯ ಜಾತ್ರಾ ಮೈದಾನದಲ್ಲಿ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ.

ಶಾಸಕ ಡಾ.ಮಂತರ್ ಗೌಡ, ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಗಣಪತಿ ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದರು.

ಆರತಿ ಹಾಗೂ ಪ್ರಸಾದ ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು.

ಪೊನ್ನಂಪೇಟೆಯಲ್ಲಿ ಪ್ರಜಾಸೌಧಕ್ಕೆ ಶಿಲಾನ್ಯಾಸ



ತಾಲೂಕು ಆಡಳಿತ ಭವನ 'ಪ್ರಜಾ ಸೌಧಕ್ಕೆ ಕಂದಾಯ ಸಚಿವ ಕೃಷ್ಣಭೈರೇಗೌಡ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿದರು.ಶಾಸಕ ಎ.ಎಸ್. ಪೊನ್ನಣ್ಣ ಸಚಿವರೊಂದಿಗಿದ್ದರು.

ಮಡಿಕೇರಿ,ನ.8– ಪೊನ್ನಂಪೇಟೆ ತಾಲೂಕು ರಚನೆಯಾಗಿ 6 ವರ್ಷಗಳ ನಂತರ ತಾಲೂಕು ಆಡಳಿತ ಭವನ 'ಪ್ರಜಾ ಸೌಧಕ್ಕೆ ಕಂದಾಯ ಸಚಿವ ಕೃಷ್ಣಭೈರೇಗೌಡ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿದರು.

ಹಿಂದಿನ ಸರ್ಕಾರ ಒಟ್ಟು 63 ತಾಲೂಕುಗಳನ್ನು ಕಳೆದ 6–7 ವರ್ಷಗಳ ಹಿಂದೆ ಘೋಷಣೆ ಮಾಡಿದ್ದು, ಈ ಪೈಕಿ 14 ಆಡಳಿತ ಸೌಧವನ್ನು ನಿರ್ಮಾಣಕ್ಕೆ ಮಂಜೂರಾತಿ ನೀಡಿತ್ತು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಕೇವಲ 2 ವರ್ಷದಲ್ಲಿ ಬಾಕಿ ಉಳಿದಿದ್ದ 49 ತಾಲೂಕುಗಳಿಗೂ ಆಡಳಿತ ಭವನ ಪ್ರಜಾ ಸೌಧ ನಿರ್ಮಿಸಲು ಮಂಜೂರಾತಿ ನೀಡಿದೆ ಎಂದು ಸುದ್ದಿಗಾರರಿಗೆ ಹೇಳಿದರು.

ವಿಶೇಷ ಅನುದಾನ: ಕೊಡಗು ಸೇರಿದಂತೆ ಮಲೆನಾಡು ಮತ್ತು ಕರಾವಳಿ ಭಾಗದ ಒಟ್ಟು 6 ಜಿಲ್ಲೆಗಳಿಗೆ ಮಳೆಗಾಲ ಭೂ ಕುಸಿತ ಸಮಸ್ಯೆ ಎದುರಾಗುತ್ತಿವೆ. ಇದರ ತಡೆಗೆ ಯೋಜನೆ ರೂಪಿಸುವಂತೆ ವರ್ಷದ ಹಿಂದೆ ಮುಖ್ಯಮಂತ್ರಿಗಳು ಸೂಚಿಸಿದ್ದರು. ಅದರಂತೆ ತಜ್ಞರು ಮತ್ತು ವಿಜ್ಞಾನಿಗಳ ವರದಿ ಆಧರಿಸಿ ಭೂ ಕುಸಿತ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಭೂ ಕುಸಿತ ತಡೆಗೆ ಒಟ್ಟು 466 ಕೋಟಿ ರೂ ವೆಚ್ಚದಲ್ಲಿ ತಡೆಗೋಡೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ಇದಕ್ಕೆ ಕ್ಯಾಬಿನೆಟ್ ಅನುಮೋದನೆಯನ್ನೂ ನೀಡಿದೆ. ಆ ಮೂಲಕ ಜನರ ಸಮಸ್ಯೆ ಪರಿಹಾರಕ್ಕೆ 6 ಜಿಲ್ಲೆಗಳಿಗೆ ವಿಶೇಷ ಅನುದಾನವನ್ನೂ ಒದಗಿಸಿದಂತಾಗಿದೆ ಎಂದರು.

ಕಾನೂನು ಹೋರಾಟಕ್ಕೆ ಸೂಚನೆ: ಹಿಂದಿನ ಸರಕಾರ ಸಿ ಮತ್ತು ಡಿ ಭೂಮಿ ಕುರಿತು 2021ರಲ್ಲಿ ಸ್ಪಷ್ಟ ನಿಲುವು ತೆಗೆದುಕೊಳ್ಳಲಿಲ್ಲ, ಹೈಕೋರ್ಟ್‌ನಲ್ಲೂ ಸಮರ್ಥವಾಗಿ ವಾದ ಮಂಡಿಸಿಲ್ಲ. ಇದರ ಪರಿಣಾಮ ಹೈಕೋರ್ಟ್ ರೈತರ ಹಿತಕ್ಕೆ ವ್ಯತಿರಿಕ್ತವಾಗಿ ಆದೇಶ ನೀಡುವಂತಾಯಿತು ಎಂದು ಆರೋಪಿಸಿದರು. ರಾಜ್ಯ ಕಾಂಗ್ರೆಸ್ ಸರಕಾರ ಹೈಕೋರ್ಟ್‌ಗೆ ಮತ್ತೊಮ್ಮೆ ಅಪೀಲು ಹೋದ ಸಂದರ್ಭ ಕೋರ್ಟ್ 2021ರ ತೀರ್ಪನ್ನು ಎತ್ತಿ ಹಿಡಿದಿದೆ. ಈ ಹಿನ್ನೆಲೆಯಲ್ಲಿ ಸಿ ಮತ್ತು ಡಿ ಭೂಮಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ಅಪೀಲು ಸಲ್ಲಿಸಿ ಕಾನೂನು ಹೋರಾಟ ನಡೆಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸಿ ಮತ್ತು ಡಿ ಭೂಮಿ ಸರಕಾರದ ಭೂಮಿಯಾಗಿದೆಯೇ ಹೊರತು ಖಾಸಗಿ ಜಮೀನಲ್ಲ. ಇದನ್ನು ವಾಡಿಕೆಯಂತೆ ಅರಣ್ಯ ಇಲಾಖೆಗೆ ನೀಡಲಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದರು. ಇದು ಕಾನೂನಾತ್ಮಕ ವಿಚಾರವಾಗಿರುವ ಕಾರಣ ಸುಪ್ರಿಂ ಕೋರ್ಟ್ ತೀರ್ಪು ಬಾರದೇ ಏನು ಮಾಡಲಾಗದು ಎಂದು ಹೇಳಿದರು. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಸಚಿವರೊಂದಿಗಿದ್ದರು.

ಎಸ್.ಎಂ. ದೇವಪ್ಪ ಪೂಜಾರಿ ನಿಧನ



ನಾಪೋಕ್ಲು,ನ.8– ಸಮೀಪದ ಬೇತು ಗ್ರಾಮದ ನಿವಾಸಿ ಎಸ್.ಎಂ. ದೇವಪ್ಪ ಪೂಜಾರಿ(89) ಶನಿವಾರ ನಿಧನರಾದರು. ಮೃತರು ಪತ್ನಿ ಲಲಿತ ಹಾಗೂ ಮೂವರು ಪುತ್ರರು, ಪುತ್ರಿ ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ನ.9 ರಂದು ನಾಪೋಕ್ಲುವಿನ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೀಲಾವತಿ (ಬೇಬಿ)



ನಾಪೋಕ್ಲು, ನ.8–ಇಲ್ಲಿಗೆ ಸಮೀಪದ ಮರಂದೋಡ ಗ್ರಾಮದ ನಿವಾಸಿ ಬಾರಿಕೆ ಮಣಿ ಮಾದಪ್ಪ ಅವರ ಪತ್ನಿ 64 ವರ್ಷದ ಲೀಲಾವತಿ (ಬೇಬಿ) ಶುಕ್ರವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಮರಂದೋಡ ಗ್ರಾಮದ ಬಾರಿಕೆ ಕುಟುಂಬದ ರುದ್ರ ಭೂಮಿಯಲ್ಲಿ ಶನಿವಾರ ನೆರವೇರಿಸಲಾಯಿತು. ಮೃತರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಸುಬ್ಬಯ್ಯ (ಚುಬ್ಬುಣಿ)



ನಾಪೋಕ್ಲು, ನ.8– ಸ್ಥಳೀಯ ಗ್ರಾಮದ ನಿವಾಸಿ ಅರೆಯಡ ಸುಬ್ಬಯ್ಯ (ಚುಬ್ಬುಣಿ) (90) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಅರೆಯಡ ಕುಟುಂಬದ ರುದ್ರ ಭೂಮಿಯಲ್ಲಿ ಜರುಗಿತು. ಮೃತರು ಪತ್ನಿ ಭೋಜಕ್ಕಿ ಹಾಗೂ ಇಬ್ಬರು ಪುತ್ರರು, ಮತ್ತು ಪುತ್ರಿ ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಸಮ ಸಮಾಜದ ನಿರ್ಮಾಣಕ್ಕೆ ಹೋರಾಡಿದ ಕನಕದಾಸರು



ಭಕ್ತಶ್ರೇಷ್ಠ ಶ್ರೀ ಕನಕದಾಸ ಜಯಂತಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು. ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಮೊದಲಾದವರು ವೇದಿಕೆಯಲ್ಲಿದ್ದರು.

ಚಾಮರಾಜನಗರ, ನ. 8–ಬುದ್ಧ, ಬಸವ, ಅಂಬೇಡ್ಕರ್‌ರಂತೆ ಸಮಸಮಾಜಕ್ಕಾಗಿ ಹೋರಾಡಿದ ಮಹನೀಯರಲ್ಲಿ ಕನಕದಾಸರು ಒಬ್ಬರಾಗಿದ್ದಾರೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಭಕ್ತಶ್ರೇಷ್ಠ ಶ್ರೀ ಕನಕದಾಸರ 538ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಪಾಂಡಿತ್ಯ ಹೊಂದಿದ್ದ ಕನಕದಾಸರು ವ್ಯಾಕರಣಬದ್ಧವಾಗಿ ಜನರಿಗೆ ಅರ್ಥವಾಗುವಂತಹ ಸರಳ ಕೀರ್ತನೆಗಳನ್ನು ರಚಿಸಿ ಸಾಮಾಜದಲ್ಲಿದ್ದ ಮೇಲು–ಕೀಳು ತಾರತಮ್ಯ ಹೋಗಲಾಡಿಸಲು ಅವಿರತವಾಗಿ ದುಡಿದರು. ಕರ್ನಾಟಕ ಮಾತ್ರವಲ್ಲದೆ ದೇಶದ ಇತರೆ ಭಾಗಗಳಲ್ಲಿಯೂ ಸಂಚರಿಸಿ ಜನರಲ್ಲಿದ್ದ ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಬೆಳಕು ಚೆಲ್ಲುವುದರ ಜೊತೆಗೆ ಕೆಳಸ್ತರದಲ್ಲಿದ್ದ ಸಮಾಜವನ್ನು ಮೇಲ್ಪಂಕ್ತಿಗೆ ತಂದು ನಿಲ್ಲಿಸಿದರು ಎಂದರು.

ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಕನಕದಾಸರು ಜಾತಿಯ ಸಂಕೋಲೆಗಳಿಗೆ ಸಿಲುಕಿದ್ದ ಜನರಿಗೆ ಸಮಾನತೆಯ ಸಂದೇಶ ಸಾರಿದರು. ಅವರ ಆದರ್ಶ ಪಾಲಿಸೋಣ ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸ ಮುಖ್ಯ ಭಾಷಣ ಮಾಡಿ ಸರಳ ಕೀರ್ತನೆಗಳ ಮೂಲಕ ಸಮಾಜಕ್ಕೆ ಮನ್ವಂತರದ ಹಾದಿ ತೋರಿದವರಲ್ಲಿ ಕನಕದಾಸರು ಮುಂಚೂಣಿಯಲ್ಲಿದ್ದಾರೆ. ಈ ನೆಲದ ಮಣ್ಣಿನ ಸಾರ ಹೀರಿ, ಪಂಚಭೂತಗಳ ಕೊಡುಗೆಯನ್ನು ಪರಿಪೂರ್ಣವಾಗಿ ಅಳವಡಿಸಿಕೊಂಡು ಈ ನಾಡಿಗೆ, ಜಗತ್ತಿಗೆ ಜ್ಞಾನದ ಬೆಳಕನ್ನು ಪಸರಿಸಿದ ಅವರೆಲ್ಲರೂ ನಮ್ಮ ಅಸ್ತಿತ್ವವಾಗಿದ್ದಾರೆ ಎಂದು ಹೇಳಿದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಡಿ.ಸಿ.ಶೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜು, ಸಮಾಜದ ತಾಲೂಕು ಅಧ್ಯಕ್ಷ ಉಮೇಶ್, ಮುಖಂಡರಾದ ಬೆಳ್ಳೇಗೌಡ, ಗುರುಸ್ವಾಮಿ ಇತರರು ಉಪಸ್ಥಿತರಿದ್ದರು.

ಭಕ್ತಶ್ರೇಷ್ಠ ಶ್ರೀ ಕನಕದಾಸರ 538ನೇ ಜಯಂತಿ ಕಾರ್ಯಕ್ರಮದ ಅಂಗವಾಗಿ ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಿಂದ ವಿವಿಧ ಕಲಾತಂಡಗಳೊಂದಿಗೆ ಹಮ್ಮಿಕೊಳ್ಳಲಾಗಿದ್ದ ಕನಕದಾಸರ ಭಾವಚಿತ್ರ ಮೆರವಣಿಗೆಗೆ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಚಾಲನೆ ನೀಡಿದರು. ಮೆರವಣಿಗೆಯು ಪ್ರವಾಸಿ ಮಂದಿರದಿಂದ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾಡಳಿತ ಭವನ ತಲುಪಿತು.

ಚಿರತೆ ದಾಳಿ : ವಾಚರ್‌ಗೆ ತೀವ್ರ ಗಾಯ



ಗುಂಡ್ಲುಪೇಟೆ: ನ.8 (ಸೋಮ್.ಜಿ)–ಕೂಂಬಿಂಗ್ ನಡೆಸುವ ವೇಳೆ ವಾಚರ್ ಮೇಲೆ ಚಿರತೆ ದಾಳಿ ಮಾಡಿದ ಘಟನೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ್ ಅರಣ್ಯ ವಲಯದ ಯಡವನಹಳ್ಳಿ ಗ್ರಾಮದ ಸಮೀಪ ಶನಿವಾರ ಮಧ್ಯಾಹ್ನ ನಡೆದಿದೆ.

ಬಂಡೀಪುರದ ಓಂಕಾರ್ ಅರಣ್ಯ ವಲಯದ ವಾಚರ್ ಬಂಗಾರು ಗಾಯಗೊಂಡವರಾಗಿದ್ದಾರೆ. ಹೊರೆಯಾಲ ಗ್ರಾಮದ ಜೋಗಯ್ಯ ಎಂಬ ಕುರಿಗಾಹಿ ಯಡವನಹಳ್ಳಿ ಸುತ್ತಮುತ್ತಲ ಪ್ರದೇಶದಲ್ಲಿ ಮೇಕೆ ಮೇಯಿಸುತ್ತಿದ್ದಾಗ ಚಿರತೆ ದಾಳಿ ನಡೆಸಿ ಮೇಕೆಯನ್ನು ಬಲಿ ಪಡೆದಿದೆ. ಇದರ ಮಾಹಿತಿ ಮೇರೆಗೆ ಓಂಕಾರ್ ವಲಯದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕೂಂಬಿಂಗ್ ನಡೆಸಿ, ಪಟಾಕಿ ಸಿಡಿಸಿದ್ದಾರೆ. ಇದರ ಶಬ್ದಕ್ಕೆ ಬೆದರಿ ಪೊದೆಯೊಳಗೆ ಅಡಗಿದ್ದ ಚಿರತೆ ಎದುರಿಗಿದ್ದ ವಾಚರ್ ಮೇಲೆ ದಾಳಿ ನಡೆಸಿದೆ. ಈ ವೇಳೆ ಅಲ್ಲಿ ನೆರೆದಿದ್ದವರು ಕೂಗಿಕೊಂಡಾಗ ಚಿರತೆ ಸ್ಥಳದಿಂದ ಓಡಿಹೋಗಿದೆ.

ಚಿರತೆ ದಾಳಿಯಿಂದಾಗಿ ವಾಚರ್ ಬಂಗಾರು ಕೈ, ಕುತ್ತಿಗೆ, ತಲೆಗೆ ಗಂಭೀರ ಗಾಯಗಳಾಗಿದ್ದು, ಬೇಗೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ವೈದ್ಯರ ಸೂಚನೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ.

ಬೆಚ್ಚಿಬಿದ್ದ ಅರಣ್ಯ ಸಿಬ್ಬಂದಿ–ರೈತರು: ಹಾಡಹಗಲೇ ಓಂಕಾರ್ ಅರಣ್ಯ ವಲಯದ ಯಡವನಹಳ್ಳಿ ಗ್ರಾಮದ ಸಮೀಪ ಚಿರತೆ ವಾಚರ್ ಮೇಲೆ ದಾಳಿ ಮಾಡಿರುವುದರಿಂದ ಅರಣ್ಯ ಸಿಬ್ಬಂದಿ ಹಾಗೂ ರೈತರು ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ. ಅನಾಹುತ ಸಂಭವಿಸುವ ಮುನ್ನ ಎಚ್ಚೆತ್ತುಕೊಂಡು ಚಿರತೆ ಸೆರೆಗೆ ಕ್ರಮ ವಹಿಸುವಂತೆ ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಒತ್ತಾಯಿಸಿದ್ದಾರೆ.

ಪಾರ್ಥಸಾರಥಿಯ ವಶಕ್ಕೆ ಪಡೆದ ಅರಣ್ಯ ಸಿಬ್ಬಂದಿ; ನಿಟ್ಟುಸಿರು ಬಿಟ್ಟ ಜನತೆ



ಗುಂಡ್ಲುಪೇಟೆ ಸುಲ್ತಾನ್ ಬತ್ತೇರಿ ರಸ್ತೆಯಲ್ಲಿ ಅರಣ್ಯ ಸಿಬ್ಬಂದಿ ಸಾಕಾನೆ ಪಾರ್ಥಸಾರಥಿಯನ್ನು ವಶಕ್ಕೆ ತೆಗೆದುಕೊಂಡರು.

ಗುಂಡ್ಲುಪೇಟೆ: ನ.8 (ಸೋಮ್.ಜಿ)–ಪಟ್ಟಣದ ತುಂಬೆಲ್ಲಾ ಅಡ್ಡಾದಿಡ್ಡಿ ಓಡಾಡಿ ಸಾರ್ವಜನಿಕರನ್ನು ದಿಗ್ಭ್ರಾಂತರನ್ನಾಗಿಸಿದ್ದ ಪಾರ್ಥಸಾರಥಿ ಆನೆಯನ್ನು ನಿಯಂತ್ರಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದ್ದು, ಪಟ್ಟಣದ ಜನತೆ ನಿಟ್ಟುಸಿರು ಬಿಡುವಂತಾಗಿದೆ.

ಆನೆಯನ್ನು ಬೆನ್ನತ್ತಿದ ಅರಣ್ಯ ಸಿಬ್ಬಂದಿಗಳ ತಂಡ ಬೆಳಗಿನ 3 ಗಂಟೆ ವೇಳೆಗೆ ಅದನ್ನು ಬೇರಂಬಾಡಿ ಕೆರೆ ಸಮೀಪ ಪತ್ತೆಹಚ್ಚಿತು. ನಿಧಾನಕ್ಕೆ ಮಾವುತ ನೀಡಿದ ಸೂಚನೆಗಳನ್ನು ಪಾಲಿಸುವ ಮೂಲಕ ನಿಯಂತ್ರಣಕ್ಕೆ ಬಂದಿದೆ.

ಇಡೀ ರಾತ್ರಿ ಅತ್ತಿತ್ತ ಓಡಾಡಿ ಬಳಲಿರುವ ಆನೆಗೆ ಒಂದು ದಿನ ವಿಶ್ರಾಂತಿ ನೀಡಲಾಗುವುದು. ಕಲ್ಲಹಳ್ಳಿ ಸಮೀಪ ಹುಲಿ ಕಾಣಿಸಿಕೊಂಡರೆ ಬಂಡೀಪುರದಿಂದ ಬೇರೆ ಆನೆಯನ್ನು ಕರೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾಲೂಕಿನ ಕಲ್ಲಹಳ್ಳಿ ಸಮೀಪ ಜಾನುವಾರುಗಳನ್ನು ಕೊಲ್ಲುತ್ತಿರುವ ಹುಲಿ ಸೆರೆಗೆ ಕರೆತಂದಿದ್ದ ಸಾಕಾನೆ ಪಾರ್ಥಸಾರಥಿ ಶುಕ್ರವಾರ ಸಂಜೆ ಕೆರೆಯಲ್ಲಿ ನೀರು ಕುಡಿಯುವಾಗ ಕಡಜ ದಾಳಿಗೆ ಒಳಗಾಗಿದ್ದರಿಂದ ಅಡ್ಡಾದಿಡ್ಡಿಯಾಗಿ ಓಡಿ ಪಟ್ಟಣದ ಪಂಜನಹಳ್ಳಿ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿಯನ್ನು ಪ್ರವೇಶಿಸಿದ್ದ ಸಾಕಾನೆ ಮಧ್ಯರಾತ್ರಿವರೆಗೂ ನಿಯಂತ್ರಣಕ್ಕೆ ಸಿಕ್ಕದೆ ಸತಾಯಿಸಿತ್ತು.

ಹೆದ್ದಾರಿಯಲ್ಲಿ ವಾಹನಗಳ ಗದ್ದಲದಿಂದ ಮತ್ತಷ್ಟು ವಿಚಲಿತವಾದ ಆನೆ ಬಸ್ ನಿಲ್ದಾಣದೊಳಗೆ ಪ್ರವೇಶಿಸಿ ನಂತರ ಪೊಲೀಸ್ ಠಾಣೆ ಮೂಲಕ ಮಡಹಳ್ಳಿ ಯತ್ತ ಓಡಿಹೋಗಿತ್ತು. ನಂತರ ಮಲ್ಲಯ್ಯನಪುರ ಗುಡ್ಡ ಮಾರ್ಗವಾಗಿ ಸುಲ್ತಾನ್ ಬತ್ತೇರಿ ರಸ್ತೆಯುದ್ದಕ್ಕೂ ಸಾಗಿತು. ಈ ಸಂದರ್ಭದಲ್ಲಿ ಪೊಲೀಸ್ ಹಾಗೂ ಅರಣ್ಯ ಇಲಾಖೆಯವರು ಮುನ್ನೆಚ್ಚರಿಕೆ ಕ್ರಮವಾಗಿ ವಾಹನಗಳ ಸಂಚಾರಕ್ಕೆ ತಡೆಯೊಡ್ಡಿದ್ದರು.

ಹಾಲು ಮಹಾಮಂಡಲ ನಿರ್ದೇಶಕಿ ಶೀಲಾರಿಗೆ ಅಭಿನಂದನೆ



ಚಾಮುಲ್‌ನಿಂದ ಕರ್ನಾಟಕ ಹಾಲು ಮಹಾಮಂಡಲದ ಪ್ರತಿನಿಧಿಯಾಗಿ ಅವಿರೋಧವಾಗಿ ಆಯ್ಕೆಯಾದ ಶೀಲಾ ಅವರನ್ನು ಮುಖಂಡ ಕಂದಹಳ್ಳಿ ನಂಜುಂಡಸ್ವಾಮಿ ಅಭಿನಂದಿಸಿದರು.

ಯಳಂದೂರು, ನ.8–ಕರ್ನಾಟಕ ಹಾಲು ಮಹಾಮಂಡಲದ ನಿರ್ದೇಶಕಿಯಾಗಿ ಅವಿರೋಧವಾಗಿ ಆಯ್ಕೆಯಾದ ಶೀಲಾ ಪುಟ್ಟರಂಗಶೆಟ್ಟಿರವರಿಗೆ ಈಚೆಗೆ ಮುಖಂಡ ಕಂದಹಳ್ಳಿ ನಂಜುಂಡಸ್ವಾಮಿ ಸೇರಿದಂತೆ ಅನೇಕರು ಅಭಿನಂದನೆ ಸಲ್ಲಿಸಿದರು.

ಕಂದಹಳ್ಳಿ ನಂಜುಂಡಸ್ವಾಮಿ ಮಾತನಾಡಿ, ಚಾಮುಲ್‌ನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಇವರು ಶಾಸಕ ಸಿ. ಪುಟ್ಟರಂಗಶೆಟ್ಟಿ ರವರ ಮಗಳಾಗಿ ರಾಜಕೀಯವಾಗಿ ಹಾಗೂ ಚಾಮುಲ್‌ನಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಜಿಲ್ಲೆಯ ಹೈನುಗಾರರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಕೆಲಸ ಮಾಡುವ ಉತ್ತಮ ಅವಕಾಶವಿದ್ದು ಇವರು ಈ ಕರ್ತವ್ಯವನ್ನು ಉತ್ತಮವಾಗಿ ನಿರ್ವಹಿಸುವ ವಿಶ್ವಾಸವಿದೆ ಎಂದರು.

ಚಾಮುಲ್ ನಾಮನಿರ್ದೇಶಿತ ಸದಸ್ಯ ಕಮರವಾಡಿ ರೇವಣ್ಣ, ಯೂತ್ ಕಾಂಗ್ರೆಸ್ ಘಟಕದ ಅಧ್ಯಕ್ಷ ವಿಜಯ್, ಪ್ರದೀಪ್, ಶಿವನಂಜ, ಮಾದೇಶ್ ಸೇರಿದಂತೆ ಅನೇಕರು ಇದ್ದರು.

ವಕೀಲ ವೃತ್ತಿಯ ನೈಪುಣ್ಯತೆಗೆ ನಿರಂತರ ಅಧ್ಯಯನ ಅಗತ್ಯ



ಕ್ರಿಮಿನಲ್ ಹಾಗೂ ಸಿವಿಲ್ ದಾವೆಗಳ ಕುರಿತ ಕಾರ್ಯಾಗಾರದಲ್ಲಿ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಎಸ್.ಶಂಕರಪ್ಪ ಮಾತನಾಡಿದರು.

ಚಾಮರಾಜನಗರ, ನ.8–ವೃತ್ತಿಯಲ್ಲಿ ಹೆಚ್ಚು ನೈಪುಣ್ಯತೆ ಪಡೆಯಲು ವಕೀಲರು ನಿರಂತರ ಅಧ್ಯಯನಶೀಲರಾಗಿರಬೇಕು ಎಂದು ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಎಸ್.ಶಂಕರಪ್ಪ ಸಲಹೆ ನೀಡಿದ್ದಾರೆ.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ನಡೆದ ಕ್ರಿಮಿನಲ್ ಹಾಗೂ ಸಿವಿಲ್ ದಾವೆಗಳ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ವಕೀಲರು ವೃತ್ತಿಯಲ್ಲಿ ಬದ್ಧತೆಯನ್ನು ಹೊಂದಿರಬೇಕು. ಸದಾಕಾಲವೂ ತಮ್ಮ ಕಕ್ಷಿದಾರರ ಒಳಿತಿಗಾಗಿ ಕೆಲಸ ಮಾಡಬೇಕು. ಕ್ರಿಮಿನಲ್ ಪ್ರಕರಣಗಳನ್ನು ನಡೆಸುವ ಸಂದರ್ಭದಲ್ಲಿ ಸ್ಥಳ ಪರಿಶೀಲನೆ ಮಾಡುವುದು ಹೆಚ್ಚು ಅಗತ್ಯವಾಗಿದೆ. ಇದರಿಂದ ಪ್ರಕರಣಕ್ಕೆ ಪೂರಕವಾದ ಸಾಕ್ಷಿ ಸಂಗ್ರಹಣೆಗೆ ಅನುಕೂಲವಾಗಲಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ರಾಮಸಮುದ್ರ ಮಾತನಾಡಿ, ಯುವ ವಕೀಲರಿಗೆ ಅನುಕೂಲಕ ಕಲ್ಪಿಸುವ ಉದ್ದೇಶದಿಂದ ಅಧ್ಯಕ್ಷನಾಗಿ ಆಯ್ಕೆಯಾದ ಕೂಡಲೇ ವಿಶೇಷ ಕಾರ್ಯಾಗಾರವನ್ನು ಆಯೋಜಿಸಲಾಗಿದ್ದು, ಸದರಿ ಕಾರ್ಯಾಗಾರದಲ್ಲಿ ಮುಂಬರುವ ಸಿವಿಲ್ ನ್ಯಾಯಾಧೀಶರ ಪರೀಕ್ಷೆಗಳು, ಸರ್ಕಾರಿ ಅಭಿಯೋಜಕರ ಪರೀಕ್ಷೆಗಳಿಗೆ ತುಂಬಾ ಉಪಯುಕ್ತವಾಗಿದ್ದು, ವಕೀಲರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.


ಮಂಡ್ಯ ಜಿಲ್ಲಾ ವಕೀಲರ ಸಂಘದ ಹಿರಿಯ ಸದಸ್ಯ ಕೆ. ಬಸವಯ್ಯ, ಪ್ರಧಾನ ಕಾರ್ಯದರ್ಶಿ ಶಿವರಾಮು ಮಾತನಾಡಿದರು, ಕಾರ್ಯಾಗಾರದಲ್ಲಿ ಹಿರಿಯ ಹಾಗೂ ಕಿರಿಯ ವಕೀಲರು ಹಾಜರಿದ್ದರು.

ಕತ್ತಿ ವರಸೆಯಲ್ಲಿ ಜೆಎಸ್‌ಎಸ್ ವಿದ್ಯಾರ್ಥಿಗಳ ಸಾಧನೆ

ಯಳಂದೂರು, ನ.8–ಸಂತೆಮರಹಳ್ಳಿ ಜೆಎಸ್‌ಎಸ್ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಈಚೆಗೆ ಬೆಂಗಳೂರಿನಲ್ಲಿ ನಡೆದ ಮಿನಿ ಕರ್ನಾಟಕ ಕ್ರೀಡಾಕೂಟದ ಫೆನ್ಸಿಂಗ್ (ಕತ್ತಿವರಸೆ) ವಿಭಾಗದ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಮೊದಲ ಎರಡು ಸ್ಥಾನವನ್ನು ಪಡೆದುಕೊಳ್ಳುವ ಮೂಲಕ ಸಾಧನೆ ಮಾಡಿದ್ದಾರೆ.

ಜೆಎಸ್‌ಎಸ್ ಶಾಲೆಯಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆರ್.ಕೆ. ಮನ್ವಿತ ಪ್ರಥಮ ಸ್ಥಾನವನ್ನು ಪಡೆದುಕೊಂಡು ಚಿನ್ನದ ಪದಕ, 5 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆರ್.ಕೆ. ಸಮರ್ಥ್ ದ್ವಿತೀಯ ಸ್ಥಾನವನ್ನು ಪಡೆದುಕೊಂಡು ಬೆಳ್ಳಿ ಪದಕ ಗಿಟ್ಟಿಸಿಕೊಂಡಿದ್ದಾರೆ. ಇವರ ಈ ಸಾಧನೆಗೆ ಶಾಲೆಯ ಮುಖ್ಯ ಶಿಕ್ಷಕ ವಿಶ್ವ ಹಾಗೂ ಶಿಕ್ಷಕ ವೃಂದರವರು ಅಭಿನಂದಿಸಿದ್ದಾರೆ.

ಕೊಳ್ಳೇಗಾಲದಲ್ಲಿ ಕನಕದಾಸ ಜಯಂತಿ



ಕೊಳ್ಳೇಗಾಲ: ತಾಲೂಕು ಕುರುಬರ ಸಂಘದ ವತಿಯಿಂದ 538ನೇ ಕನಕದಾಸರ ಜಯಂತ್ಯುತ್ಸವ ಅದ್ದೂರಿಯಾಗಿ ನಡೆಯಿತು.

ಪಟ್ಟಣದ ಎಂ.ಜಿ.ಎಸ್.ವಿ ಕಾಲೇಜು ಮೈದಾನದಲ್ಲಿ ಜಮಾಯಿಸಿದ್ದ ಕುರುಬ ಸಮುದಾಯದವರು ಬಳಿಕ ವಿವಿಧ ಕಲಾ ತಂಡದೊಂದಿಗೆ ಮೆರವಣಿಗೆ ಹೊರಟು ಗುರುಕಾರ್ ವೃತ್ತ, ಬಸ್ ನಿಲ್ದಾಣ ರಸ್ತೆ, ಡಾ.ವಿಷ್ಣು ರಸ್ತೆ, ಡಾ.ರಾಜಕುಮಾರ ರಸ್ತೆ, ಮಸೀದಿ ವೃತ್ತ, ಡಾ.ಅಂಬೇಡ್ಕರ್ ರಸ್ತೆ, ಎಡಿಬಿ ಸರ್ಕಲ್, ಐಬಿ ರಸ್ತೆಯ ಮೂಲಕ ನ್ಯಾಷನಲ್ ಮೈದಾನವನ್ನು ತಲುಪಿತು.

ಮೆರವಣಿಗೆಯಲ್ಲಿ ಗಾರುಡಿ ಗೊಂಬೆ, ಡೊಲ್ಲು ಕುಣಿತ, ನಂದಿ ಕಂಬ, ದೊಣ್ಣೆ ವರಸೆ ಹಾಗೂ ಮಂಗಳವಾದ್ಯದ ನಿನಾದಕ್ಕೆ ಯುವಕರು ಕುಣಿದು ಕುಪ್ಪಳಿಸಿದರು. ಈ ವೇಳೆ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮೆರವಣಿಗೆಯಲ್ಲಿ ಶಾಸಕ ಎಂ.ಆರ್. ಮಂಜುನಾಥ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ರಾಜೇಂದ್ರ, ಪಿಎಸಿಸಿಎಸ್ ಅಧ್ಯಕ್ಷ ರಮೇಶ್, ಕರವೇ(ಪ್ರವೀಣ್ ಶೆಟ್ಟಿ ಬಣ) ಅಧ್ಯಕ್ಷ ಜಗದೀಶ್ ಶಾಸ್ತ್ರೀ, ಕುರುಬರ ಸಂಘದ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು ಇದ್ದರು.

ಮೈಸೂರು ಮಿತ್ರ
ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಭಾನುವಾರ 09-11-2025



ಎಂದೆಂದಿಗೂ ಮರೆಯಬಾರದ ಮೈಸೂರು ಮಹಾರಾಣಿಯರು



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಸುಮಾರು ಐದೂವರೆ ಶತಮಾನಗಳ ಮೈಸೂರು ರಾಜರ ಇತಿಹಾಸದಲ್ಲಿ ಹಲವಾರು ಮಹಾರಾಣಿಯರು ಮಹತ್ವದ ಪಾತ್ರ ವಹಿಸಿದ್ದಾರೆ. ಆದರೆ ಅವರಿಗೆ ಇತಿಹಾಸವೇ ಅನ್ಯಾಯ ಮಾಡಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಅವರ ಪಾತ್ರ, ಕೊಡುಗೆಯನ್ನು ಸರಿಯಾಗಿ ಗುರುತಿಸಿಯೇ ಇಲ್ಲ. ಕೊಡಬೇಕಾದ ಮಹತ್ವ ಕೊಟ್ಟೇ ಇಲ್ಲ ಎಂದರೆ ಆಶ್ಚರ್ಯವಾಗಬಹುದು. ಆದರೆ ಇದು ನಿಜವಾದ ಮಾತು. ಅವರ ಪ್ರಸ್ತಾಪವೇನಾದರೂ ಇದ್ದರೂ ಅವರ ಕಾರ್ಯ ಸಾಧನೆಯನ್ನು ವಿವರಿಸಿ ಹೇಳಿಲ್ಲ. ಅದು ಅಲ್ಲಿನ ವರ್ಣನೆಯ ಅಲ್ಪಭಾಗವಾಗಿ ಸಾಗಿಹೋಗುತ್ತದೆ. ಇದು ವಾಣೀವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿಯವರ ಬಗ್ಗೆಯೂ ಆಗಿದೆ ಎಂದು ಹೇಳಲೇ ಬೇಕಾಗುತ್ತದೆ.

ಇತಿಹಾಸದಲ್ಲಿ ಅಲ್ಪ ಪ್ರಮಾಣದಲ್ಲಿ ಗುರುತಿಸಿರುವ ಅಥವಾ ಪರಿಗಣಿಸದೇ ಹೋಗಿರುವ ರಾಜಮಾತೆಯರ ಬಗ್ಗೆ ಹೇಳಬೇಕಾದರೆ ಮೈಸೂರು ಒಡೆಯರ ಇತಿಹಾಸ ಪ್ರಾರಂಭವಾಗುವುದೇ ಅಂತಹ ತಾಯಿಯಿಂದ ಅಂದರೆ ತಪ್ಪಾಗದು. ಕ್ರಿ. ಶ. 1399ರಲ್ಲಿ ಚಾಮರಾಜರ ಪತ್ನಿ ದೇವಾಜಮ್ಮಣ್ಣಿಯವರು (ದೇವಾಜಾಂಬೆ) ಪತಿಯನ್ನು ಕಳೆದುಕೊಂಡು, ಏಕಮಾತ್ರ ಪುತ್ರಿಯೊಂದಿಗೆ ತಮ್ಮ ನಾಡಿನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಪಕ್ಕದ ನಾಡಿನ ಸೇನಾಧಿಪತಿಯಿಂದ ಮಗಳನ್ನು ರಕ್ಷಿಸಿಕೊಂಡು ಯದುರಾಯರಿಗೆ ಲಗ್ನ ಮಾಡಿಕೊಟ್ಟು ನಾಡನ್ನು ರಕ್ಷಿಸಿಕೊಳ್ಳಬೇಕಾದ ದುರ್ಭರ ಪ್ರಸಂಗ ಎದುರಿಸಬೇಕಾಗುತ್ತದೆ. ಮೈಸೂರಿನ ಇತಿಹಾಸದ ಆರಂಭದಲ್ಲಿಯೇ, ಅಂದರೆ 1399ರಲ್ಲಿಯೇ ಈ ನೋಟ ನಮಗೆ ಸಿಗುತ್ತದೆ.

ಮೊದಲಿಗೆ ಅವರಾದರೆ ಅವರ ನಂತರದ 1574ರಲ್ಲಿ ಮೃತರಾದ ಏಳನೆಯ ದೊರೆ ಬೋಳ ಚಾಮರಾಜರ ಕಿರಿಯ ಪತ್ನಿ ರಾಣಿ ದೇವಾಜಮ್ಮಣ್ಣಿ, ಹತ್ತನೇ ದೊರೆ ಚಾಮರಾಜ ಒಡೆಯರ ಪತ್ನಿ ಹೊನ್ನಾಜಮ್ಮಣ್ಣಿ, ಹನ್ನೊಂದನೆಯ ದೊರೆ ಇಮ್ಮಡಿ ರಾಜ ಒಡೆಯರ ಪತ್ನಿ ರಾಣಿ ತಿಮ್ಮಾಜಮ್ಮಣ್ಣಿ, ಮತ್ತು ಮೊದಲನೇ ಕೃಷ್ಣರಾಜ ಒಡೆಯರ ಪಟ್ಟದ ಅರಸಿ ದೇವಾಜಮ್ಮಣ್ಣಿ ಇವರುಗಳ ಪಾತ್ರವೂ ದೊಡ್ಡದು. ಆದರೆ ಅವುಗಳು ಮೈಸೂರು ಇತಿಹಾಸದ ಪುಟಗಳಲ್ಲಿ ಪ್ರಸ್ತಾಪವಾಗದೆಯೇ ಹೋಗಿವೆ.

ಇವರೆಲ್ಲರ ಪೈಕಿ ಪ್ರಾಯಶಃ ಅತೀ ಹೆಚ್ಚು ಕಷ್ಟ ಸ್ಥಿತಿಗೆ ಸಿಕ್ಕವರೆಂದರೆ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು. ಪ್ರಾಯಶಃ ಅವರು ಪಟ್ಟಷ್ಟು ಕಷ್ಟ ಅರಮನೆಯ ಇನ್ನಾವ ತಾಯಿಯೂ ಅನುಭವಿಸಿಲ್ಲವೆಂದು ಕಾಣುತ್ತದೆ. ಅವರಷ್ಟು ತ್ಯಾಗ ಇನ್ನಾವ ರಾಜಮಾತೆಯೂ ಮಾಡಿರಲಾರರು. ರಾಜ್ಯರಕ್ಷಣೆಯಲ್ಲಿ ಲಕ್ಷ್ಮಮ್ಮಣ್ಣಿಯವರು ಅನುಭವಿಸಿದ ನೋವು-ಸಂಕಷ್ಟ ಅಪರಿಮಿತವಾದುದು. ಎಲ್ಲ ಕಷ್ಟಗಳನ್ನು ಅನುಭವಿಸಿಕೊಂಡು ಅವರು ನಡೆಸಿದ ದೀರ್ಘ ಹೋರಾಟದ ಬದುಕು, ಗುಪ್ತ ಪತ್ರ ವ್ಯವಹಾರ, ಜೀವಕ್ಕೆ ಅಪಾಯ ಎನ್ನುವಾಗಲೂ ನಾಜೂಕಿನಿಂದ ತಮ್ಮ ಗುರಿಯತ್ತ ಸಾಗಿದ್ದು ಇವೆಲ್ಲದರಲ್ಲಿಯೂ ಅವರು ಎಲ್ಲ ರಾಜಮಾತೆಯರಿಗಿಂತ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಆದರ್ಶಪ್ರಾಯರಾಗುತ್ತಾರೆ. ಇಡೀ ಮೈಸೂರು ರಾಣಿಯರ ಇತಿಹಾಸದಲ್ಲಿ ಅವರಿಗೆ ಮಹತ್ವದ ಸ್ಥಾನ ಕೊಡಬೇಕಾಗುತ್ತದೆ. ಯಾವ ರಾಜರಿಗೂ ಕಡಿಮೆಯಿಲ್ಲದಂತೆ ಆ ತಾಯಿ ಕಾರ್ಯನಿರ್ವಹಿಸಿದ್ದಾರೆ.

ಮೂರು ದಶಕಗಳಿಗೂ ಹೆಚ್ಚು ಕಾಲ ಬೆಂದು-ನೊಂದು, ಕೊನೆಗೂ ಗುರಿ ಸಾಧಿಸುತ್ತಾರೆ. ರಾಜ್ಯವನ್ನು ಉಳಿಸುತ್ತಾರೆ. ಅವರು ಈ ಹೋರಾಟ-ತ್ಯಾಗ ಮಾಡದೆ ಹೋಗಿದ್ದರೆ ಮೈಸೂರು ರಾಜ್ಯ ಅಂದು ಇನ್ನಾರ ಪಾಲಾಗುತ್ತಿತ್ತೋ ಅಂತಹ ಐತಿಹಾಸಿಕ ಪಾತ್ರ ಅವರದು. ಆದರೆ ಇತಿಹಾಸದ ಪುಟಗಳಲ್ಲಿ ಅದಕ್ಕೆ ಮಹತ್ವ ಸಿಗದೆ ಹೋಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಮಗೆ ಕಾಣಬರುವ ಇನ್ನೊಬ್ಬ ಮಹಾರಾಣಿ ಎಂದರೆ ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು. ಡೊವೇಜರ್ ಮಹಾರಾಣಿ ಎಂದೇ ಜನರಲ್ಲಿ ಪ್ರಸಿದ್ಧರಾದವರು. ಮುಮ್ಮಡಿಯವರು ದೈವಾಧೀನರಾದ ಮೇಲೆ ಅವರ ದತ್ತು ಪುತ್ರ ಚಾಮರಾಜ ಒಡೆಯರ ಭವಿಷ್ಯ ರೂಪಿಸುವ ಹೊಣೆಗಾರಿಕೆ ಅವರದಾಗುತ್ತದೆ. ತಮ್ಮ ಶೋಕದ ನಡುವೆಯೂ ಅವರು ತಮ್ಮ ಹೆಗಲಿಗೆ ಬಂದ ಎಲ್ಲ ಕಾರ್ಯವನ್ನು ಸಮರ್ಥವಾಗಿ ನಡೆಸುತ್ತಾರೆ. ಅವರ ಪೋಷಣೆಯ ಫಲವಾಗಿ ಮುಂದೆ ಚಾಮರಾಜರು ಪ್ರಾಪ್ತ ವಯಸ್ಸಿಗೆ ಬಂದು ಅಧಿಕಾರ ವಹಿಸಿಕೊಳ್ಳುವ ವೇಳೆಗೆ ಆಡಳಿತದ ಸಾಮರ್ಥ್ಯ ಮತ್ತು ಪ್ರಬುದ್ಧತೆಯನ್ನು ಪಡೆದಿರುತ್ತಾರೆ.


ಕೆಂಪನಂಜಮ್ಮಣ್ಣಿಯವರು


ದೇವಾಜಮ್ಮಣ್ಣಿಯವರು

ನಾಲ್ಕನೇ ಮೈಸೂರು ಯುದ್ಧ 1799ರಲ್ಲಿ ಮುಗಿದ ನಂತರ ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾವಣೆಗೊಂಡಿತು. ಅಂದಿಗೆ ಮೈಸೂರು ಒಂದು ಕುಗ್ರಾಮದಂತಿತ್ತು. ಮೈಸೂರು ಕೋಟೆಯ ಒಳಗಿನ ಪ್ರದೇಶ ಬಹುತೇಕ ಶಿಥಿಲವಾಗಿ ಹೋಗಿತ್ತು. ಅರಮನೆ ಹಾಳಾಗಿತ್ತು. ಇಡೀ ನಗರ ಕೊಳಚೆ ಪ್ರದೇಶದಂತಿದ್ದು. ಕೋಟೆಯ ಹೊರಗಡೆ ತೋಟಗಳು. ಹಟ್ಟಿ ಮನೆಗಳು. ಕಾಡಿನಂತಹ ಜಾಗಗಳು, ಚರಂಡಿ, ರಸ್ತೆ, ನೀರು ಯಾವುದರ ವ್ಯವಸ್ಥೆಯೂ ಇಲ್ಲದ ಅನಾರೋಗ್ಯ ದಿನಗಳು. ಕುಡಿಯುವ ನೀರಿಗೆ ಕೆರೆಗಳೇ ಆಧಾರ. ಪ್ಲೇಗ್, ಕಾಲರಾ ಇತ್ಯಾದಿ ಖಾಯಿಲೆಗಳು ಸಾಮಾನ್ಯವಾಗಿ ಬಿಟ್ಟಿದ್ದವು. ಸಾವಾದರೋ ನೂರರ ಲೆಕ್ಕದಲ್ಲಿ. ಮುಮ್ಮಡಿಯವರ ಪಟ್ಟಾಭಿಷೇಕಕ್ಕೂ ಸರಿಯಾದ ಮನೆಯಿರಲಿಲ್ಲ. ದಸರಾ ಹಬ್ಬ ಆಚರಣೆಗೆ ಸೌಕರ್ಯವಿರಲಿಲ್ಲ. ಅವರ ಬಿಡಾರ ನಝರಬಾದಿನ ಒಂದು ದೊಡ್ಡ ಮನೆಯಲ್ಲಿ ಪಟ್ಟಾಭಿಷೇಕ ನಡೆದದ್ದು ಕೋಟೆಯೊಳಗಿನ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದಲ್ಲಿ.

ಇದು ಮಹಾರಾಣಿ ಸೀತಾವಿಲಾಸರವರ ಕೊಡುಗೆ.

ನಂತರ ಪ್ರಾಮುಖ್ಯತೆಗೆ ಬರುವವರು ಮೈಸೂರಿನ ರೀಜೆಂಟ್ ಆಗಿ ಆಡಳಿತ ನಡೆಸಿದ ಮಹಾರಾಣಿ ವಾಣೀವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿಯವರು. 1895ರ ಫೆಬ್ರವರಿ ಒಂದರಿಂದ 1902ರ ಆಗಸ್ಟ್ 8ರವರೆಗೆ ಏಳೂವರೆ ವರ್ಷಗಳ ಕಾಲ ತಾವು ಬಯಸದೆ ಇದ್ದ ರಾಜ್ಯದ ಜವಾಬ್ದಾರಿ ಹೊರಬೇಕಾಗಿ ಬಂದ ಅವರು ಸಮರ್ಥವಾಗಿ ಅದನ್ನು ನಿರ್ವಹಿಸಿದ್ದು ಇತಿಹಾಸ

ಕಳಲೆ ಅರಸು ಮನೆತನದ ಕಳಲೆ ನರಸೇ ಅರಸು ಮತ್ತು ಗುಣಾಂಬಾ ದಂಪತಿಗಳ ಹಿರಿಯ ಪುತ್ರಿ ವಾಣೀವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿಯವರು ಕೇವಲ 27 ವರ್ಷದವರಾಗಿದ್ದಾಗಲೇ ಪತಿ ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರನ್ನು ದೂರದ ಕಲ್ಕತ್ತಾದಲ್ಲಿ ಕಳೆದುಕೊಂಡ ಆಘಾತವನ್ನು ಎದುರಿಸಬೇಕಾಗಿ ಬರುತ್ತದೆ. ಹಿರಿಯ ಪುತ್ರ ಕೃಷ್ಣರಾಜ ಒಡೆಯರಿಗೆ ಇನ್ನೂ ಅಪ್ರಾಪ್ತ ವಯಸ್ಸು. ಇದರಿಂದಾಗಿ ತಮ್ಮ ಚಿಕ್ಕವಯಸ್ಸಿಗೇ ಮಕ್ಕಳ ಭವಿಷ್ಯಕ್ಕಲ್ಲದೆ, ರಾಜ್ಯದ ರಾಜ್ಯಭಾರ ಹೊತ್ತು ನಾಡಿನ ಏಳಿಗೆಗೂ ಸಮಸಮವಾಗಿ ದುಡಿಯಬೇಕಾಗುತ್ತದೆ. ಅಧಿಕಾರದ ಚುಕ್ಕಾಣಿ ಹಿಡಿದು ದಿವಾನರು ಮತ್ತಿತರ ಅಧಿಕಾರಿಗಳ ನೆರವಿನಿಂದ ತಮ್ಮ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾರೆ. ಎದುರಾದ ಸವಾಲುಗಳನ್ನು ಎದುರಿಸುತ್ತಾರೆ. ಹಲವಾರು ಸಾಧನೆಗಳನ್ನು ಮಾಡಿ ತನ್ಮೂಲಕ ತಮ್ಮ ಛಾಪನ್ನು ಪ್ರತಿ ಕ್ಷೇತ್ರದಲ್ಲಿಯೂ ಬಿಟ್ಟಿರುವುದು ಪರದೆಯ ಹಿಂದಿದ್ದ ಓರ್ವ ರಾಜಮಾತೆಯ ಕಾರ್ಯದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಅವರ ಕೊಡುಗೆಗಳು ರಾಜ್ಯಾದ್ಯಂತ ವ್ಯಾಪಿಸಿದ್ದು ಇಂದಿಗೂ ಕಾಣಸಿಗುತ್ತವೆ. ಅವು ಜನರ ದಿನ ನಿತ್ಯದ ಬದುಕಿಗೆ ನೆರವಾಗುತ್ತಿವೆ. ಪ್ರತಿ ದಿನವೂ ನಾವು ಅವನ್ನು ಅನುಭವಿಸುತ್ತಿದ್ದೇವೆ.

ಅವರ ಅವಧಿಯಲ್ಲಿ ಕಲ್ಪಿಸಿದ ನೀರು, ವಿದ್ಯುಚ್ಛಕ್ತಿ, ವೈದ್ಯಕೀಯ, ಶಿಕ್ಷಣ ಸೌಕರ್ಯಗಳನ್ನು ಇಂದು ಅನುಭವಿಸುತ್ತಿದ್ದೇವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಮೈಸೂರಿನ ಅರಮನೆಯ ಪುನರ್ ನಿರ್ಮಾಣ, ತಮ್ಮ ಪತಿ ಮಹಾರಾಜ ಚಾಮರಾಜೇಂದ್ರ ಒಡೆಯರ ಪ್ರತಿಮೆಯ ನಿರ್ಮಾಣ, ಮಹಾರಾಣಿ ಶಾಲೆ ಪ್ರಾರಂಭಕ್ಕೆ ಪ್ರೋತ್ಸಾಹ, ಭೀಕರ ಪ್ಲೇಗ್ ರೋಗವನ್ನು ಎದುರಿಸಿದ್ದು, ಆಧುನಿಕ ವೈದ್ಯಕೀಯ ಚಿಕಿತ್ಸೆಗೆ ಸೌಲಭ್ಯ ಕಲ್ಪಿಸಿದ್ದು, ಮಕ್ಕಳ ವಿವಾಹ ನಡೆಸಿದ್ದು ಇಂತಹವು ಮಹಾರಾಣಿ ಕೆಂಪನಂಜಮ್ಮಣ್ಣಿಯವರ ರೀಜೆನ್ಸಿಯ ಹಲವಾರು ಮುಖಗಳದ್ದಾಗಿದ್ದವು. ಅವರ ಅವಧಿಯಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಗಳೆಂದರೆ ಶಿವನಸಮುದ್ರ ಜಲವಿದ್ಯುತ್ ಯೋಜನೆ, ಮಾರೀಕಣಿವೆ ಜಲಾಶಯ ನಿರ್ಮಾಣ, ಅಣೆಕಟ್ಟುಗಳ ಕಟ್ಟುವಿಕೆ, ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದವು ಸೇರಿದ್ದವು. ಜೊತೆಗೆ ಆಡಳಿತ ಸುಧಾರಣೆ, ಹೊಸ ಇಲಾಖೆಗಳ ಪ್ರಾರಂಭ, ಕೋಲಾರದ ಚಿನ್ನದ ಗಣಿಯ ಅಭಿವೃದ್ಧಿ, ರಾಜ್ಯದ ಆದಾಯವನ್ನು ಹೆಚ್ಚಿಸಿದ್ದು, ಶಿಕ್ಷಣ ಸೌಲಭ್ಯಗಳನ್ನು ಸೃಷ್ಟಿಸಿದ್ದು, ವಿಜ್ಞಾನಕ್ಕೆ ಪ್ರೋತ್ಸಾಹ ಇವುಗಳೂ ಸೇರಿದ್ದವು.

ಮೈಸೂರು ನಗರಕ್ಕೆ ಕಾವೇರಿ ನೀರನ್ನು ತಂದು ಕೊಟ್ಟಿದ್ದು ಅವರು ಮಾಡಿದ ದೂರದೃಷ್ಟಿಯ ಕಾರ್ಯ. ತಮ್ಮ ಕೈನಿಂದ 20,000 ರೂಪಾಯಿ ದೇಣಿಗೆ ನೀಡಿ ಆ ಕಾರ್ಯಕ್ಕೆ ನೆರವಾದರು. ಸ್ವಚ್ಛ ಕೊಳಾಯಿ ನೀರನ್ನು ಮೈಸೂರಿಗೆ ತಂದು ಕೊಟ್ಟು ತಮ್ಮ ಪ್ರಜೆಗಳ ನೀರಿನ ದಾಹ ತಣಿಸಿದರು.

ಈ ಸಂದರ್ಭದಲ್ಲಿ ಒಂದು ಘಟನೆ ನೆನಪಿಗೆ ಬರುತ್ತದೆ. ವಾಣೀವಿಲಾಸ ಸನ್ನಿಧಾನದವರು ಬೆಳಗೊಳದ ವಾಣೀವಿಲಾಸ ನೀರು ಸರಬರಾಜು ಕಾರ್ಯಾಗಾರದ ನಿರ್ಮಾಣಕ್ಕೆ ಕೊಟ್ಟ ದೇಣಿಗೆಗೆ ಒಂದು ಷರತ್ತು ಹಾಕಿದ್ದರು. 20,000 ಗ್ಯಾಲನ್ ನೀರನ್ನು ಮೈಸೂರು ಜನತೆಗೆ ಉಚಿತವಾಗಿ ಕೊಡಬೇಕು ಎಂಬುದು. ಸುಮಾರು 1950-1960ರ ನಡುವೆ ಅಂದಿನ ಮೈಸೂರು ಪುರಸಭೆ ಈ ನೀರಿನ ಪ್ರಮಾಣವನ್ನು ಕಡಿಮೆ ಮಾಡಲು ತೀರ್ಮಾನ ಕೈಗೊಂಡಿತು. ಮೈಸೂರಿನ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಗಡೂರು ರಾಮಚಂದ್ರರಾಯರು ವಾಣೀವಿಲಾಸ ಸನ್ನಿಧಾನದವರ ಈ ಷರತ್ತಿನ ದಾಖಲೆಯೊಂದಿಗೆ ಕೂಡಲೇ ಮೈಸೂರಿನ ನ್ಯಾಯಾಲಯದ ಮೆಟ್ಟಿಲು ಹತ್ತಿದರು!

ವಾಣೀವಿಲಾಸ ಸನ್ನಿಧಾನದವರ ಉದಾರತೆ ಅಷ್ಟು ದೊಡ್ಡದು. ತಾಯಿ ಹೃದಯದ ವೈಶಾಲ್ಯತೆ. ತಮ್ಮ ಪ್ರಜೆಗಳಿಗೆ ತೊಂದರೆ ಆಗಬಾರದು, ಅವರಿಗೆ ಸಮೃದ್ಧಿಯಾಗಿ ಜೀವಜಲ ದೊರೆಯಬೇಕು ಎನ್ನುವುದು ಅವರ ಹೆಬ್ಬಯಕೆಯಾಗಿತ್ತು. ಅದಕ್ಕೆ ಧಕ್ಕೆಯಾಗುವುದನ್ನು ರಾಮಚಂದ್ರರಾಯರು ಪ್ರಶ್ನಿಸಿದ್ದರು.

ನಾಲ್ಕನೇ ಮೈಸೂರು ಯುದ್ಧ 1799ರಲ್ಲಿ ಮುಗಿದ ನಂತರ ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾವಣೆಗೊಂಡಿತು. ಅಂದಿಗೆ ಮೈಸೂರು ಒಂದು ಕುಗ್ರಾಮದಂತಿತ್ತು. ಮೈಸೂರು ಕೋಟೆಯ ಒಳಗಿನ ಪ್ರದೇಶ ಬಹುತೇಕ ಶಿಥಿಲವಾಗಿ ಹೋಗಿತ್ತು. ಅರಮನೆ ಹಾಳಾಗಿತ್ತು. ಇಡೀ ನಗರ ಕೊಳಚೆ ಪ್ರದೇಶದಂತಿದ್ದು. ಕೋಟೆಯ ಹೊರಗಡೆ ತೋಟಗಳು. ಹಟ್ಟಿ ಮನೆಗಳು. ಕಾಡಿನಂತಹ ಜಾಗಗಳು, ಚರಂಡಿ, ರಸ್ತೆ ನೀರು ಯಾವುದರ ವ್ಯವಸ್ಥೆಯೂ ಇಲ್ಲದ ಅನಾರೋಗ್ಯ ದಿನಗಳು. ಕುಡಿಯುವ ನೀರಿಗೆ ಕೆರೆಗಳೇ ಆಧಾರ. ಪ್ಲೇಗ್, ಕಾಲರಾ ಇತ್ಯಾದಿ ಖಾಯಿಲೆಗಳು ಸಾಮಾನ್ಯವಾಗಿ ಬಿಟ್ಟಿದ್ದವು. ಸಾವಾದರೋ ನೂರರ ಲೆಕ್ಕದಲ್ಲಿ. ಮುಮ್ಮಡಿಯವರ ಪಟ್ಟಾಭಿಷೇಕಕ್ಕೂ ಸರಿಯಾದ ಮನೆಯಿರಲಿಲ್ಲ. ದಸರಾ ಹಬ್ಬ ಆಚರಣೆಗೆ ಸೌಕರ್ಯವಿರಲಿಲ್ಲ. ಅವರ ಬಿಡಾರ ನಝರಬಾದಿನ ಒಂದು ದೊಡ್ಡ ಮನೆಯಲ್ಲಿ ಪಟ್ಟಾಭಿಷೇಕ ನಡೆದದ್ದು ಕೋಟೆಯೊಳಗಿನ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದಲ್ಲಿ.

ಇಂತಹ ಕೆಟ್ಟ ಪರಿಸ್ಥಿತಿಯಲ್ಲಿದ್ದ ಮೈಸೂರು ಪಟ್ಟಣವನ್ನು ಮುಮ್ಮಡಿಯವರು ಉತ್ತಮಪಡಿಸುವ ಕಾರ್ಯ ಪ್ರಾರಂಭಿಸಿದರೆ, ಅವರ ನಂತರ ಪಟ್ಟಾಭಿಷಿಕ್ತರಾದ ಚಾಮರಾಜ ಒಡೆಯರ್ ಮೈಸೂರು ನಗರವನ್ನು ಆಧುನಿಕ ರೀತಿಯಲ್ಲಿ ಬೆಳೆಸುವ ಪ್ರಯತ್ನ ಪ್ರಾರಂಭಿಸಿದರು. ಅವರು ಅಲ್ಪಾಯುಷಿಯಾಗಿ ತೀರಿಕೊಂಡ 40 ದಿನಗಳ ಒಳಗೇ ವಾಣೀವಿಲಾಸ ಸನ್ನಿಧಾನದವರು ರೀಜೆಂಟ್ ಸ್ಥಾನ ವಹಿಸಿಕೊಳ್ಳಬೇಕಾಗಿ ಬಂತು. ಪತಿಯ ಅಗಲಿಕೆಯ ನೋವಿನ ನಡುವೆಯೂ ವಾಣೀವಿಲಾಸ ಸನ್ನಿಧಾನದವರು ತಮ್ಮ ಪತಿಯ ಪ್ರಯತ್ನವನ್ನು ಮುಂದುವರೆಸಿದರು. ಶೋಕದ ನಡುವೆಯೂ ರಾಜ್ಯದ ಅಧಿಕಾರ ಹೊಣೆ ಹೊತ್ತರು. ಕುಟುಂಬದ ಜವಾಬ್ದಾರಿ ನಿರ್ವಹಿಸಿದರು. ತಮ್ಮ ಪ್ರಜೆಗಳಿಗೆ ಮೂಲಭೂತ ಸೌಕರ್ಯಗಳನ್ನು ತಂದುಕೊಟ್ಟರು. ಮುಮ್ಮಡಿಯವರ ಕಾಲದ ಮೈಸೂರಿಗೂ ವಾಣೀವಿಲಾಸ ಸನ್ನಿಧಾನದ ರೀಜೆನ್ಸಿ ಅಂತ್ಯದ ಕಾಲಕ್ಕೂ ಮೈಸೂರು ಅಜಗಜಾಂತರ ಬದಲಾವಣೆ ಕಂಡಿತ್ತು. ಪ್ರಜೆಗಳಿಗೆ ಅಗತ್ಯ ಸೌಕರ್ಯಗಳು ಲಭ್ಯವಾಗಲು ಆರಂಭವಾಗಿದ್ದವು. ಶಿಕ್ಷಣ ಸೌಲಭ್ಯಗಳು ದೊರೆಯುವಂತಾಗಿತ್ತು. ಆಧುನಿಕ ವೈದ್ಯ ಪದ್ಧತಿಯ ಚಿಕಿತ್ಸೆ ಲಭಿಸುವಂತಾಗಿತ್ತು. ರೋಗರುಜಿನಗಳು ಕಡಿಮೆಯಾಗಿ ಜನರ ಮರಣದ ಪ್ರಮಾಣ ಇಳಿಮುಖವಾಗಿತ್ತು. ಜನ ನೆಮ್ಮದಿಯಿಂದ ಬದುಕುವಂತಾಗಿತ್ತು. ಅವರ ಬದುಕು ಹಸನಾಗುವತ್ತ ಹೊರಳುತ್ತಿತ್ತು. ಇದು ವಾಣೀವಿಲಾಸ ಸನ್ನಿಧಾನದ ಅವಧಿಯ ಬಹುತೇಕ ಕೊಡುಗೆಯಾಗಿತ್ತು.

ತಾಯಿಯಾಗಿ ಮನೆಯ ಜವಾಬ್ದಾರಿಯನ್ನೂ ಹೊರಬೇಕಾಗಿದ್ದ ಈ ಮಾತೆ ತಮ್ಮ ಪುತ್ರರಿಗೆ ಅಗತ್ಯ ಶಿಕ್ಷಣ ಕೊಡಿಸಿ ಪ್ರಬುದ್ಧರನ್ನಾಗಿ ಮಾಡಿದರು. ಹಿರಿಯ ಪುತ್ರ ಪ್ರಾಪ್ತ ವಯಸ್ಸಿಗೆ ಬಂದಾಗ ಅಧಿಕಾರ ಬಿಟ್ಟುಕೊಟ್ಟರು. ನಾಲ್ವಡಿ ಕೃಷ್ಣರಾಜರ ಪಟ್ಟಾಭಿಷೇಕ ಕಣ್ತುಂಬಿಕೊಂಡರು.

ಈ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ 1902ರಿಂದ 1909ರವರೆಗೆ ಏಳು ವರ್ಷಗಳ ಕಾಲ ಆಪ್ತ ಕಾರ್ಯದರ್ಶಿಯಾಗಿದ್ದ ಸರ್ ಇವಾನ್ ಮೆಕಾನಿಕೆ ಅವರ ಬಗ್ಗೆ ತುಂಬು ಅರ್ಥದ ಪ್ರಶಂಸೆಯ ಮಾತುಗಳನ್ನು ಆಡಿದರು. ನನ್ನ ಏಳು ವರ್ಷದ ಸೇವೆಯಲ್ಲಿ ಅವರು ಒಮ್ಮೆಯಾದರೂ ತಮ್ಮ ಮಗನ ವೈಯುಕ್ತಿಕ ವ್ಯವಹಾರಗಳಲ್ಲಿ ಕಿಂಚಿತ್ತಾದರೂ ಮಧ್ಯೆ ಪ್ರವೇಶಿಸುವ ಮನೋಭಾವ ಕಿಂಚಿತ್ತೂ ತೋರಿಸಲಿಲ್ಲ ಎಂದು ಮೆಚ್ಚಿ ಹೇಳಿದರು.

ಮಹಾರಾಜ ಕೃಷ್ಣರಾಜ ಒಡೆಯರ್ ತಮ್ಮ ತಾಯಿ ಕೈಗೊಂಡಿದ್ದ ಕಾರ್ಯವನ್ನು ಸಮರ್ಥವಾಗಿ ಮುನ್ನಡೆಸಿದರು. ಅದನ್ನು ಇನ್ನಷ್ಟು ಬೆಳೆಸಿ ರಾಜರ್ಷಿಯಾಗಿ ಕೀರ್ತಿ ಪಡೆದರು. ಮೈಸೂರು ನಗರವನ್ನು ಉಚ್ಛ್ರಾಯ ಸ್ಥಿತಿಗೆ ತಂದರು. ನಂತರ ರಾಜರಾದ ಮಹಾರಾಜ ಜಯಚಾಮರಾಜ ಒಡೆಯರು ಶಿಕ್ಷಣ, ಹೊಸ ಬಡಾವಣೆಗಳ ನಿರ್ಮಾಣ, ಸಾಹಿತ್ಯ, ಸಂಗೀತ ಮುಂತಾದ ಕಾರ್ಯಗಳನ್ನು ಇನ್ನಷ್ಟು ಕೈಗೊಂಡು ತತ್ವಜ್ಞಾನಿಯಾಗಿ, ಸಂಗೀತ ಕೃತಿರಾಜರಾಗಿ ಕೀರ್ತಿಶೇಷರಾದರು.

ವಾಣೀವಿಲಾಸ ಸನ್ನಿಧಾನದವರು ಮೈಸೂರು ನಗರವನ್ನು ಬೆಳೆಸಿದ್ದು ಮಾತ್ರವಲ್ಲದೆ ಜನ ಸಂತೃಪ್ತಿ-ಸಂತೋಷದಿಂದಿರಲು ಅಗತ್ಯ ಭೂಮಿಕೆಯನ್ನೂ ತಮ್ಮ ಮುಂದಿನ ಪೀಳಿಗೆಗೆ ಸಿದ್ಧಗೊಳಿಸಿ ಕೊಟ್ಟರೆನ್ನುವುದು ಗಮನಾರ್ಹ ಅಂಶ ಅವರ ಕೊಡುಗೆ ಅಷ್ಟು ದೊಡ್ಡದು. ಅಷ್ಟು ವೈಶಾಲ್ಯದ್ದು. ಇದನ್ನು ನಾವು ಕೃತಜ್ಞತೆಯಿಂದ ನೆನೆಯಬೇಕಾಗುತ್ತದೆ.

ವಾಣೀವಿಲಾಸ ಸನ್ನಿಧಾನದವರು ರೀಜೆಂಟ್ ಸ್ಥಾನ ವಹಿಸಿಕೊಂಡಾಗ ಅಂದು ಮೈಸೂರಿನ ಕೆಲ ಪ್ರಮುಖರು ಮೂಗುಮುರಿದಿದ್ದು ನಿಜ. ಹೆಣ್ಣೊಂದು ಏನು ಮಾಡಬಲ್ಲದು ಎಂದು ಅಸಡ್ಡೆಯ ಮಾತು ಆಡಿದ್ದುಂಟು. ಆದರೆ ಈ ತಾಯಿಯ ಕಾರ್ಯ ಸಾಧನೆ, ಬಾಹುಳ್ಯ ಆ ಮಾತುಗಳನ್ನು ಅಲ್ಪಾವಧಿಯಲ್ಲೇ ತಲೆಕೆಳಗು ಮಾಡಿತು. ಮೂಗು ಮುರಿದಿದ್ದವರು ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತೆ ಮಾಡಿತು. ಅವರ ರೀಜೆಂಟ್ ಅವಧಿ ಮುಗಿದಾಗ ಅವರು ಇನ್ನೂ ಸ್ವಲ್ಪ ಕಾಲ ಮುಂದುವರಿಯಬೇಕಾಗಿತ್ತು ಎಂದವರು ಎಷ್ಟೋ!

1902ರ ಆಗಸ್ಟ್ 8ರಂದು ಮಹಾರಾಜ ನಾಲ್ವಡಿ ಕೃಷ್ಣರಾಜರನ್ನು ಸಿಂಹಾಸನದ ಮೇಲೆ ಕೂರಿಸಿ ಮಾತನಾಡಿದ ವೈಸರಾಯ್ ಲಾರ್ಡ್ ಕರ್ಜನ್ ವಾಣೀವಿಲಾಸ ಸನ್ನಿಧಾನದ ರೀಜೆಂಟ್ ಅವಧಿಯ ಕಾರ್ಯವನ್ನು ಮೆಚ್ಚಿ ನುಡಿದರು. ಅವರ ಸಾರ್ವಜನಿಕ ಸೇವೆ ಮತ್ತು ಕುಟುಂಬದ ನಿರ್ವಹಣೆಯನ್ನು ಶ್ಲಾಘಿಸಿದರು. ಆದರ್ಶ ಮಹಿಳೆ ಎಂದು ಪ್ರಶಂಸಿಸಿದರು.

ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಅಪೂರ್ವ ಸೇವೆಯನ್ನು ಪರಿಗಣಿಸಿ ಬ್ರಿಟಿಷ್, ಸಾಮ್ರಾಜ್ಞಿ ಅವರಿಗೆ 19 ಕುಶಾಲ ತೋಪುಗಳ ಗೌರವವನ್ನೂ, ಸಿ ಐ., ಅಂದರೆ 'ಇಂಪೀರಿಯಲ್ ಆರ್ಡರ್ ಆಫ್ ದಿ ಕ್ರೌನ್ ಆಫ್ ಇಂಡಿಯಾ' ಪದಕವನ್ನೂ ಕೊಟ್ಟು ಗೌರವಿಸಿದರು.

ಅವರ ಹೆಸರಿನಲ್ಲಿರುವ ಸಂಸ್ಥೆಗಳು, ಕಟ್ಟಡಗಳು, ರಸ್ತೆಗಳು, ಶಾಲೆಗಳು ಮತ್ತಿತರವು ಇಂದು ಅವರಿಗೆ ಸ್ಮಾರಕವಾಗಿ ನಿಂತಿವೆ. ಅವು ಅವರನ್ನು ಸದಾ ನೆನಪಿಗೆ ತರುತ್ತವೆ. ಶತಮಾನ ಕಳೆದರೂ ಅವರ ಹೆಸರು, ಸಾಧನೆ ಧೂಳು ಹಿಡಿದ ಪುಸ್ತಕಗಳಲ್ಲಿ ಉಳಿಯದೆ ಇವುಗಳ ಮೂಲಕ ಜೀವಂತವಾಗಿ ಉಳಿದಿವೆ.

1834ರ ಜುಲೈ 8ರಂದು ಇಹಲೋಕವನ್ನು ತ್ಯಜಿಸಿದ ಈ ತಾಯಿಯ ಬದುಕು ಹೆಣ್ಣು ಮಕ್ಕಳಿಗಂತೂ ಒಂದು ಆದರ್ಶವಾಗಿದೆ. ಮಾದರಿಯ ಬದುಕಿಗೆ ನಿದರ್ಶನವಾಗಿದೆ. ಎಂತಹುದೇ ಕಷ್ಟಗಳು ಉಂಟಾಗಲಿ, ಅವು ಎಷ್ಟೇ ಅಡ್ಡ ಬರಲಿ ಬದುಕನ್ನು ಸಾಧಿಸಬೇಕು. ಸಾಧಿಸಿ ಸಂತೃಪ್ತಿಯ ಬಾಳನ್ನು ನಡೆಸಬೇಕು. ಮುಂದಿನ ಪೀಳಿಗೆಯನ್ನು ಸಮರ್ಥವಾಗಿ, ಸಂದರ್ಭಕ್ಕೆ ತಕ್ಕಂತೆ ಬೆಳೆಸಿ, ಆದರ್ಶದ ತಾಯಿಯಾಗಬೇಕು. ಕಾರ್ಯ ಸಾಧನೆ ಮಾಡಿ ಕೀರ್ತಿ ಗಳಿಸಿ ಮಾದರಿಯಾಗಬೇಕು. ಇದಕ್ಕಿಂತ ದೊಡ್ಡ ಗುರಿ ಬೇರಿಲ್ಲ ಎಂಬ ವಾಣೀವಿಲಾಸ ಸನ್ನಿಧಾನದ ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಸಾಹಸದ ಬದುಕು, ಆ ಬದುಕಿನ ಸಂದೇಶ, ಇಂದಿಗೆ ಮಾತ್ರವಲ್ಲ, ಎಂದೆಂದಿಗೂ ಆದರ್ಶವಾಗಿ ನಿಲ್ಲುತ್ತದೆ. ಬದುಕಿಗೆ ದಾರಿ ತೋರುತ್ತದೆ.



ಪಿಕೆಟಿಬಿ ಸ್ಯಾನಿಟೋರಿಯಂ ಆಸ್ಪತ್ರೆ


ಕೆಆರ್‌ಎಸ್ ಡ್ಯಾಂ


ವಾಣೀವಿಲಾಸ ನೀರು ಸರಬರಾಜು ಕಾರ್ಯಾಗಾರ

ವಾರಭವಿಷ್ಯ

9.11.2025 ರಿಂದ 15.11.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ತುಲಾ, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ವೃಶ್ಚಿಕ, ಬುಧ-ವೃಶ್ಚಿಕ, ಗುರು-ಕಟಕ, ಶುಕ್ರ-ತುಲಾ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ಈ ಸಪ್ತಾಹದಲ್ಲಿ ವೈಯಕ್ತಿಕ ಮತ್ತು ವೃತ್ತಿ ಜೀವನದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಹಣಕಾಸಿನ ವ್ಯವಹಾರ ಮಾಡುವಾಗ ಜಾಗರೂಕರಾಗಿರಿ. ದಾಖಲೆಗಳನ್ನು ಓದದೆ ಸಹಿ ಹಾಕಬಾರದು. ಸಿವಿಲ್ ಇಂಜಿನಿಯರ್‌ಗಳಿಗೆ ಗುತ್ತಿಗೆದಾರರಿಗೆ ಕೈತುಂಬಾ ಕೆಲಸ ಹಾಗೂ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಆದರೆ ಆಳು ಕಾಳುಗಳು ಅಸಹಕಾರ ತೋರುವರು.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

'ಪ್ರಯತ್ನ ಪುರುಷಾಧೀನ, ಫಲ ದೈವಾಧೀನ', ನಿಮ್ಮ ಕರ್ತವ್ಯದಲ್ಲಿ ಶ್ರದ್ಧೆ ಇರಲಿ. ಮನಃ ಚಂಚಲತೆಯಿಂದ ಮಾಡುವ ಕೆಲಸಗಳಲ್ಲಿ ವಿಘ್ನಗಳು ಉಂಟಾದೀತು. ಕಳತ್ರ-ಮಿತ್ರರೊಂದಿಗೆ ಘರ್ಷಣೆಗೆ ಅವಕಾಶ ಕೊಡದಿರಿ. ಅನ್ನ-ಪಾನಗಳಲ್ಲಿ ಲೋಪ ಉಂಟಾಗುವುದರಿಂದ ಅನಾರೋಗ್ಯಕ್ಕೆ ಗುರಿಯಾಗುವಿರಿ. ವಾರಾಂತ್ಯಕ್ಕೆ ಸುಖ ಸಾಧನಗಳ ಪ್ರಾಪ್ತಿ. ಎಲ್ಲರ ಆದರಕ್ಕೆ ಪಾತ್ರರಾಗುವಿರಿ.

ಶ್ರೀ ರಾಮನಾಮ ಜಪ. ಶುಭ ಸಂಖ್ಯೆ-3

ಮಿಥುನ (ಕ,ಕಿ,ಕು,ಘ,ಜ,ಛ,ಕೆ,ಕೊ,ಹ)

ದೂರ ಸರಿದಿದ್ದವರು ಹತ್ತಿರ ಬರುವರು. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಇಂಜಿನಿಯರಿಂಗ್ ಹಾಗೂ ವಿದ್ಯಾಸಂಸ್ಥೆಗಳು ಗಣನೀಯ ಲಾಭವನ್ನು ಹೊಂದುವರು. ಸೃಜನಶೀಲ ವ್ಯಕ್ತಿಗಳಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ನಿಮಗೆ ಅಸಾಧ್ಯವಾದ ಕೆಲಸಗಳಿಗೆ ಕೈ ಹಾಕದಿರಿ. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ಸ್ತ್ರೀಯರು ಆಭರಣ ತೆಗೆದಿಟ್ಟು ವಾಯುವಿಹಾರಕ್ಕೆ ತೆರಳಲಿ.

ಶ್ರೀ ಸತ್ಯನಾರಾಯಣ ಕಥೆ ಓದಿ. ಶುಭ ಸಂಖ್ಯೆ-3

ಕಟಕ (ಹೊ,ಹು,ಹೆ,ಡ,ಡಿ,ಡು)

ಮನೆಯಲ್ಲೂ, ಕಚೇರಿಯಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುತ್ತದೆ. ಅದರಂತೆ ಸಾಲಗಾರರ ಒತ್ತಡವೂ ಇರುತ್ತದೆ. ಕೆಲವೊಮ್ಮೆ ರಾಹು-ಕೇತುಗಳು ಸ್ವೇಚ್ಛಾಚಾರಕ್ಕೆ ಪ್ರೇರಣೆ ನೀಡಿ ತೊಂದರೆಗೆ ಒಳಗಾಗುವಿರಿ. ವಾರಾಂತ್ಯಕ್ಕೆ ಮಾತಿನಂತೆ ನಡೆದು ಮಿತ್ರ ವೃಂದದಲ್ಲಿ ಮೆಚ್ಚುಗೆಗೆ ಪಾತ್ರರಾಗುವಿರಿ. ನಿಮ್ಮ ಆರೋಗ್ಯದ ಬಗ್ಗೆ ಅಸಡ್ಡೆ ಬೇಡ.

ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ-8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಅಪೇಕ್ಷಿತ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಆಸೆಗಳಿಗೆ ಕಡಿವಾಣ ಹಾಕಿದರೆ ಸಾಲ ಮಾಡಬೇಕಾದ ಪರಿಸ್ಥಿತಿ ಬರದು. ವಾರಮಧ್ಯೆ ಆಪ್ತೇಷ್ಟರ ಮಿಲನ ಮನಸ್ಸಿಗೆ ಮುದ ನೀಡುವುದು. ಪಾನ ಗೋಷ್ಠಿಗಳಲ್ಲಿ ಸಂಯಮಿಗಳಾಗಿರಿ. ಟ್ರಾವೆಲ್ ಏಜೆನ್ಸಿಯವರು ಉತ್ತಮ ಯೋಜನೆಗಳನ್ನು ಆಯೋಜಿಸಿ. ಹೆಚ್ಚಿನ ಲಾಭವನ್ನು ಗಳಿಸುವ ಸಟ್ಟಾ, ಜೂಜುಗಳು ಲಾಭವನ್ನು ತರದು.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-4

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಈ ವಾರ ನೀವು ಅನೇಕ ಮೂಲಗಳಿಂದ ಧನವನ್ನು ಪಡೆಯುತ್ತೀರಿ. ಗುರು ಗೋಚನ ಶುಭವಿದೆ. ನಿಮ್ಮ ಯೋಜನೆಗಳನ್ನು ಮರು ಹೊಂದಾಣಿಕೆ ಮಾಡಲು ಬೃಹಸ್ಪತಿಯ ಪ್ರೇರಣೆ ಇದೆ. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಉಳಿಸಲು ಸಾಧ್ಯವಾಗುತ್ತದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ರಾಹು-ಕೇತುಗಳು ಕುಟುಂಬದಲ್ಲಿ ಸೌಹಾರ್ದತೆ ಕೆಡಲು ಕಾರಣರಾಗುತ್ತಾರೆ.

ಶ್ರೀ ವಿಷ್ಣು ಉಪಾಸನೆ. ಶುಭ ಸಂಖ್ಯೆ-2

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದ ಆರಂಭಕ್ಕೆ ಕಬ್ಬಿಣ, ಸ್ಟೀಲ್ ವ್ಯಾಪಾರಿಗಳಿಗೆ ಭರಾಟೆಯ ವ್ಯಾಪಾರ ಹಾಗೂ ಹೆಚ್ಚಿನ ಧನ ಸಂಪಾದನೆ. ಸಿವಿಲ್ ಇಂಜಿನಿಯರುಗಳಿಗೆ ಉತ್ತಮ ಕಂಟ್ರಾಕ್ಟ್ ದೊರೆಯುವುದು. ನಿಮ್ಮ ನಿಕಟವರ್ತಿಗಳು ನಿಮ್ಮ ಮಹತ್ವದ ಕಾರ್ಯ ಕಲಾಪಗಳಿಗೆ ನೆರವು ನೀಡುವರು. ಮಕ್ಕಳ ಉನ್ನತ ವ್ಯಾಸಂಗಕ್ಕೆ ದಾರಿ ಸುಗಮವಾಗುವುದು. ಕುಶಲಕರ್ಮಿಗಳಿಗೆ ಸರಕಾರದಿಂದ ಸಹಾಯ ದೊರೆಯುವುದು. ನರದೌರ್ಬಲ್ಯ ಕಾಡಬಹುದು.

ಶ್ರೀ ಸಪ್ತಮಾತೃಕಾ ಸ್ತುತಿ. ಶುಭ ಸಂಖ್ಯೆ-9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

'ಗಾಳಿ ಬಂದಾಗ ತೂರಿಕೊ' ಶ್ರೀ ಗುರು-ಚಂದ್ರರ ಶುಭ ಸಂಚಾರದಿಂದ ಕುಟುಂಬದಲ್ಲಿ ಯಾವುದೇ ಶುಭ ಸಮಾರಂಭ ಆಯೋಜಿಸುವ ಸಾಧ್ಯತೆ ಇದೆ. ನಿಮ್ಮ ವೃತ್ತಿ ಜೀವನವೂ ಮಂಗಳಕರವಾಗಿರುತ್ತದೆ. ನಿಮ್ಮ ಗುರಿ ಸ್ಪಷ್ಟವಾಗಿದೆ. ಮುಂದೆ ಸಾಗಬೇಕಾದವರು ನೀವೇ. ವಿವಾಹಯೋಗ್ಯ ಕನ್ಯಾಮಣಿಗಳಿಗೆ ಕಂಕಣಬಲ ಕೂಡಿ ಬರುವುದು. ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಗ್ರಹಗಳು ಅನುಕೂಲಕರವಾಗಿವೆ.

ಶ್ರೀ ಲಕ್ಷ್ಮೀನೃಸಿಂಹ ದರ್ಶನ. ಶುಭ ಸಂಖ್ಯೆ-5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಉಪಾಯ ಬಲ್ಲವರಿಗೆ ಅಪಾಯವಿಲ್ಲ ಎಂಬ ಗಾದೆಯಂತೆ ನಿಮ್ಮ ಜಾಣ್ಮೆ ಬಳಸಿ ಕಷ್ಟಗಳಿಂದ ಹೊರಬರುವಿರಿ. ಪಿತ್ರಾರ್ಜಿತ ಆಸ್ತಿಯನ್ನು ಮಾರುವ ಯೋಚನೆ ಬಿಡಿ. ಇದರಿಂದ ಮನೆಯಲ್ಲಿ ಸಂಘರ್ಷಗಳು ಉಂಟಾಗುವುದು. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳ ಅವಕೃಪೆ. ಯಾರಲ್ಲೂ ದ್ವೇಷ ಸಾಧಿಸದಿರಿ. ಅಕಾಲ ಭೋಜನದಿಂದ ಗ್ಯಾಸ್ ಟ್ರಬಲ್‌ಗೆ ಗುರಿಯಾಗುವಿರಿ.

ಶ್ರೀ ಮಂತ್ರಾಲಯ ಪ್ರಭುಗಳ ಧ್ಯಾನ. ಶುಭ ಸಂಖ್ಯೆ-2

ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)

ಗೃಹದಲ್ಲಿ ಮಂಗಳ ಕಾರ್ಯಗಳು ಜರುಗುವುದು. ಧನಲಾಭ, ಸ್ತ್ರೀ ಸೌಖ್ಯ, ವಾಂಛಿತ ಆಕಾಂಕ್ಷೆಗಳು ಈಡೇರುವುದು. ಇಷ್ಟ ಬಂಧುಜನರ ಆಗಮನದಿಂದ ಹರ್ಷಚಿತ್ತರಾಗುವಿರಿ. ಎಣ್ಣೆ ಕಾಳು ವ್ಯಾಪಾರಿಗಳಿಗೆ, ಎಣ್ಣೆ ಮಿಲ್‌ನವರಿಗೆ ನಿರೀಕ್ಷೆ ಮೀರಿ ಧನಲಾಭವಾಗುವುದು. ವಾರದ ಉತ್ತರಾರ್ಧಕ್ಕೆ ಸ್ಥಗಿತಗೊಂಡಿದ್ದ ಕೆಲಸಕ್ಕೆ ಮರು ಚಾಲನೆ ದೊರೆಯುವುದು. ಮಹಿಳಾ ಮಣಿಯರು ಮಾಂಗಲ್ಯಸರ ಮುಚ್ಚಿಕೊಂಡು ರಕ್ಷಿಸಿಕೊಳ್ಳಿ.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ನೀವೀಗ ಪರೀಕ್ಷಾ ಸಮಯದಲ್ಲಿ ಸಾಗುತ್ತಿದ್ದೀರಾ. ಸವಾಲುಗಳು ಒಂದರ ಮೇಲೆ ಒಂದರಂತೆ ಬರುತ್ತಿವೆ. ಅದನ್ನು ಸ್ವೀಕರಿಸದೆ ಗತ್ಯಂತರವಿಲ್ಲ. ಹಠಸಾಧನೆಗೆ ನಿಮ್ಮ ರಾಶಿಯಲ್ಲೇ ಇರುವ ರಾಹುಗ್ರಹ ಪ್ರೇರೇಪಿಸಬಹುದು. ಅಷ್ಟಿಷ್ಟು ಧನ ಸಂಪಾದನೆ ಆದರೂ ಅನಾರೋಗ್ಯ ನಿಮಿತ್ತ ಖರ್ಚಾಗುವುದು. ನಿಮ್ಮ ಆಸ್ತಿ ದಾಖಲೆಗಳನ್ನು ಸರಿಯಾಗಿ ಜೋಪಾನ ಮಾಡಿಕೊಳ್ಳಿ. ವಾರಾಂತ್ಯಕ್ಕೆ ದೇವತಾ ಕಾರ್ಯಗಳಲ್ಲಿ ಭಾಗಿ.

ಶ್ರೀ ಶಿರಡಿಸಾಯಿ ದರ್ಶನ. ಶುಭ ಸಂಖ್ಯೆ-5

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಈ ವಾರ ನಿಮ್ಮ ಆರ್ಥಿಕ ಸಬಲತೆ ಸೇರಿದಂತೆ ಪ್ರಮುಖ ಸಾಮಾಜಿಕ ವಿಚಾರಗಳು ನಿಮ್ಮ ಪರವಾಗಿ ಇರುವುದು. ವಾಕ್ಚಾತುರ್ಯದಿಂದ ಎದುರಾಳಿಯನ್ನು ನಿರಸ್ತ ಮಾಡುವಿರಿ. ವಿವಾಹ ಯೋಗ್ಯರಿಗೆ ಉತ್ತಮ ಬಾಳ ಸಂಗಾತಿ ದೊರೆಯುವ ಸಾಧ್ಯತೆ ಇದೆ. ಮುತ್ತು, ರತ್ನ, ಆಭರಣ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರಕ್ಕಾಗಿ ದನಲಾಭವನ್ನು ಹೊಂದುವರು. ಆರೋಗ್ಯದಲ್ಲಿ ಚೇತರಿಕೆ ಕಂಡು ಬರುವುದು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-7

ಸಮಾನತೆ ಸಾರಿದ ಕ್ರಾಂತಿಕಾರಿ ಭಕ್ತ ಕನಕದಾಸರು

ತಿ.ನರಸೀಪುರ ಕನಕ ಜಯಂತಿಯಲ್ಲಿ ಶಾಸಕ ಡಾ.ಯತೀಂದ್ರ ಬಣ್ಣನೆ



ತಿ.ನರಸೀಪುರದಲ್ಲಿ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಯತೀಂದ್ರ ಉದ್ಘಾಟಿಸಿದರು.

ತಿ.ನರಸೀಪುರ, ನ.8– ಭಕ್ತ ಕನಕದಾಸರು ಕೇವಲ ಒಂದು ಜಾತಿಗೆ ಸೀಮಿತರಾದವರಲ್ಲ. ಇಡೀ ಸಮಾಜಕ್ಕೆ ಉತ್ತಮ ಸಾಹಿತ್ಯ ನೀಡುವುದರ ಮೂಲಕ ಸಮಾನತೆ ಸಾರಿದರು ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಬಣ್ಣಿಸಿದರು.

ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಕುರುಬರ ಸಂಘದ ಸಂಯುಕ್ತ ಆಶ್ರಯದಲ್ಲಿ ತಾಲೂಕು ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂತ ಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೀರ್ತನೆಗಳ ಮೂಲಕ ಸಮಾಜದ ಬದಲಾವಣೆಗೆ ಕನಕದಾಸರು ಶ್ರಮಿಸಿದರು. ಸಮಾಜದಲ್ಲಿನ ಕಂದಾಚಾರಗಳನ್ನು ಹೋಗಲಾಡಿಸಲು ತಮ್ಮ ಕೀರ್ತನೆಗಳ ಮೂಲಕ ಶ್ರಮಿಸಿದ್ದಾರೆ. ಕೀರ್ತನೆಗಳ ಮೂಲಕ ಜನರ ಮನೋಭಾವನೆಗಳನ್ನು ಬದಲಾಯಿಸಿ ಒಳ್ಳೆಯ ಆಲೋಚನೆಗಳನ್ನು ಮೂಡುವಂತೆ ಮಾಡಿದ ಸಾಮಾಜಿಕ ಕ್ರಾಂತಿಕಾರಿ ಸಂತರು ಕನಕದಾಸರಾಗಿದ್ದಾರೆ. ಸಮಾಜದಲ್ಲಿ ಸಮಾನತೆಯನ್ನು ತರಲು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಹೆಚ್ಚಿನ ಒತ್ತು ನೀಡಿದ್ದರು. ತಮ್ಮ ಭಕ್ತಿಯ ಮೂಲಕ ದೇವರನ್ನು ಒಲಿಸಿಕೊಂಡ ಮಹಾನ್ ಸಂತ ಕನಕರು ಎಂದರು.

ಮೇಲು ಕೀಳುಗಳಿಲ್ಲದ ಸಮಾನತೆಯ ಸಮಾಜ ಸೃಷ್ಟಿಗೆ ಕನಕದಾಸರು ಪ್ರೇರಣೆ ನೀಡಿದರು. ಭಾರತ ಕಂಡ ಒಬ್ಬ ಶ್ರೇಷ್ಠ ಸಂತ ಹಾಗೂ ಮಹಾನ್ ವ್ಯಕ್ತಿಯಾದ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಮೌಢ್ಯತೆ ತೊಡೆದು ಹಾಕುವಲ್ಲಿ ಶ್ರಮಿಸಿದರು. ಕನಕದಾಸರು ಕುರುಬ ಜಾತಿಯಲ್ಲಿ ಹುಟ್ಟಿರಬಹುದು,ಅದರೆ ಅವರು ಎಲ್ಲ ಸಮಾಜಕ್ಕೂ ಸೇರಿದ ಸ್ವತ್ತಾಗಿದ್ದಾರೆ. ಅವರ ಭೋಧನೆ ಎಲ್ಲರಿಗೂ ಎಲ್ಲ ಕಾಲಕ್ಕೂ ಸಲ್ಲುವಂತದ್ದಾಗಿದ್ದು, ಅವರು 15ನೇ ಶತಮಾನದಲ್ಲಿ ಜನಿಸಿದ್ದರೂ ಅವರ ಭೋದನೆಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ ಎಂದರು.

ಜಾತಿ ವ್ಯವಸ್ಥೆ ಹೋಗಲಾಡಿಸಬೇಕಿದೆ...!: ನಮಗೆ ಈಗಲೂ ಸಾವಿರಾರು ವರ್ಷಗಳಿಂದ ನಡೆದು ಬಂದ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಬುದ್ಧ, ಬಸವ, ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆ ಹೋಗಲಾಡಿಸಲು ಎಷ್ಟೇ ಶ್ರಮ ಪಟ್ಟರು ಅದು ಸಾಧ್ಯವಾಗಲಿಲ್ಲ. ನಾವೆಲ್ಲರೂ ಸಾವಿರಾರು ವರ್ಷಗಳಿಂದ ಜಾತಿ ಎಂಬ ಸಂಕೋಲೆಗೆ ಸಿಲುಕಿದ್ದೇವೆ, ಅದನ್ನು ಹೋಗಲಾಡಿಸುವ ಪ್ರಯತ್ನದಲ್ಲಿ ಇದ್ದೇವೆಯಾದರೂ ಅದು ಸಾಧ್ಯವಾಗುತ್ತಿಲ್ಲ. ಹಾಗೆಂದ ಮಾತ್ರಕ್ಕೆ ಪ್ರಯತ್ನ ಕೈಬಿಡದೇ ಅನಿಷ್ಟ ವ್ಯವಸ್ಥೆಯನ್ನು ಹೋಗಲಾಡಿಸಲು ನಿರಂತರ ಪ್ರಯತ್ನ ಮಾಡಬೇಕು. ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಬೇಕು ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ 16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಬಹಳ ಪ್ರಬಲವಾಗಿತ್ತು. ತಳ ಸಮುದಾಯಗಳು ಶೋಷಣೆಗೆ ಒಳಗಾಗಿದ್ದ ವೇಳೆ ಅವರ ಧ್ವನಿಯಾಗಿ ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಿದ್ದು ಕನಕದಾಸರು ಬರಿ ದಾರ್ಶನಿಕ ಹಾಗೂ ಸನ್ಮಾರ್ಗವನ್ನು ನಮ್ಮೆಲ್ಲರಿಗೂ ಬಿಟ್ಟು ಹೋಗಿದ್ದಾರೆ. ಸಾಮಾಜಿಕ ವ್ಯವಸ್ಥೆ ಸರಿಪಡಿಸಲು ದೇವರು ಆಗಾಗ ಮಹಾತ್ಮರ ರೂಪದಲ್ಲಿ ಭೂಮಿಗೆ ಬರುತ್ತಾನೆ. ಚಿನ್ನದ ಬದಲು ಚಿನ್ನದಂತಹ ಮನಸ್ಸಿದ್ದರೆ ದೊಡ್ಡ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದರು.

ಉಪನ್ಯಾಸಕ ರಮೇಶ್ ಮುಖ್ಯ ಭಾಷಣ ಮಾಡಿದರು. ಈ ವೇಳೆ ಸಾನಿಧ್ಯವನ್ನು ದೊರೆಸ್ವಾಮಿಗಳು, ಜಿ.ಪಂ. ಮಾಜಿ ಸದಸ್ಯ ಟಿ.ಎಚ್. ಮಂಜುನಾಥ್, ಮೂಗೂರು ಸೋಮಣ್ಣ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಖಜಾಂಚಿ ಮಲ್ಲೇಶ್, ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಪ್ರಶಾಂತ ಬಾಬು, ತಾ.ಪಂ. ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ತಾಪಂ ಮಾಜಿ ಅಧ್ಯಕ್ಷರಾದ ಕುಕ್ಕೂರು ಗಣೇಶ್, ರಮೇಶ್, ಪುರಸಭಾ ಮಾಜಿ ಅಧ್ಯಕ್ಷರಾದ ಎನ್.ಸೋಮು, ಟಿ.ಎಂ.ನಂಜುಂಡಸ್ವಾಮಿ, ಬಾದಾಮಿ ಮಂಜು, ಸುನಿಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ, ವೆಂಕಿ, ಮಾದೇಶ್, ದೊಡ್ಡೆಬಾಗಿಲು ಎಂ. ಮಲ್ಲಿಕಾರ್ಜುನಸ್ವಾಮಿ, ವಾಟಾಳು ನಾಗೇಶ್, ರಾಜೇಗೌಡ, ಅಕ್ಕೂರು ಗುರುಮೂರ್ತಿ, ರಾಮನುಜಯ್ಯ ಬೋರ್‌ವೆಲ್ ಪರಶಿವ, ಅನೂಪ್ ಗೌಡ, ಮುದ್ದುಬೀರನ ಹುಂಡಿ ಗುರುಸ್ವಾಮಿ, ಶ್ರೀಕಂಠ, ಅರುಣ್‌ಗೌಡ, ಎಚ್.ಬಿ.ಚಿಕ್ಕನಂಜಯ್ಯ, ಭಾಗ್ಯಮ್ಮ ಲತಾಜಗದೀಶ್, ಮೂಗೂರು ಕುಮಾರ ಸ್ವಾಮಿ, ಕನ್ನಡ ಪುಟ್ಟಸ್ವಾಮಿ, ಕರಿಯಪ್ಪ, ತಿರುಮಕೂಡಲು ಲಕ್ಷ್ಮಣ, ತಹಶೀಲ್ದಾರ್ ಸುರೇಶಾಚಾರ್ ಮತ್ತೀತರರಿದ್ದರು.


ಕನಕದಾಸರ ಭವ್ಯ ಮೆರವಣಿಗೆ....!



ವೇದಿಕೆ ಕಾರ್ಯಕ್ರಮಕ್ಕೆ ಮೊದಲು ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಕನಕದಾಸರ ಭಾವ ಚಿತ್ರದ ಮೆರವಣಿಗೆಗೆ ಪ್ರಮುಖ ಮುಖಂಡರು ಚಾಲನೆ ನೀಡಿದರು. ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ನಂತರ ಮೆರವಣಿಗೆ ವಿಶ್ವಕರ್ಮ ರಸ್ತೆ ಪ್ರಾಥಮಿಕ ಶಾಲೆ ರಸ್ತೆ, ಲಿಂಕ್ ರಸ್ತೆ,ಕಾಲೇಜು ರಸ್ತೆ ಮೂಲಕ ಕಾರ್ಯಕ್ರಮ ನಡೆಯುವ ತಾಲೂಕು ಕಚೇರಿಗೆ ತೆರಳಿತು. ಭಕ್ತ ಕನಕದಾಸರ ಭಾವಚಿತ್ರ ಹೊತ್ತ ಬೆಳ್ಳಿ ರಥ ಪಟ್ಟಣದ ಪ್ರಮುಖ ಬೀದಿಯಲ್ಲಿ ಸಂಚರಿಸಿತು. ರಥದೊಟ್ಟಿಗೆ ಪೂಜಾ ಕುಣಿತ, ಗೊಂಬೆ ಕುಣಿತ, ವೀರಭದ್ರ ಕುಣಿತ, ಡೊಳ್ಳು, ನಗಾರಿ ಸೇರಿದಂತೆ ಮತ್ತಿತರೆ ಸ್ಥಬ್ದ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿದವು. ವಿವಿಧ ಸಮಾಜದ ಮುಖಂಡರು ತಲೆಗೆ ಕೇಸರಿ ಬಣ್ಣದ ರುಮಾಲು ಧರಿಸಿ ಮೆರವಣಿಗೆಯಲ್ಲಿ ಸಾಗಿ ನೃತ್ಯ ಪ್ರದರ್ಶಿಸಿದರು.

ಕನಕದಾಸರು ಜಾತ್ಯಾತೀತ ತತ್ವಗಳನ್ನು ಸಾರಿದ ಮಹಾಪುರುಷ

ನಂಜನಗೂಡು: ಕನಕದಾಸರು ದಾಸ ಶ್ರೇಷ್ಠರು, ದಾರ್ಶನಿಕರು, ಅಸ್ಪೃಶ್ಯತೆ, ಡಂಭಾಚಾರಗಳ ವಿರುದ್ದ ಜಾತ್ಯತೀತ ತತ್ವಗಳನ್ನು ಸಾರುವ ಮೂಲಕ ಸಮಾಜ ಸುಧಾರಣೆ ಮಾಡಿದ ಮಹಾಪುರುಷ, ಅವರ ತತ್ವ, ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.



ನಂಜನಗೂಡಿನಲ್ಲಿ ಶನಿವಾರ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮ.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಯೋಜಿಸಿದ್ದ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಬಂದು 76 ವರ್ಷ ಕಳೆದರೂ ಸಹ ಸಮಾಜದಲ್ಲಿ ಇನ್ನು ಅಸ್ಪೃಶ್ಯತೆ ದೂರವಾಗಿಲ್ಲ, ಆದರೆ ಅಸ್ಪೃಶ್ಯತೆ ಮತ್ತು ಜಾತೀಯತೆ ಹೆಚ್ಚಾಗಿದ್ದ ಕಾಲದಲ್ಲಿ ಭಕ್ತ ಕನಕದಾಸರು ಕುಲ, ಕುಲ, ಕುಲವೆಂದು ಒಡೆದಾಡದಿರಿ, ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ? ಎಂದು ಹಾಡಿ ಜಾತ್ಯಾತೀತ ತತ್ವಗಳನ್ನು ಸಾರಿದವರು, ಶೋಷಿತರ ಪರವಾದ ಗಟ್ಟಿಧ್ವನಿಯಾಗಿದ್ದ ಕನಕದಾಸರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ, ಅವರ ಕೃತಿಗಳು ಸರ್ವಕಾಲಕ್ಕೂ ಶ್ರೇಷ್ಠವಾದದ್ದು, ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದರಲ್ಲದೆ, ಇಂದಿನ ವಿದ್ಯಾರ್ಥಿಗಳಿಗೆ ಸಮಾಜ ಸುಧಾರಕರ ತತ್ವ ಸಿದ್ಧಾಂತಗಳನ್ನು ತಿಳಿಸಿ ತಿಳುವಳಿಕೆ ಮೂಡಿಸಿದಾಗ ಮಾತ್ರ ಸಮಾಜದಲ್ಲಿ ಅಸ್ಪೃಶ್ಯತೆ ದೂರ ಮಾಡಲು ಸಾಧ್ಯ, ಆದ್ದರಿಂದ ಎಲ್ಲರೂ ಶಿಕ್ಷಣದ ಜೊತೆಗೆ ಮಹನೀಯರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಬಾಳ್ವೆ ಮಾಡುವಂತಾಗಬೇಕು ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕರಾದ ಕಳಲೆಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಎಂ.ಶಂಕರ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷರಾದ ತಮ್ಮಣ್ಣೇಗೌಡ, ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ಕುರುಬರ ಸಂಘದ ಮಾಜಿ ಅಧ್ಯಕ್ಷ ಕೆಂಪಣ್ಣ, ಮುಖಂಡರಾದ ಕುಳ್ಳಯ್ಯ, ಟಿ.ಎಲ್. ಮೋಹನ್ ಕುಮಾರ್, ಕುರಿಹುಂಡಿರಾಜು, ಪ್ರದೀಪ್ ಕುಮಾರ್, ವಾಲೆ ನಾಗರಾಜ್, ಬೀರೇಶ್, ವಿಶ್ವನಾಥ್, ದಕ್ಷಿಣ ಮೂರ್ತಿ, ಸ್ವಾಮಿ, ಆನಂದ್, ದೊರೆಸ್ವಾಮಿನಾಯಕ, ಹಾಲುಮತ ಅಧ್ಯಕ್ಷ ಕುಮಾರ್, ಉಪ್ಪಿನಳ್ಳಿ ಶಿವಣ್ಣ, ನಗರಸಭಾ ಸದಸ್ಯರಾದ ಗಂಗಾಧರ್ ಎಸ್ಪಿ ಮಹೇಶ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಇಟ್ನಾದಲ್ಲಿ ಹುಲಿ ಪ್ರತ್ಯಕ್ಷ

ಸರಗೂರು: ತಾಲೂಕಿನ ಇಟ್ನಾ ಗ್ರಾಮದಲ್ಲಿ ಶನಿವಾರ ಮುಂಜಾನೆ ಹುಲಿಯೊಂದು ಕಾಣಿಸಿಕೊಂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರನ್ನು ಭಯಭೀತಗೊಳಿಸಿದೆ.

ಈಗಾಗಲೇ ಹಲವಾರು ಜನ ಮತ್ತು ಜಾನುವಾರುಗಳನ್ನು ಹುಲಿ ಬಲಿ ತೆಗೆದುಕೊಂಡಿರುವುದರಿಂದ ಗ್ರಾಮಸ್ಥರು ತಮ್ಮ ಹೊಲ ಗದ್ದೆಗಳಿಗೆ ಹೋಗಲು ಹಿಂಜರಿಯುವಂತಾಗಿದೆ.

ಅರಣ್ಯ ಇಲಾಖೆಯ ಮಾಹಿತಿ ಪ್ರಕಾರ ಇಟ್ನಾ ಗ್ರಾಮದ ಸುತ್ತಮುತ್ತ ಹುಲಿ ಕಾಣಿಸಿಕೊಂಡಿರುವುದು ದೃಢಪಟ್ಟಿದೆ. ಗ್ರಾಮಸ್ಥರು ಹಾಗೂ ರೈತರು ಜಾಗ್ರತೆ ವಹಿಸುವಂತೆ ಅರಣ್ಯ ಇಲಾಖೆ ಕೋರಿದೆ.

ಯಾರಿಗಾದರೂ ಹುಲಿ, ಚಿರತೆ ಕಂಡು ಬಂದಲ್ಲಿ ಅಥವಾ ಅದರ ಚಿಹ್ನೆಗಳು ಕಂಡು ಬಂದರೆ ತಕ್ಷಣ ಅರಣ್ಯ ಇಲಾಖೆಯ ಸಹಾಯವಾಣಿ ಸಂಖ್ಯೆ 1926ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಶಾಸಕ ಅನಿಲ್ ಚಿಕ್ಕಮಾದು ಕೋರಿದ್ದಾರೆ.

ಸರಗೂರಲ್ಲಿ ಕನಕದಾಸರ ಜಯಂತಿ ಆಚರಣೆ



ಸರಗೂರು: ಸರಗೂರಿನ ಸರ್ಕಾರಿ ಗ್ರಂಥಾಲಯದಲ್ಲಿ ಸಂತ ಕವಿ ದಾಸಶ್ರೇಷ್ಠ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು

ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕನಕದಾಸರ ಕುರಿತು ಗ್ರಂಥಾಲಯ ಮೇಲ್ವಿಚಾರಕ ಬಿಡಗಲು ಶಿವಣ್ಣ ಮಾತನಾಡಿ ಕನಕದಾಸರು ಕುಲವಿಲ್ಲದ ನೆಲೆಗಾಗಿ ನಡೆದಾಡಿದ ಸಂತ ಕವಿ ಮತ್ತು ದಾರ್ಶನಿಕ. 15–16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ವಿರುದ್ಧ ಸಮರ ಸಾರಿದ ಸಮಾಜ ಸುಧಾರಕ, ಮೌಢ್ಯದ ವಿರುದ್ಧ ಜನರಲ್ಲಿ ಅರಿವು ಮೂಡಿಸಲು ಶ್ರಮಿಸಿದ ಮಹಾಪುರುಷ. ಸರ್ವಧರ್ಮ ಸಹಿಷ್ಣುತೆಯನ್ನು ಜಗತ್ತಿಗೆ ಸಾರಿದ ಕನಕದಾಸರ ಕೀರ್ತನೆಗಳ ವಿಚಾರಗಳು ಎಂದಿಗೂ ಪ್ರಸ್ತುತ ಎಂದರು. ಕನಕದಾಸರ ಕೀರ್ತನೆಗಳು ಮೌಢ್ಯವನ್ನು ಧಿಕ್ಕರಿಸುವುದರೊಂದಿಗೆ ಸ್ತ್ರೀ ಪರವಾದ ಚಿಂತನೆಗಳನ್ನು ಕಟ್ಟಿಕೊಟ್ಟು ಸಮಾಜದ ಒಳಿತಿಗಾಗಿ ಪದವಿ, ಸಿರಿತನವನ್ನು ತ್ಯಾಗ ಮಾಡಿ ಮೊದಲ ಸಾಲಿನಲ್ಲಿ ಕನಕದಾಸರು ಶ್ರೇಷ್ಠರಾದರು ಎಂದರು. ಕಾರ್ಯಕ್ರಮದಲ್ಲಿ ಓದುಗರಾದ ದೀಕ್ಷಿತ ಸಂಪತ್ ಕುಮಾರ್, ಜೀವನ್ ತರುಣ್, ಸುಮಂತ್ ದಿಗಂತ್, ವಿಜಯ್, ಲತೇಶ್, ವಿನೋದ್, ಮಧು, ಸ್ಮಿತಾ, ಸಹಾಯಕಿ ವರ್ಷ ಹಾಗೂ ಶಾಲಾ ಮಕ್ಕಳು ಹಾಜರಿದ್ದರು.

ಶ್ರೀ ಶನೇಶ್ವರ ಸೇವಾ ಸಮಿತಿಯ 25ನೇ ವಾರ್ಷಿಕೋತ್ಸವ



ತಿ.ನರಸೀಪುರದಲ್ಲಿ ಶನೇಶ್ವರಸ್ವಾಮಿ ಸೇವಾ ಸಮಿತಿ ವಾರ್ಷಿಕೋತ್ಸವ ಆಚರಿಸಲಾಯಿತು.

ತಿ.ನರಸೀಪುರ, ನ.8– ಪಟ್ಟಣದ ಶ್ರೀ ಶನೇಶ್ವರ ಸೇವಾ ಸಮಿತಿಯ 25ನೇ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ಶನೇಶ್ವರ ಸ್ವಾಮಿ ಉತ್ಸವವನ್ನು ಶನಿವಾರ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಪಟ್ಟಣದ ಲಿಂಕ್ ರಸ್ತೆಯಲ್ಲಿರುವ ಶ್ರೀ ಶನೇಶ್ವರ ಸ್ವಾಮಿ ದೇವರ ಉತ್ಸವವನ್ನು ಕಳೆದ 24 ವರ್ಷಗಳಿಂದ ಅದ್ದೂರಿಯಾಗಿ ಆಚರಿಸಿಕೊಂಡು ಬಂದಿರುವ ರಸ್ತೆ ಬದಿ ವ್ಯಾಪಾರಿಗಳು, ದಿನಸಿ ಅಂಗಡಿ ಮಾಲೀಕರು, ಚಿನ್ನ ಬೆಳ್ಳಿ ಅಂಗಡಿ ವರ್ತಕರು ಈ ಬಾರಿ 25ನೇ ವರ್ಷದ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ವಿಜೃಂಭಣೆಯಿಂದ ಉತ್ಸವವನ್ನು ಆಚರಿಸಿದರು.

ಬೆಳಿಗ್ಗೆ 8 ಗಂಟೆಗೆ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನ ಮುಂಭಾಗ ಶ್ರೀ ಶನೇಶ್ವರ ಸ್ವಾಮಿ ದೇವರಿಗೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಶ್ರೀ ಶನೇಶ್ವರ ಸ್ವಾಮಿಯ ಫೋಟೋವನ್ನು ಅಲಂಕೃತಗೊಂಡಿದ್ದ ಬೆಳ್ಳಿ ರಥದಲ್ಲಿ ಕೂರಿಸಿ ಕಪಿಲ ನದಿಯಿಂದ ಕಳಸಗಳಿಂದ ನೀರು ತಂದು ಪೂಜೆ ಸಲ್ಲಿಸಲಾಯಿತು. ನಂತರ ಆರಂಭಗೊಂಡ ಮೆರವಣಿಗೆಯು ರಥದ ಬೀದಿಯ ಮೂಲಕ ಸಂಚರಿಸಿ ಭಗವಾನ್ ಚಿತ್ರಮಂದಿರ ವೃತ್ತದಿಂದ ಲಿಂಕ್ ರಸ್ತೆ ಮಾರ್ಗವಾಗಿ ಸ್ವಸ್ಥಾನ ತಲುಪಿತು.

ಮೆರವಣಿಗೆಯುದ್ದಕ್ಕೂ ಭಕ್ತಾದಿಗಳು ಶನಿದೇವರಿಗೆ ಪೂಜೆ ಸಲ್ಲಿಸುವ ಮೂಲಕ ಭಕ್ತಿ ಸಮರ್ಪಿಸಿದರು. ಮೆರವಣಿಗೆಯಲ್ಲಿ ನಂದಿ ಕಂಬ, ಪೂಜಾ ಕುಣಿತ, ವೀರಭದ್ರ ಕುಣಿತ, ಡೊಳ್ಳು ವಾದ್ಯ, ಹಾಗು ಸ್ಥಬ್ಧ ಚಿತ್ರಗಳು ಭಾಗವಹಿಸುವ ಜೊತೆಗೆ ದೊಡ್ಡ ಅರಸಿನಕೆರೆ ಬಸಪ್ಪನ ಮೆರವಣಿಗೆ ನಡೆ ಯಿತು. ಮೆರವಣಿಗೆ ಸ್ವಸ್ಥಾನ ತಲುಪಿದ ನಂತರ ಶ್ರೀ ಶನೇಶ್ವರ ಸ್ವಾಮಿ ದೇವರಿಗೆ ವಿಶೇಷ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು.

ನಾಳೆ ಭಾನುವಾರ ಪ್ರತಿ ವರ್ಷದಂತೆ ಪಟ್ಟಣದ ಟಿಎಪಿಸಿಎಂಎಸ್‌ನ ರೈತ ಭವನದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಭಕ್ತಾಧಿಗಳಿಗೆ ಪ್ರಸಾದ ವಿನಿಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸೇವಾ ಸಮಿತಿ ಮುಖ್ಯಸ್ಥ ಅಂಗಡಿ ಕೆಜಿನಾಗೇಶ್ ತಿಳಿಸಿದ್ದಾರೆ.

ಈ ವೇಳೆ ಶನೇಶ್ವರ ಸೇವಾ ಸಮಿತಿಯ ಸುಭಾಷ್ ಚೌಧರಿ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಜೋಗಿ ನಾಗರಾಜು, ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ. ಮರಯ್ಯ, ಹೂ ಕೃಷ್ಣಪ್ಪ, ಹಣ್ಣಿನ ಅಂಗಡಿ ಗೋವಿಂದ, ನಾಗರಾಜು, ಪ್ರಕಾಶ್ ತಿರುಮಕೂಡಲು ಲಕ್ಷ್ಮಣ್ ಸೇರಿದಂತೆ ರಸ್ತೆ ಬದಿ ವ್ಯಾಪಾರಿಗಳು ಹಾಜರಿದ್ದರು.

ಹುಣಸೂರು ಟಿಎಪಿಸಿಎಂಎಸ್ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷರಾಗಿ ಪ್ರೇಮ್‌ಕುಮಾರ್, ಉಪಾಧ್ಯಕ್ಷರಾಗಿ ಹೊನ್ನಪ್ಪ ರಾವ್ ಆಯ್ಕೆ



ಟಿಎಪಿಸಿಎಂಎಸ್‌ಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಹುಣಸೂರು: ಹುಣಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಪಕ್ಷದ ಹಬ್ಬನಕುಪ್ಪೆ ಪ್ರೇಮ್ ಕುಮಾರ್, ಉಪಾಧ್ಯಕ್ಷರಾಗಿ ಗಾವಡಗೆರೆಯ ಹೊನ್ನಪ್ಪ ರಾವ್ ಕಾಳಿಂಗೆ ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ.

ಕಳೆದ ಅ.26 ರಂದು ನಡೆದ ನಿರ್ದೇಶಕರ ಚುನಾವಣೆಯಲ್ಲಿ 'ಎ' ವರ್ಗದಿಂದ ಜೆಡಿಎಸ್ ಬೆಂಬಲಿತ ನಾಲ್ವರು ನಿರ್ದೇಶಕರು ಅವಿರೋಧವಾಗಿ ಬಿ ವರ್ಗದಿಂದ ಎಂಟು ಜನ ನಿರ್ದೇಶಕರು ಅತ್ಯಧಿಕ ಮತಗಳಿಂದ ಜಯಗಳಿಸಿ ಎಲ್ಲ ಹನ್ನೆರಡು ಸ್ಥಾನಗಳಲ್ಲಿಯೂ ಜೆಡಿಎಸ್ ಬೆಂಬಲಿತ ನಿರ್ದೇಶಕರುಗಳು ಆಯ್ಕೆಯಾಗಿದ್ದರು.

ಇಂದು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹಬ್ಬನಕುಪ್ಪೆ ಪ್ರೇಮ್ ಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಗಾವಡಗೆರೆಯ ಹೊನ್ನಪ್ಪರಾವ್ ಕಾಳಿಂಗೆ ಹೊರತುಪಡಿಸಿ ಮತ್ತ್ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತಹಸಿಲ್ದಾರ್ ಮಂಜುನಾಥ್ ಇವರಿಬ್ಬರ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಆಯ್ಕೆ ನಂತರ ನೂತನ ಅಧ್ಯಕ್ಷ ಪ್ರೇಮ್ ಕುಮಾರ್ ಮಾತನಾಡಿ ನಾನು ಎರಡು ಬಾರಿಯಿಂದ ನಿರ್ದೇಶಕನಾಗಿದ್ದು. ಈ ಬಾರಿ ನನಗೆ ಅಧ್ಯಕ್ಷ ಸ್ಥಾನ ಸಿಕ್ಕಿದೆ. ನಿರ್ದೇಶಕರ ಸಹಕಾರದೊಂದಿಗೆ ಹಾಗೂ ಶಾಸಕರ ಸಾರಥ್ಯದಲ್ಲಿ ಸಹಕಾರ ಸಂಘದಿಂದ ಸಹಕಾರ ಭವನವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ನಮ್ಮ ಈ ಅವಧಿಯಲ್ಲಿ ಅದನ್ನು ನಿರ್ಮಿಸುತ್ತೇವೆ. ಅಲ್ಲದೆ ಈಗಾಗಲೇ ನಮ್ಮ ಸಂಘದಿಂದ ಒಂದು ಕೋಟಿ ವೆಚ್ಚದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಬಾಡಿಗೆಗೆ ನೀಡಲಾಗಿದೆ ಎಂದರು.

ರೈತರಿಗೆ ಅನುಕೂಲವಾಗುವ ರಸಗೊಬ್ಬರ, ಬಿತ್ತನೆ ಬೀಜ, ಕೃಷಿ ಉಪಕರಣಗಳನ್ನು ನೀಡುವ ಮತ್ತು ಮಾರಾಟ ಮಾಡುವ ಚಟುವಟಿಕೆ ಮಾಡಬಹುದಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಮಾಜಿ ಅಧ್ಯಕ್ಷ ಬಸವಲಿಂಗಯ್ಯ ಮಾತನಾಡಿ ನಾವು ಈ ಹಿಂದೆ ರೈತರಿಗೆ ಅನುಕೂಲವಾಗಲೆಂದು ರಸಗೊಬ್ಬರ ಮಾರಾಟ ಮಾಡಲು ಪ್ರಾರಂಭಿಸಿದೆವು. ಖಾಸಗಿಯವರೊಂದಿಗೆ ಪೈಪೋಟಿ ಮಾಡಲು ಸಾಧ್ಯವಾಗದೆ ಲಕ್ಷಗಟ್ಟಲೆ ನಷ್ಟವಾಯಿತು. ನಾವು ಸರ್ಕಾರ ನಿಗದಿ ಮಾಡಿರುವ ಬೆಲೆಯಲ್ಲೇ ಮಾರಾಟ ಮಾಡಬೇಕು. ಖಾಸಗಿಯವರು ಕಡಿಮೆಗೆ ನೀಡುತ್ತಾರೆ. ಈ ಕಾರಣದಿಂದ ನಾವು ಮಾರಾಟ ಮಾಡಲು ಸಾಧ್ಯವಾಗದೆ ನಷ್ಟ ಅನುಭವಿಸಬೇಕಾಯ್ತು ಎಂದರು. ಮುಂದಿನ ದಿನಗಳಲ್ಲಿ ರೈತ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಘದ ಅಭಿವೃದ್ಧಿಗೆ ಶಾಸಕರ ಮಾರ್ಗದರ್ಶನದಲ್ಲಿ ಶ್ರಮಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಗೋವಿಂದೇಗೌಡ, ಅಶ್ವಾಳ್ ಕೆಂಪೇಗೌಡ, ಬಸವಲಿಂಗಯ್ಯ, ಹೆಚ್.ಆರ್.ಮಹೇಶ್, ಹೆಚ್.ಟಿ.ಬಾಬು, ರೇವಣ್ಣ ಸೋಮಶೇಖರ್, ಜಿ.ಎನ್.ವೆಂಕಟೇಶ್, ಶ್ರೀಮತಿ ಇಂಧುಕಲಾ, ಶ್ರೀಮತಿ ಮಂಗಳಗೌರಿ, ತಾಹಸೀಲ್ದಾರ್ ಮಂಜುನಾಥ್ ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ನೇಮಕ



ನಂಜನಗೂಡು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಚಾಲಕರಾದ ಕೆ. ರಾಜು, ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್, ರಾಜ್ಯ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯರವರ ಶಿಫಾರಸ್ಸಿನ ಮೇರೆಗೆ ನಂಜನಗೂಡಿನ ಪಿ.ರವಿಪ್ರಕಾಶ್ ಅವರನ್ನು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಸಂಚಾಲಕರನ್ನಾಗಿ ನೇಮಕಾತಿಗೊಳಿಸಿ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಪ್ರಕಟಣೆ ತಿಳಿಸಿದೆ.

ದೇವಸ್ಥಾನದಲ್ಲಿ ಹಣ, ಸಿಸಿಟಿವಿ ಕಳವು



ಹುಣಸೂರು: ತಾಲೂಕಿನ ಕೊಯಮತ್ತೂರು ಕಾಲೋನಿಯ ಹೊರವಲಯದ ಜಮೀನಿನ ಬಳಿಯಿರುವ ಶ್ರೀ ಅರಕೇಶ್ವರ ದೇವಾಲಯದ ಬೀಗ ಮುರಿದು ಸಾವಿರಾರು ರೂ.ಗಳ ಕಾಣಿಕೆ ಹುಂಡಿ ಹಣ, ಸಿ.ಸಿ.ಕ್ಯಾಮರಾಗಳು ಮತ್ತು ಬೆಳ್ಳಿಯ ಪೂಜಾ ಸಾಮಗ್ರಿಗಳನ್ನು ಕದ್ದೊಯ್ದಿದ್ದಾರೆ.

ಈ ದೇವಾಲಯದಲ್ಲಿ ಇದು ಸೇರಿದಂತೆ ನಾಲ್ಕನೇಯ ಬಾರಿ ಕಳ್ಳತನ ನಡೆಯುತ್ತಿದೆ. ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆಯಂದು ದೇವಸ್ಥಾನದಲ್ಲಿ ರಾತ್ರಿ ವಿಶೇಷ ಪೂಜೆ ನಡೆಯಲಿದೆ. ಎಂದಿನಂತೆ ಬುಧವಾರ ರಾತ್ರಿ 10 ಗಂಟೆಯವರೆಗೆ ದೇವಸ್ಥಾನದಲ್ಲಿ ಹುಣ್ಣಿಮೆ ಆಚರಣೆ ಮಾಡಿ ಅರ್ಚಕರು ದೇವಸ್ಥಾನಕ್ಕೆ ಬೀಗ ಹಾಕಿ ಗ್ರಾಮಕ್ಕೆ ತೆರಳಿದ್ದಾರೆ.

ದೇವಾಲಯದ ಜೀರ್ಣೋದ್ಧಾರ ಸಮಿತಿ ಸದಸ್ಯ ಗಣೇಶ ಅವರ ಗಮನಕ್ಕೆ ಈ ಕಳ್ಳತನ ಪ್ರಕರಣ ಬರುತ್ತಿದ್ದಂತೆ ಕೂಡಲೇ ದೇವಸ್ಥಾನಕ್ಕೆ ತೆರಳಿ ಪರಿಶೀಲಿಸಿದಾಗ ದೇವಸ್ಥಾನದ ಹುಂಡಿ, ಬೆಳ್ಳಿ ಪೂಜಾ ಸಾಮಗ್ರಿಗಳು ಮತ್ತು ಸಿಸಿ ಕ್ಯಾಮರಾ ಕಳುವಾಗಿರುವ ವಿಚಾರ ತಿಳಿದು ಪೊಲೀಸರಿಗೆ ಮಾಹಿತಿ ನೀಡಿದರು.

ಗ್ರಾಮಾಂತರ ಠಾಣೆ ಪಿ.ಎಸ್.ಐ ಶ್ರೀನಿವಾಸಲು ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮಸೀದಿ ನಿರ್ಮಾಣಕ್ಕೆ ದೇಣಿಗೆ ಕೊಡುಗೆ



ಮೈಸೂರು ತಾಲೂಕು ಜಯಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಮುಸ್ಲಿಂ ಸಮಾಜದ ಜಾಮಿಯಾ ಮಸೀದಿ ಕಟ್ಟಡ ನಿರ್ಮಾಣಕ್ಕೆ ಜಯಪುರ ಗ್ರಾಮದ ಹಿಂದೂ ಸಮಾಜದ ಭಾಂದವರು ಜಾಮಿಯಾ ಮಸೀದಿ ಅಧ್ಯಕ್ಷರಾದ ಮಹಮ್ಮದ್ ಅಲಿ (ಬಾಬಣ್ಣ) ಹಾಗೂ ಕಾರ್ಯದರ್ಶಿ ಅಬ್ದುಲ್ ಮುತಾಲೀಫ್ ರವರಿಗೆ 50 ಸಾವಿರ ರೂಪಾಯಿ ಗಳ ದೇಣಿಗೆಯನ್ನು ಶನಿವಾರ ನೀಡಿದರು. ಹಿಂದೂ ಸಮಾಜದ ಮುಖಂಡರಾದ ಜವರ ನಾಯಕ, ಮಲ್ಲಪ್ಪ, ಮೂಗನಾಯಕ, ಡೇರಿ ಬಸವರಾಜು, ಕೆಂಪನಾಯಕ, ನಾಗರಾಜು, ರೇಣುಕಾ, ಜಾಮಿಯಾ ಮಸೀದಿ ಗುರುಗಳಾದ ಮಸಿವುಲ್ಲ, ಜಿಯಾವುಲ್ಲ ಹಾಜರಿದ್ದರು.

ಬೈಕಿಗೆ ಕಾರು ಡಿಕ್ಕಿ: ಮಹಿಳೆ ಸ್ಥಳದಲ್ಲಿ ಸಾವು



ಹುಣಸೂರು, ನ.8– ತಾಲೂಕಿನ ರಾಷ್ಟ್ರೀಯ ಹೆದ್ದಾರಿ 275ರ ಮಲ್ಲಿನಾಥಪುರ ಬಳಿ ಮುಂದೆ ಹೋಗುತ್ತಿದ್ದ ಬೈಕಿಗೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಹಿಂಬದಿಯಲ್ಲಿ ಕುಳಿತ್ತಿದ್ದ ಮಹಿಳೆ ಸ್ಥಳದಲ್ಲೆ ಮೃತಪಟ್ಟಿದ್ದು, ಬೈಕ್ ಸವಾರ ಸಣ್ಣ ಪುಟ್ಟ ಗಾಯಗಳಿಂದ ಪಾರಾಗಿರುವ ಘಟನೆ ನಿನ್ನೆ ಮದ್ಯಾಹ್ನ ಸಂಬವಿಸಿದೆ.

ತಾಲೂಕಿನ ದೊಡ್ಡೇಗೌಡನಕೊಪ್ಪಲು ಗ್ರಾಮದ ವಾಸಿ ಹಾಗೂ ಕಾಂಗ್ರೆಸ್ ಮುಖಂಡ ರವಿಗುಡ್ಡಪ್ಪ ಅವರ ಪತ್ನಿ ಸರೋಜಮ್ಮ (55) ಅಪಘಾತದಲ್ಲಿ ಮೃತಪಟ್ಟ ಮಹಿಳೆ.


ಮೃತ ಸರೋಜಮ್ಮ ಅವರು ತಮ್ಮ ಅಣ್ಣನ ಮಗ ಕುಮಾರ್ ಅವರ ಬೈಕ್ (ಕೆ.ಎ–45 ಇಸಿ–0512)ನಲ್ಲಿ ಸಂಬಂಧಿಕರ ಮನೆಗೆ ನಾಮಕರಣಕ್ಕೆ ಎಂದು ತೆರಳುವಾಗ ಹಿಂದಿನಿಂದ ಬಂದ ಕಾರು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದ ಸರೋಜಮ್ಮ ತಲೆಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದು ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಬೈಕ್ ಸವಾರ ಕುಮಾರ್ ಸಣ್ಣ ಪುಟ್ಟ ಗಾಯಗಳಿಂದ ಪಾರಾಗಿದ್ದಾರೆ.

ಈ ಸಂಬಂದ ಬಿಳಿಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಮಾಜದಲ್ಲಿ ಅಸಮಾನತೆ ತೊಲಗಿಸಲು ಕೈಜೋಡಿಸೋಣ

ಹೆಚ್.ಡಿ.ಕೋಟೆ ಕನಕದಾಸರ ಜಯಂತಿಯಲ್ಲಿ ಶಾಸಕ ಅನಿಲ್ ಕರೆ

ಹೆಚ್.ಡಿ.ಕೋಟೆ: ಕನಕದಾಸರ ಆದರ್ಶವನ್ನು ನಾವೆಲ್ಲರೂ ಮೈಗೂಡಿಸಿಕೊಂಡು ಸಮಾಜದಲ್ಲಿನ ಅಸಮಾನತೆ ಹೋಗಲಾಡಿಸಲು ಕೈಜೋಡಿಸೋಣ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.



ಹೆಚ್.ಡಿ.ಕೋಟೆಯಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಲಾಗಿದ್ದ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದ ಅಂಕುಡೊಂಕು ಸರಿಪಡಿಸಿದವರು ಕನಕದಾಸರು. ಶ್ರೀಕೃಷ್ಣ ಕನಕದಾಸರ ಭಕ್ತಿಗೆ ಮೆಚ್ಚಿ ಉಡುಪಿಯಲ್ಲಿ ಕನಕನ ಕಿಂಡಿ ಮೂಲಕ ದರ್ಶನ ನೀಡಿದ್ದನ್ನು ನಾವು ಸ್ಮರಿಸಬಹುದು.

ನೂರಕ್ಕೆ ನೂರರಷ್ಟು ಈ ಸಮುದಾಯ ನನಗೆ ಶಾಸಕನಾಗಿ ಆಯ್ಕೆ ಆಗಲು ಸಹಕಾರ ನೀಡಿದೆ ತಾಲೂಕಿನಲ್ಲಿ ಸಮುದಾಯದ ಮುಖಂಡರಲ್ಲಿ ಸ್ವಲ್ಪ ವ್ಯತ್ಯಾಸ ಆಗಿದ್ದು ಅದನ್ನು ಸರಿಪಡಿಸಿಕೊಂಡು ಸಮಾಜ ಕಟ್ಟುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಮಹನೀಯರ ಜಯಂತಿ ಕಾರ್ಯಕ್ರಮವನ್ನು ಅಂಬೇಡ್ಕರ್ ಭವನದಲ್ಲಿ ಮಾಡಲು ತೀರ್ಮಾನಿಸಲಾಗಿದೆ. ತಾಲೂಕು ಆಡಳಿತದ ವತಿಯಿಂದ ಫ್ಲೆಕ್ಸ್ ಮಾಡುವಾಗ ಮಹನೀಯರ ಭಾವಚಿತ್ರವನ್ನು ಮಾತ್ರ ಹಾಕಿ ಎಂದು ಕಿವಿ ಮಾತು ಹೇಳಿದರು.

ಸಾಹಿತಿ ಹಾಗೂ ಶಿಕ್ಷಕ ಕಿರಣ್ ಶಿಡ್ಲೇಹಳ್ಳಿ ಅವರು ಮಾತನಾಡಿ ಆ ಸಮುದಾಯಗಳ ತುಡಿತಗಳಿಗೆ ಉತ್ತರ ಕಂಡು ಹಿಡಿಯಲು ಜಯಂತಿ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ದಾಸ ಸಾಹಿತ್ಯ ಶ್ರೇಷ್ಠ ಭಕ್ತರು ಕನಕದಾಸರು. ಸಮುದಾಯದ ಅಸ್ಮಿತೆಗೆ ಜಯಂತಿ ಬೇಕು. ಭೋಗ ಜೀವನದ ಆಚೆ ಬದುಕು ಕಂಡುಕೊಂಡವರು ಕನಕದಾಸರು. ಕನಕದಾಸರ ವಿಭೂತಿ ಪುರುಷನಾಗಿ ಮಾರ್ಪಾಡು ಆದವರು. ವ್ಯಾಸರಾಯರ ಶ್ರೇಷ್ಠ ಶಿಷ್ಯ ಕನಕದಾಸರು. ತಳಸಮುದಾಯದ ಏಕೈಕ ಶಿಷ್ಯ ಕನಕದಾಸರು ವ್ಯಾಸರಾಯರ ಶ್ರೇಷ್ಠ ಶಿಷ್ಯರಾಗಿ ಅವರಲ್ಲಿ ಶಿಕ್ಷಣ ಪಡೆದವರು. ಕೀರ್ತನೆಗಳ ಜೊತೆ ಜನಪದ ಕವಿಯಾಗಿ ಕಾವ್ಯವನ್ನು ಕಟ್ಟಿರುವುದನ್ನು ನೋಡಬಹುದು ಎಂದರು.

ಇದೇ ಸಂದರ್ಭದಲ್ಲಿ ತಹಶಿಲ್ದಾರ್ ಶ್ರೀನಿವಾಸ್, ಇಓ ಧರಣೇಶ್, ಜಿ.ಆರ್. ಮಹೇಶ್, ಶಶಿಕಲಾ, ನೇತ್ರಾವತಿ, ಎಂ.ಬಿ. ಆನಂದ್, ಮಾಲೇಗೌಡ, ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ರಾಜ್ಯ ಅಧ್ಯಕ್ಷ ಬೈಪಾಸ್ ಮಂಜು, ಕುಮಾರೇಗೌಡ, ಶಿಂಡೆನಹಳ್ಳಿ ಗಿರೀಶ್, ಬಸಪ್ಪ, ಚಿಕ್ಕಣ್ಣ, ಆಟೋರಮೇಶ್, ಪುಟ್ಟೆಗೌಡ, ಕಾರ್ತಿಕ್, ರಮೇಶ್, ಯತೀಂದ್ರಸಿದ್ದರಾಮಯ್ಯ ಅಭಿಮಾನಿ ಬಳಗ ರಾಜ್ಯ ಅಧ್ಯಕ್ಷ, ಬೈಪಾಸ್ ಮಂಜು, ಶಿರಮಳ್ಳಿ ಚಿಕ್ಕಣ್ಣ, ಶಿಂಡೆನಹಳ್ಳಿ ಗೀರಿಶ್, ಬಸಪ್ಪ, ಚಿಕ್ಕಣ್ಣ, ಆಟೋ ರಮೇಶ್, ಪುಟ್ಟೇಗೌಡ, ಕಾರ್ತಿಕ್, ರಮೇಶ್, ಶಶಿಕಲಾ, ನೇತ್ರಾವತಿ, ಬಸಪ್ಪ, ಜಗನ್ನಾಥ್, ಕರಿಯಪ್ಪಗೌಡ, ಮಂಜುನಾಥ್, ತಮ್ಮಣ್ಣಿ, ಮುದ್ದರಾಮೇ ಗೌಡ, ಮಾದೇವ, ಪಾಪಣ್ಣ, ಶಿವರಾಜು, ರಾಜಣ್ಣ, ಬೈರೇಗೌಡ, ಕೃಷ್ಣೆಗೌಡ, ಶಿವಶಂಕರೆಗೌಡ, ನಾಗರಾಜು, ಸ್ವಾಮಿಗೌಡ, ನಾಗೇಗೌಡ, ವಜ್ರೇಗೌಡ, ಬೀರೇಗೌಡ, ಕುಮಾರ ಸೇರಿದಂತೆ ಮತ್ತೀರರಿದ್ದರು.

ಸುನಂದಮ್ಮ ನಿಧನ




ಹುಣಸೂರು, ನ.8– ನಗರ ಕಲ್ಕುಣಿಕೆ ವಾಸಿ ಕಾಂಗ್ರೆಸ್ ಪಕ್ಷದ ಮಾಜಿ ಅದ್ಯಕ್ಷರು ಹಾಗೂ ತಾಲೂಕು ಕುರುಬ ಸಮಾಜದ ಮಾಜಿ ಅಧ್ಯಕ್ಷ ಕಲ್ಕುಣಿಕೆ ರಮೇಶ್ ಅವರ ಧರ್ಮಪತ್ನಿ ಸುನಂದಮ್ಮ(58) ಇಂದು ಮುಂಜಾನೆ ನಿಧನರಾದರು. ಮೃತರು ಪತಿ, ಮೂವರು ಪುತ್ರಿಯರು ಹಾಗು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಇಂದು ಸಂಜೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ
ಭಾನುವಾರ 9 ನವೆಂಬರ್ 2025

ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಹೆಚ್ಚುವರಿ 200 ಹಾಸಿಗೆ ವಿಸ್ತೃತ ಕಟ್ಟಡ ನಿರ್ಮಾಣ

● ಸಂಸ್ಥೆ ನಿರ್ದೇಶಕ ಡಾ.ಬಿ.ದಿನೇಶ್ ಮಾಹಿತಿ ● ಡಾ.ಸಿ.ಎನ್.ಮಂಜುನಾಥರ ಸೇವೆಗೆ ಶ್ಲಾಘನೆ

ಮೈಸೂರು, ನ.8– ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಆವರಣದಲ್ಲಿ 200 ಹಾಸಿಗೆ ಸಾಮರ್ಥ್ಯದ ವಿಸ್ತೃತ ಕಟ್ಟಡ ನಿರ್ಮಿಸುವ ಚಿಂತನೆ ಇದೆ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ತಿಳಿಸಿದರು.



ಮೈಸೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯ 15ನೇ ವಾರ್ಷಿಕೋತ್ಸವ 'ಹೃದಯ ತರಂಗ' ಸಮಾರಂಭದಲ್ಲಿ ಜಯದೇವ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ಅವರನ್ನು ಅಭಿನಂದಿಸಲಾಯಿತು.

ಮೈಸೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ಘಟಕದ 15ನೇ ವಾರ್ಷಿಕೋತ್ಸವ 'ಹೃದಯ ತರಂಗ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ ಹೆಚ್ಚಿಸುವ ಮೂಲಕ ಸೇವೆಯನ್ನು ಮತ್ತಷ್ಟು ವಿಸ್ತರಗೊಳಿಸುವುದಾಗಿ ಹೇಳಿದರು.

ಜಯದೇವ ಹೃದ್ರೋಗ ಸಂಸ್ಥೆಯು ಅತ್ಯುತ್ತಮ ಸೇವೆಯ ಮೂಲಕ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ. ನಿಕಟಪೂರ್ವ ನಿರ್ದೇಶಕರಾದ ಡಾ.ಸಿ.ಎನ್.ಮಂಜುನಾಥ್ ಅವಿರತ ಪರಿಶ್ರಮದೊಂದಿಗೆ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದಾರೆ. ಮೈಸೂರು ಘಟಕದ ಹಿರಿಯರಾದ ಡಾ.ಸದಾನಂದ ಅವರೂ ಉತ್ತಮವಾಗಿ ನಿರ್ವಹಣೆ ಮಾಡುತ್ತಿದ್ದಾರೆ. ತಪಾಸಣೆಗೆ, ಚಿಕಿತ್ಸೆಗೆ ಹೆಚ್ಚು ಜನ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸೇವೆಯನ್ನು ಮತ್ತಷ್ಟು ವಿಸ್ತೃತಗೊಳಿಸಬೇಕಿದೆ. ಈ ನಿಟ್ಟಿನಲ್ಲಿ 200 ಹಾಸಿಗೆ ಸಾಮರ್ಥ್ಯದ ಹೆಚ್ಚುವರಿ ಕಟ್ಟಡ ನಿರ್ಮಿಸುವ ಚಿಂತನೆ ಇದೆ ಎಂದರು.

ದೇವರ ಕೃಪೆಯಿಂದ ನಾನು ಪ್ರತಿಷ್ಠಿತ ಜಯದೇವ ಸಂಸ್ಥೆಯ ನಿರ್ದೇಶಕನಾಗಿದ್ದೇನೆ. ಸಂಸ್ಥೆಯಲ್ಲಿರುವ 3,500ಕ್ಕೂ ಹೆಚ್ಚು ಸಿಬ್ಬಂದಿಯ ಹಿತ ಕಾಯಲು ನಾನು ಬದ್ಧನಾಗಿದ್ದೇನೆ. ನಮ್ಮ ಸಂಸ್ಥೆ ಒಂದು ಕುಟುಂಬ. ಇಲ್ಲಿ ಯಾವುದೇ ಜಾತಿ–ಧರ್ಮದ ಭೇದವಿಲ್ಲ. ಎಲ್ಲರ ಉದ್ಯೋಗ ಖಾಯಂ ಆಗಬೇಕೆಂಬುದು ನನ್ನ ಬಹು ದೊಡ್ಡ ಆಶಯ. ಇದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ವಿವಿಧೆಡೆ ಘಟಕ: ಆಸ್ಪತ್ರೆಯ ಸಿಬ್ಬಂದಿ ಹಾಗೂ ಅವರ ಕುಟುಂಬಕ್ಕೆ 5 ಲಕ್ಷದ ವಿಮೆ ಮಾಡಿಸಲು ನಿರ್ಧರಿಸಿದ್ದೇನೆ. ಬೆಂಗಳೂರಿನ 5 ಮಹಾನಗರ ವ್ಯಾಪ್ತಿ ಹಾಗೂ 3 ಜಿಲ್ಲೆಗೊಂದರಂತೆ ಜಯದೇವ ಆಸ್ಪತ್ರೆ ಘಟಕ ಆರಂಭಿಸಲು ಪ್ರಯತ್ನ ಮಾಡುತ್ತೇನೆ. ಪ್ರತಿಯೊಬ್ಬರ ಉತ್ತಮ ಸೇವೆಯ ಪರಿಣಾಮ ಸಂಸ್ಥೆಗೆ ಒಳ್ಳೆಯ ಹೆಸರಿದೆ. ಈ ಆಸ್ಪತ್ರೆ ಸಾವಿರಾರು ಸಿಬ್ಬಂದಿಯ ಜೀವನ ರೂಪಿಸಿದೆ. ಯಾವುದೇ ಕಾರಣಕ್ಕೂ ಆಸ್ಪತ್ರೆಗೆ ಕಪ್ಪುಚುಕ್ಕೆ ಬರದಂತೆ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಮೈಸೂರು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ್ ಮಾತನಾಡಿ ಈ ಆಸ್ಪತ್ರೆಯಲ್ಲಿ 16 ಲಕ್ಷಕ್ಕೂ ಹೆಚ್ಚು ಜನರಿಗೆ ಚಿಕಿತ್ಸೆ ನೀಡಿದ್ದು, 40 ಸಾವಿರಕ್ಕೂ ಹೆಚ್ಚು ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. 75 ಸಾವಿರ ಜನರಿಗೆ ಕ್ಯಾಥ್‌ಲ್ಯಾಬ್ ಚಿಕಿತ್ಸೆ ನೀಡಿದ್ದು, 4 ಸಾವಿರ ಶಸ್ತ್ರಚಿಕಿತ್ಸೆ ಮಾಡಲಾಗಿದೆ. 73 ಸಾವಿರಕ್ಕೂ ಹೆಚ್ಚು ಜನರಿಗೆ ಎಕೋ ಹಾಗೂ 10 ಲಕ್ಷ ಮಂದಿಗೆ ಇ.ಸಿ.ಜಿ. ಮಾಡಿದ್ದೇವೆ. ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಗೆ ಸಂಜೀವಿನಿಯಾಗಿರುವ ಈ ಆಸ್ಪತ್ರೆ ನಿರ್ಮಾಣಕ್ಕೆ ಡಾ.ಸಿ.ಎನ್.ಮಂಜುನಾಥ್ ಅವರ ಕೊಡುಗೆ ಅಪಾರವಾಗಿದೆ. ಇದೀಗ ಮೈಸೂರಿನವರೇ ನಿರ್ದೇಶಕರಾಗಿರುವುದು ಹೆಮ್ಮೆಯ ವಿಚಾರ ಎಂದರು.

ಸಮಾರಂಭದಲ್ಲಿ ಡಾ.ಸಂತೋಷ್, ಡಾ.ರಜಿತ್, ಡಾ.ವೀಣಾ ನಂಜಪ್ಪ, ಡಾ.ಹೇಮಾ, ಡಾ.ಕಲಾಭಾರತಿ, ಡಾ.ದೇವರಾಜ್, ಡಾ.ಜಯಪ್ರಕಾಶ್, ಡಾ.ವಿಶ್ವನಾಥ್, ಡಾ.ಮಂಜುನಾಥ್, ಡಾ.ಶ್ರೀನಿಧಿ ಹೆಗ್ಗಡೆ, ನರ್ಸಿಂಗ್ ಅಧೀಕ್ಷರಾದ ಯೋಗಲಕ್ಷ್ಮಿ, ಹರೀಶ್ ಕುಮಾರ್, ಪಿಆರ್‌ಓ ವಾಣಿ ಮೋಹನ್, ಚಂಪಕಮಾಲ ಮತ್ತಿತರರು ಉಪಸ್ಥಿತರಿದ್ದರು.

ಮನೆಯ ಗ್ರಂಥಾಲಯ ಉದ್ಘಾಟಿಸಿ, ಕಾಶಿಗೌ ರಚನೆಯ ಮೂರು ಕೃತಿ ಬಿಡುಗಡೆ ಮಾಡಿದ ಜಿಟಿಡಿ


ಕಾಶಿಗೌ ಅವರ ಮೂರು ಪುಸ್ತಕಗಳನ್ನು ಶಾಸಕ ಜಿ.ಟಿ.ದೇವೇಗೌಡರು ಬಿಡುಗಡೆಗೊಳಿಸಿದರು.

ಮೈಸೂರು, ನ.8– ಮನೆಯಲ್ಲೇ ಗ್ರಂಥಾಲಯ ನಿರ್ಮಿಸಿಕೊಂಡರೆ ಜ್ಞಾನಾರ್ಜನೆ ಜೊತೆಗೆ ಉತ್ತಮ ಜೀವನ ಶೈಲಿಗೆ ನೆರವಾಗಲಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ತಾಲೂಕಿನ ಮಾದಗಳ್ಳಿ–ಗಳಗರ ಹುಂಡಿಯ ವಿಶ್ರಾಂತ ಪ್ರಾಂಶುಪಾಲ ಕಾಡ್ನೂರು ಶಿವೇಗೌಡ(ಕಾಶಿಗೌ)ರ ಮನೆಯಲ್ಲಿ ನಿರ್ಮಿಸಿರುವ ಗ್ರಂಥಾಲಯ ಉದ್ಘಾಟಿಸಿ, ಕಾಶಿಗೌ ಅವರ 'ಅನುಭವದ ಅದಿರು', 'ಮನದ ಮೆರವಣಿಗೆ', ಹಾಗೂ 'ವಿವೇಕ ದೀಪ' ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ತಂತ್ರಜ್ಞಾನದ ಯುಗದಲ್ಲಿ ಪುಸ್ತಕಗಳಿಂದ ವಿಮುಖರಾಗುತ್ತಿರುವ ಸಂದರ್ಭದಲ್ಲಿ ಕಾಶಿಗೌ ಅವರು ಮನೆಯಲ್ಲೇ ಗ್ರಂಥಾಲಯ ನಿರ್ಮಿಸಿರುವುದು ಮಾದರಿಯಾಗಿದೆ. ಹೀಗೆ ಎಲ್ಲಾ ಮನೆಗಳಲ್ಲೂ ಗ್ರಂಥಾಲಯ ಸೃಷ್ಟಿಯಾದರೆ ಉತ್ತಮ ಬದುಕಿಗೆ ಸಹಕಾರಿಯಾಗುತ್ತದೆ. ಸಾಹಿತ್ಯದ ಮೂಲಕ ಸಮಾಜದಲ್ಲಿ ಅರಿವು ಮೂಡಿಸುವ ಪ್ರಯತ್ನದಲ್ಲಿರುವ ಕಾಶಿಗೌ ಅವರ ಹೊಸ ಕೃತಿಗಳೂ ಯುವ ಪೀಳಿಗೆಗೆ ವಿವೇಕದ ದಾರಿದೀಪವಾಗಲಿ ಎಂದು ಆಶಿಸಿದರು.

ಈ ವೇಳೆ ಕಾಶಿಗೌ, ಇವರ ಪತ್ನಿ ರೇಣುಕಾ, ಅತ್ತಿಗೆ ಲೀಲಾ ಪುಟ್ಟಸ್ವಾಮಿಗೌಡ, ಶಾಸಕರ ಆಪ್ತ ಸಹಾಯಕ ಹನುಮೇಶ್, ಸಮಾಜ ಸೇವಕ ಜಯಂತ್, ಸಂಗರಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಮುರಳೀಧರ, ಖಜಾನೆ ಇಲಾಖೆ ನಿವೃತ್ತ ಅಧಿಕಾರಿ ಗಂಗಾಧರ, ಕಡವಿನಹೊಸಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕಾಡ್ನೂರು ನಾಗರಾಜು, ಉಪನ್ಯಾಸಕ ರವಿಶಂಕರ್, ಸ್ಮಿತಾ ರಂಜಿತ್‌ಗೌಡ, ಪ್ರಮೋದ್ ಕುಮಾರ್ ಹಾಗೂ ಇಂಜಿನಿಯರ್ ಅವಿನಾಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ತ್ರೈಮಾಸಿಕ ಕೆಡಿಪಿ ಸಭೆ

ಮೈಸೂರು, ನ.8– ಮೈಸೂರು ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) 2025–26ನೇ ಸಾಲಿನ ತ್ರೈಮಾಸಿಕ ಕೆಡಿಪಿ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನ.10 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ನಂದಿನಿ ತುಪ್ಪದ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಮೈಸೂರು,ನ.8(ಜಿಎ)–ಕೆಎಂಎಫ್‌ನಿಂದ ನಂದಿನಿ ತುಪ್ಪದ ದರ ಏರಿಕೆ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಹಾಗೂ ಹಾಲಿನ ದರವನ್ನು ಏರಿಕೆ ಮಾಡಬಾರದೆಂದು ಆಗ್ರಹಿಸಿ, ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರಿನ ಹಳೇ ಜಿಲ್ಲಾಧಿಕಾರಿಗಳ ಮುಂಭಾಗ ಪ್ರತಿಭಟನೆ ನಡೆಸಲಾಯಿತು.


ತುಪ್ಪದ ದರ ಏರಿಕೆ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರಿನ ಹಳೇ ಜಿಲ್ಲಾಧಿಕಾರಿಗಳ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಜಿಎಸ್‌ಟಿ ಇಳಿಕೆ ಖುಷಿಯಲ್ಲಿದ್ದ ರಾಜ್ಯದ ಜನತೆಗೆ ಸರ್ಕಾರ ನಂದಿನಿ ತುಪ್ಪದ ದರವನ್ನು ಏಕಾಏಕಿ 90 ರೂ. ಏರಿಸಿ ಶಾಕ್ ನೀಡಿದೆ. ಇತ್ತೀಚಿಗಷ್ಟೇ ಕೇಂದ್ರ ಸರ್ಕಾರ ಜಿಎಸ್‌ಟಿ ದರ ಇಳಿಸಿದ್ದರಿಂದ ನಂದಿನಿ ತುಪ್ಪದ ಬೆಲೆ 650 ರೂ. ನಿಂದ 610 ರೂ. ಗೆ ಇಳಿದಿತ್ತು. ಈಗ ರಾಜ್ಯ ಸರ್ಕಾರ 90 ರೂ ಏಕಾಏಕಿ ಹೆಚ್ಚಿಸಿ ರೂ.700 ಆಗಿರುವುದು ಜನರಿಗೆ ಬಹು ದೊಡ್ಡ ಹೊರೆಯಾಗಿದೆ. ಇದರಿಂದ ನಂದಿನಿ ತುಪ್ಪಕ್ಕೆ ಗ್ರಾಹಕರ ಸಂಖ್ಯೆಯಲ್ಲಿ ಭಾರಿ ಇಳಿಮುಖವಾಗುವ ಸಾಧ್ಯತೆಯಿದೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ನಂದಿನಿ ತುಪ್ಪದ ಬೆಲೆ ಬಹಳ ದುಬಾರಿಯಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಪಂಚ ಗ್ಯಾರಂಟಿಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಅವುಗಳನ್ನು ನೀಡಲಾಗದೆ ರಾಜ್ಯವನ್ನು ದಿವಾಳಿ ಮಾಡಿದೆ. ರಾಜ್ಯದ ಜನತೆಯಿಂದಲೇ ಹಣ ವಸೂಲಿ ಮಾಡಿ ತೆರಿಗೆ ಹಣವನ್ನು ಬಿಟ್ಟಿ ಭಾಗ್ಯಗಳಾಗಿ ನೀಡುತ್ತಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಬಸ್ ದರ, ಡೀಸೆಲ್ ದರ, ಆಸ್ತಿ ನೋಂದಣಿ ಶುಲ್ಕ, ವಿದ್ಯುತ್ ದರ, ಹಾಲು ಮೊಸರಿನ ದರ, ಸ್ಟ್ಯಾಂಪ್ ಪೇಪರ್ ದರ, ಮದ್ಯದ ದರ, ಪ್ರತಿನಿತ್ಯ ಒಂದಲ್ಲ ಒಂದು ದರಗಳನ್ನು ಏರಿಕೆ ಮಾಡುತ್ತಿದ್ದು, ಈಗ ಕೆಎಂಎಫ್ ನಂದಿನಿ ತುಪ್ಪದ ದರವನ್ನು ಏರಿಸಿ, ರಾಜ್ಯದ ಜನತೆಯ ಗಾಯದ ಮೇಲೆ ಬರೆ ಎಳೆದು, ನಮ್ಮ ರಾಜ್ಯವನ್ನು ಅವನತಿಗೆ ತಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಷ್ಟೆಲ್ಲ ಬೆಲೆ ಏರಿಕೆಗಳ ಮಧ್ಯೆ ರಾಜ್ಯ ಸರ್ಕಾರ ಮತ್ತೆ ಹಾಲಿನ ದರವನ್ನು ಏರಿಸಲು ಚಿಂತನೆ ನಡೆಸುತ್ತಿರುವುದು ಅತ್ಯಂತ ಖಂಡನೀಯ. ರಾಜ್ಯ ಸರ್ಕಾರ ಈ ಕೂಡಲೇ ನಂದಿನಿ ತುಪ್ಪದ ಹೆಚ್ಚಿಸಿರುವ ದರವನ್ನು ಇಳಿಸಬೇಕು ಹಾಗೂಹಾಲಿನ ದರ ಏರಿಕೆ ಪ್ರಸ್ತಾವನೆಯನ್ನು ಈ ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಗೋಲ್ಡನ್ ಸುರೇಶ್, ಪ್ರಭುಶಂಕರ್, ಕೃಷ್ಣಪ್ಪ, ಸಿಂದುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ಮಧುವನ ಚಂದ್ರು ಪ್ರಜೀಶ್, ಶಿವಲಿಂಗಯ್ಯ ನೇಹಾ, ಭಾಗ್ಯಮ್ಮ, ಗಿರೀಶ್ ಹೆಚ್, ಶ್ರೀನಿವಾಸ್, ಮಂಜುಳ, ಪದ್ಮ, ಡಾ. ಶಾಂತರಾಜೇ ಅರಸ್, ಕುಮಾರ್, ಎಳನೀರು ರಾಮಣ್ಣ, ಪ್ರದೀಪ್, ರಾಧಾಕೃಷ್ಣ ಶಿವರಾಂ, ಸುಶೀಲ, ಹನುಮಂತೇಗೌಡ, ಸುಜಾತಾ, ರಘು ಅರಸ್, ಬಸವರಾಜು, ನಾರಾಯಣ ಗೌಡ, ತ್ಯಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ಆರೋಗ್ಯ ಆಶ್ರಯಧಾಮದಿಂದ ಉಚಿತ ನರ್ಸಿಂಗ್ ಸೇವೆ

ಮೈಸೂರು, ನ.8– ಹಿರಿಯ ನಾಗರೀಕರ ಮತ್ತು ವೃದ್ಧ ರೋಗಿಗಳ ಆರೈಕೆಯ ಸೇವೆಯಲ್ಲಿ ಮುಂಚೂಣಿಯಲ್ಲಿರುವ ಆರೋಗ್ಯ ಆಶ್ರಯಧಾಮ ಸಂಸ್ಥೆಯು 14ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಈ ವಿಶೇಷ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಸಂಸ್ಥೆಯ ವತಿಯಿಂದ ಉಚಿತ ನರ್ಸಿಂಗ್ ಸೇವೆಯನ್ನು ಏರ್ಪಡಿಸಲಾಗಿದೆ.

ಬೆಳಗ್ಗೆ 8:30ರಿಂದ 10:30ರ ಒಳಗೆ ಆಶ್ರಯ ಆರೋಗ್ಯಧಾಮ, #696/1, ಎಸ್.ವಿ. ಅಪಾರ್ಟ್‌ಮೆಂಟ್ ಹಿಂಬಾಗ, ರಿಂಗ್‌ರೋಡ್, ಹಿನ್‌ಕಲ್ ಇಲ್ಲಿಗೆ ಭೇಟಿ ನೀಡಿ ಸೇವೆಯ ಪ್ರಯೋಜನ ಪಡೆದುಕೊಳ್ಳಬಹುದು. ಮಾಹಿತಿಗಾಗಿ–998634668/9986344884 ಅನ್ನು ಸಂಪರ್ಕಿಸಿ. ರಕ್ತದೊತ್ತಡ(ಬಿಪಿ) ಪರೀಕ್ಷೆ, ಮಧುಮೇಹ (ಡಯಾಬಿಟಿಸ್) ಪರೀಕ್ಷೆ, ಓಕ್ಸಿಜೆನ್ ಸಾಚುರೇಷನ್ ಪರೀಕ್ಷೆ, ಮಧುಮೇಹಿಗಳ ಪಾದದ ಸಣ್ಣಗಾಯಗಳಿಗೆ ಬ್ಯಾಂಡೇಜ್, ಡಯಾಬೆಟಿಕ್ ಫೂಟ್ ಬಗ್ಗೆ ಅರಿವು ಮೂಡಿಸಲಾಗುವುದು.

ಪ್ರಸ್ತುತ ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರ ಸಾಧನೆ ಸಾಕಾರ

● ಹಿರಿಯ ಸಾಹಿತಿ ನೇಮಿಚಂದ್ರ ಪ್ರಶಂಸೆ ● ಆದರೆ, ನೀತಿ-ನಿರೂಪಣೆಯಲ್ಲಿ ಮಾತ್ರ ವಿರಳ

ಮೈಸೂರು, ನ.8(ಎಸ್‌ಪಿಎನ್)– ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದರೂ ನೀತಿ–ನಿರೂಪಣೆ ಜಾಗದಲ್ಲಿ ಹೆಚ್ಚಿನ ಮಹಿಳೆಯರಿಲ್ಲ ಎಂದು ಹಿರಿಯ ಸಾಹಿತಿ ನೇಮಿಚಂದ್ರ ಬೇಸರ ವ್ಯಕ್ತಪಡಿಸಿದರು.


ಮೇಡಂ ಕ್ಯೂರಿ ಮತ್ತು ಸರ್.ಸಿ.ವಿ.ರಾಮನ್ ಜನ್ಮದಿನ ಅಂಗವಾಗಿ ಹಿರಿಯ ಸಾಹಿತಿ ನೇಮಿಚಂದ್ರ ಮಾತನಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ದಿ ಅಕಾಡೆಮಿ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ 'ವಿಶ್ವಪ್ರಸಿದ್ಧ ವಿಜ್ಞಾನಿಗಳಾದ ಮೇಡಮ್ ಕ್ಯೂರಿ ಮತ್ತು ಸರ್.ಸಿ.ವಿ.ರಾಮನ್ ಜನ್ಮ' ದಿನ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯ 10 ಟಾಪರ್ ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಥಿನಿಯರೇ ಹೆಚ್ಚಿನವರಿದ್ದಾರೆ. 2019ರಲ್ಲಿ ಆಟೋ ಚಾಲಕನ ಮಗಳಾದ ಸುಭಾಷಿಣಿ ಎಂಬುವರು ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 625 ಅಂಕಗಳಿಸಿ ನಾಡಿನ ಮನೆಮಾತಾಗಿದ್ದರು. ಒಂದು ಕಾಲಕ್ಕೆ ಮಹಿಳೆಯರು ಅಡುಗೆ ಮನೆಗೆ ಸೀಮಿತ ಎಂಬ ಮಾತಿತ್ತು. ಇದಕ್ಕೆ ತದ್ವಿರುದ್ಧವಾಗಿ ಇಂದು ಎಲ್ಲಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ತುಮಕೂರಿನ ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಗೃಹ ವಿಜ್ಞಾನ ವಿಷಯ ಅಧ್ಯಯನ ಮಾಡಬೇಕಿತ್ತು. ಅದರಲ್ಲಿ ಅಡುಗೆ ಮಾಡುವ ವಿಷಯ ಹಾಗೂ ಮಕ್ಕಳ ಲಾಲನೆ–ಪಾಲನೆ ಕುರಿತು ಅಧ್ಯಯನ ಮಾಡಬೇಕಿತ್ತು. ಇಂತಹ ಸಂದರ್ಭದಲ್ಲಿ ಓರ್ವ ವಿದ್ಯಾರ್ಥಿನಿಗೆ ಬಿಇ ವ್ಯಾಸಂಗ ಮಾಡಲು ಸಂಕಷ್ಟ ಎದುರಾದ ಪ್ರಸಂಗವನ್ನು ವಿವರಿಸಿದರು.

ಎನ್‌ಐಇ ಕಾಲೇಜಿನಲ್ಲಿ ಬಿಇ ಪದವಿ ಮುಗಿಸಿದ ಬಳಿಕ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂಎಸ್ ಪದವಿ ಮುಗಿಸಿದೆ. ಬಳಿಕ ಎಚ್‌ಎಎಲ್‌ನಲ್ಲಿ ಉನ್ನತ ಹುದ್ದೆಗೆ ನೇಮಕವಾಗಿ, ಮಿಲಿಟರಿ ಹೆಲಿಕಾಪ್ಟರ್ ತಯಾರಿಕೆ ಹಾಗೂ ಪರೀಕ್ಷಾ ವಿಭಾಗದಲ್ಲಿ ಕೆಲಸ ನಿರ್ವಹಿಸಿದ್ದೇನೆ. ಇಷ್ಟೆಲ್ಲಾ ಸಾಧನೆಗೆ ಸಾಧಕ ಮಹಿಳೆಯರ ಆದರ್ಶವೇ ಕಾರಣ. ಮೇಡಂ ಕ್ಯೂರಿ ಅವರ ಸಾಧನೆ, ಸರ್.ಸಿ.ವಿ.ರಾಮನ್ ಅವರ ಸಾಧನೆ ಕುರಿತು ಎಷ್ಟು ಓದಿದರೂ ಮತ್ತೆಮತ್ತೆ ಓದಬೇಕೆಂಬ ಹಂಬಲ ಇಮ್ಮಡಿಗೊಳ್ಳುತ್ತದೆ ಎಂದರು.

ಸುಪ್ರೀಂಕೋರ್ಟ್ ತೀರ್ಪಿನ ನಂತರ ಪೈಲೆಟ್‌ಗಳಾಗಿ ಅವನಿ ಚತುರ್ವೇದಿ, ಭಾವನಾ ಕಾಂತಾ, ಮೋಹನ ಸಿಂಗ್ ಜಿತರ್ವಾಲ್ ಅವರು ವಾಯುಸೇನೆಯಲ್ಲಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕಾಗಿ 2007ರಿಂದ 2020ರವರೆಗೂ ಸುಪ್ರೀಂಕೋರ್ಟ್‌ನಲ್ಲಿ ಕಾನೂನು ಹೋರಾಟದ ಫಲವಾಗಿ ಇಂದು ಹೆಣ್ಣು ಮಕ್ಕಳು ನೇಮಕವಾಗಿದ್ದಾರೆ. ಹಾಗಾಗಿ ಭೂ ಸೇನೆ, ವಾಯು ಸೇನೆ ಹಾಗೂ ನೌಕಾ ದಳದಲ್ಲಿ ಹಲವು ಮಹಿಳೆಯರು ವಿವಿಧ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವುದು ಮೆಚ್ಚುಗೆಯ ವಿಷಯ ಎಂದರು.

ನಾನು ಎಚ್‌ಎಎಲ್‌ನಲ್ಲಿ ಕೆಲಸ ಮಾಡುವಾಗ ಸಾಕಷ್ಟು ವಿರೋಧಗಳ ನಡುವೆಯೂ ಸಮುದ್ರದ ಮಧ್ಯೆ ಹೆಲಿಕಾಪ್ಟರ್‌ಗಳ ಪರೀಕ್ಷಾರ್ಥ ತೆರಳಿದ್ದ ಪ್ರಸಂಗವನ್ನು ನೆನೆದರಲ್ಲದೆ, ನಾನು ಚಿತ್ರದುರ್ಗದಲ್ಲಿ ಹುಟ್ಟಿ, ಬಳಿಕ ತುಮಕೂರಿನ ಸರ್ಕಾರಿ ಹಿರಿಯ ಶಾಲೆಯಲ್ಲಿ ವ್ಯಾಸಂಗ ಮುಂದುವರೆಯಿತು. ನನ್ನ ತಂದೆ ಕಾಲೇಜು ಉಪನ್ಯಾಸಕರಾಗಿದ್ದರಿಂದ ತುಮಕೂರಿಂದ ಮೈಸೂರಿಗೆ ವರ್ಗವಾಯಿತು. ಆ ವೇಳೆ ಮೈಸೂರಿನ ಸಾಹಿತ್ಯ ಪರಿಸರದಲ್ಲಿ ಬೆಳೆದ ನನಗೆ ಡಾ.ವಿಜಯಾದಬ್ಬೆ ಪರಿಚಯವಾಗಿ, ಸ್ತ್ರೀ ವಾದಕ್ಕೆ ಒಂದು ಮೂಲ ಬೇರು ದೊರಕಿದ ಪ್ರಸಂಗವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ನನ್ನ ತಂದೆ ಮೂಲತಃ ಬರಹಗಾರರು ಮತ್ತು ಕಾಲೇಜು ಉಪನ್ಯಾಸಕರಾಗಿದ್ದರಿಂದ ಜೈನ ಸಾಹಿತ್ಯದ ಬಗ್ಗೆ ಹೆಚ್ಚಿನ ಒಲವು ಹೊಂದಿದ್ದರು. ಆ ಕಾರಣದಿಂದಾಗಿ ನನ್ನ ಹೆಸರು 'ನೇಮಿಚಂದ್ರಮ್ಮ' ಎಂದು ನಾಮಕರಣ ಮಾಡಿದ್ದರು. ಶಾಲಾ ದಾಖಲಾತಿಗಳಲ್ಲೂ ನನ್ನ ಹೆಸರನ್ನು ನೇಮಿಚಂದ್ರಮ್ಮ ಎಂದು ದಾಖಲಿಸಲಾಗಿದೆ. ಕ್ರಮೇಣ ನಾನು ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡಿದ್ದರಿಂದ 'ನೇಮಿಚಂದ್ರ' ಹೆಸರಲ್ಲಿ ಲೇಖನಗಳನ್ನು ಬರೆಯುತ್ತಿದ್ದೇನೆ ಎಂದು ತಮ್ಮ ಹೆಸರಿನ ರೋಚಕ ಇತಿಹಾಸವನ್ನು ಬಿಚ್ಚಿಟ್ಟರು.

ಮೊದಲು ನಾನು ಸಾಧಕ ಮಹಿಳೆಯರ ಕುರಿತು ಕ್ಷೇತ್ರಾಧ್ಯಯನ ನಡೆಸಿ ಬರೆಯುವ ಹಂಬಲವಿತ್ತು. ಮೊದಲು ಬೆಳಗೆರೆ ಜಾನಕಮ್ಮ ಬದುಕು–ಬರಹ, ನೋವಿಗದ್ದಿದ ಕುಂಚ–ವ್ಯಾನ್ ಗೋ ಜೀವನ ಚರಿತ್ರೆ, ಬೆಳಕಿಗೊಂದು ಕಿರಣ ಮೇಡಂ ಕ್ಯೂರಿ, ಥಾಮಸ್ ಆಲ್ವಾ ಎಡಿಸನ್, ಡಾ.ಈಡಾ ಸ್ಕಡರ್, ಜೇನ್‌ಗುಡಾಲ್, ನೋಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು, ಕಾಲುಹಾದಿಯ ಕೋಲ್ಮಿಂಚುಗಳು–ಮಹಿಳಾ ವಿಜ್ಞಾನಿಗಳು ಸೇರಿದಂತೆ ಇತರೆ ಸಾಧಕ ಮಹಿಳೆಯರ ಬದುಕು–ಬರಹಗಳನ್ನು ಅಕ್ಷರ ರೂಪಕ್ಕೆ ತಂದಿದ್ದು, ಇದರಲ್ಲಿ ಕೆಲ ಪುಸ್ತಕಗಳಿಗೆ ರಾಜ್ಯ ಮತ್ತು ಕೇಂದ್ರ ಪುರಸ್ಕಾರಗಳು ದೊರತಿವೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಸ್ ಜಾತರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬೈಸನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ದಿ ಗರ್ಲ್‌ಫ್ರೆಂಡ್ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ಜೈ ಗದಾಕೇಸರಿ (ಲ) + ಕೋಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಬೆ.10.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ. **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಯಾರಿಗೂ ಹೇಳ್ಬೇಡಿ (ಕ):** ಬೆ.11.15ಕ್ಕೆ, **ಗ್ರೀನ್ (ಕ):** ಮ.2.20ಕ್ಕೆ, **ಬಿಳಿಚುಕ್ಕಿ ಹಳ್ಳಿ ಹಕ್ಕಿ (ಕ):** ಸಂ.4.35ಕ್ಕೆ, **ತಮ್ಮಾ (ಹಿಂ):** ರಾ.7.15ಕ್ಕೆ.
ಸ್ಕ್ರೀನ್ 2	**ಕಾಂತಾರ –1(ಕ):** ಮ.1ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ
ಸ್ಕ್ರೀನ್ 3	**ಕಾಂತಾರ –1(ಕ):** ಬೆ.10.45ಕ್ಕೆ, ಮ.2.30ಕ್ಕೆ, ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ತಮ್ಮಾ (ಹಿಂ):** ಮ.1ಕ್ಕೆ, ಮ.3.55ಕ್ಕೆ, ರಾ.9.30ಕ್ಕೆ, **ಡೂಡ್ (ತ):** ಸಂ.6.50ಕ್ಕೆ

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ; 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.

ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.

ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ

ಟೈಮ್ ಪಾಸ್ (ಕ): ಬೆ: 11.15ಕ್ಕೆ

ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ

ಬೈಸನ್ ಕಾಳಮುಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ

ಡೀಸೆಲ್ (ತ): ಮ: 1.40ಕ್ಕೆ

ಮಹಾಯೋಧ ರಾಮ (ಹಿ): ಮ: 1.50ಕ್ಕೆ

ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ

ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ

ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ

ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ

ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ

ಟೈಮ್ ಪಾಸ್ (ಕ): ಮ: 1.50ಕ್ಕೆ

ಬೈಸನ್ ಕಾಳಮುಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ

ತೆಲುಸು ಕಾದಾ (ತೆ): ಮ: 4.30ಕ್ಕೆ

ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ

ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕದಂಬ ರಂಗೋತ್ಸವಕ್ಕೆ ಚಾಲನೆ


ಮೂರು ದಿನಗಳ ಕದಂಬ ರಂಗೋತ್ಸವ– 2025ಕ್ಕೆ ಕಿರುತೆರೆ ನಟ ಶಂಕರ್ ಅಶ್ವತ್ಥ್ ಶನಿವಾರ ಚಾಲನೆ ನೀಡಿದರು.

ಮೈಸೂರು, ನ.8(ಎಸ್‌ಪಿಎನ್)– ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ಕಂದಬ ರಂಗವೇದಿಕೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಮೂರು ದಿನಗಳ ಕದಂಬ ರಂಗೋತ್ಸವ –2025ಕ್ಕೆ ಕಿರುತೆರೆ ನಟ ಶಂಕರ್ ಅಶ್ವತ್ಥ್ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕಳೆದ 50 ವರ್ಷಗಳಿಂದ ಕದಂಬ ರಂಗವೇದಿಕೆ ಹಲವು ನಾಟಕಗಳನ್ನು ಪ್ರದರ್ಶಿಸುತ್ತಿದೆ. ಹವ್ಯಾಸಿ ರಂಗಭೂಮಿಯಲ್ಲಿ ಒಂದು ತಂಡವಾಗಿ 50 ವರ್ಷಗಳು ಕೆಲಸ ಮಾಡುವುದು ಸುಲಭದ ಮಾತಲ್ಲ. ಅದೊಂದು ದೊಡ್ಡ ಸಾಧನೆಯೇ ಸರಿ. ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರು, ನಮ್ಮ ತಂದೆ ಕಾಲದಿಂದಲೂ ಪರಿಚಿತರು. ನಮ್ಮ ತಂದೆ ಬದುಕಿದ್ದಾಗಲೂ ಮನೆಗೆ ಬಂದು ಹೋಗುತ್ತಿದ್ದರು. ಇಂದು ನನಗೂ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿರುವುದು ಸಂತೋಷವಾಗಿದೆ ಎಂದರು.

ಈ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ರಂಗಸಮಾಜದ ಸುರೇಶ್ ಬಾಬು, ಅಶ್ವತ್ಥ ಕದಂಬ, ನಾಗೇಂದ್ರ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಅಂತರಂಗ–ಬಹಿರಂಗ ತಂಡದಿಂದ 'ಬಾಯ್ಬಡ್ಕಿ' ಹಾಸ್ಯ ನಾಟಕ ಪ್ರದರ್ಶನಗೊಂಡಿತು. ಶನಿವಾರ ಶಿವಮೊಗ್ಗದ ಎನ್‌ಇಎಸ್ ರಂಗತಂಡದಿಂದ ಚಿಕಾವ್‌ಟು ಕಾಂಪೇನ್ ನಾಟಕ ಹಾಗೂ ಭಾನುವಾರ ಕದಂಬ ರಂಗವೇದಿಕೆಯಿಂದ ನಾ.. ನೀ ನಾಟಕ ಪ್ರದರ್ಶನಗೊಳ್ಳಲಿದೆ.

ನಾಟಕ ವಿಮರ್ಶೆಗೆ ಈಗ ಒಂದು ಚೂರು ಮೌಲ್ಯವಿಲ್ಲ

ವಿಮರ್ಶಕ ಶಶಿಕಾಂತ್ ಯಡಹಳ್ಳಿ ವಿಷಾದ



ನಮನ ಕಲಾವೇದಿಕೆಯಲ್ಲಿ 'ರಂಗವಿಮರ್ಶೆ ಸದ್ಯದ ಸ್ಥಿತಿ. ಸಾಧ್ಯತೆ..' ಸಂವಾದ ಕಾರ್ಯಕ್ರಮ ನಡೆಯಿತು.

ಮೈಸೂರು, ನ.8(ವಿವಿಹೆಚ್)– ವಿಮರ್ಶೆ ಮತ್ತು ಚರ್ಚೆ ಇಲ್ಲದೆ ನಾಟಕಗಳು ಜೀವಂತವಾಗಿರುವುದಿಲ್ಲ. ನಾಟಕ ಪ್ರಯೋಗದ ಪರಿಪೂರ್ಣತೆ ಅರಿಯಲು ವಿಮರ್ಶೆ ಅತ್ಯಗತ್ಯವಾಗಿದೆ. ಆದರೆ ವಿಮರ್ಶಕರ ಸ್ಥಿತಿ ಶೋಚನೀಯವಾಗಿದೆ ಎಂದು ವಿಮರ್ಶಕ ಶಶಿಕಾಂತ ಯಡಹಳ್ಳಿ ಬೇಸರ ವ್ಯಕ್ತಪಡಿಸಿದರು.

ನಗರದ ಕೃಷ್ಣಮೂರ್ತಿಪುರಂನ ನಮನ ಕಲಾವೇದಿಕೆಯಲ್ಲಿ ಶನಿವಾರ ಪರಿವರ್ತನ ರಂಗ ಸಮಾಜ ವತಿಯಿಂದ ಆಯೋಜಿಸಿದ್ದ 'ರಂಗವಿಮರ್ಶೆ ಸದ್ಯದ ಸ್ಥಿತಿ. ಸಾಧ್ಯತೆ..' ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾಟಕ ವಿಮರ್ಶಕರಿಗೆ ಇಂದಿನ ದಿನಗಳಲ್ಲಿ ಯಾವುದೇ ಮೌಲ್ಯವಿಲ್ಲ. ವಿಮರ್ಶಕರನ್ನು ಮುಟ್ಟಿಸಿಕೊಳ್ಳದವರ ರೀತಿಯಲ್ಲಿ ಕಾಣುತ್ತಿದ್ದಾರೆ. ಇದರಿಂದ ವಿಮರ್ಶಕರಿಗೆ ಪೀಕಲಾಟ ಆಗುತ್ತಿದೆ. ನಾಟಕಗಳಲ್ಲಿ ಟಿಆರ್‌ಪಿ ಸಿಗುವುದಿಲ್ಲ ಎಂಬ ಕಾರಣಕ್ಕೆ ಮಾಧ್ಯಮಗಳು ಕೂಡ ಮುಖ ತಿರುಗಿಸಿವೆ. ರಂಗಭೂಮಿ ಹರಿಯುವ ನದಿ ಇದ್ದಾಗೆ. ಎಷ್ಟೇ ಕಟ್ಟೆ ಕಟ್ಟಿದರು ಹರಿಯುವ ದಿಕ್ಕನ್ನು ಬದಲಿಸಿಕೊಂಡು ಮುಂದುವರಿಯುತ್ತವೆ. ಇದೇ ರೀತಿ ವಿಮರ್ಶೆ ಕೂಡ ಸಾಗಬೇಕಿದೆ ಎಂದು ಹೇಳಿದರು.

ಕುಸುಮ ಆಯರಹಳ್ಳಿ ಮಾತನಾಡಿ, ವಿಮರ್ಶೆಯೆಂಬುದು ಹೊಗಳು ಭಟ್ಟರ ಆಶ್ರಯತಾಣವಾಗಿದೆ. ಪೂರ್ವಾಗ್ರಹ ಪೀಡಿತವಾಗಿ ನಾಟಕ ಸಂಯೋಜನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಇಂತಹ ನಾಟಕಗಳನ್ನು ಪಕ್ಷಪಾತವಿಲ್ಲದೇ ಹೇಗೆ ಬರೆಯಬೇಕು ಎಂಬುದು ದೊಡ್ಡ ಪ್ರಶ್ನೆಯಾಗಿದೆ. ತಮ್ಮ ಸಿದ್ಧಾಂತ ವಿಷಯಗಳನ್ನು ಕಲೆಯ ಮೂಲಕ ಧಾಟಿಸುವುದಕ್ಕೆ ವಿಮರ್ಶೆಯನ್ನು ಒಂದು ಸಾಧನವಾಗಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಈ ವೇಳೆ ರಂಗಭೂಮಿಯನ್ನು ಪಕ್ಷಪಾತೀಯವಾಗಿ ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ವೇದಿಕೆ, ಪಕ್ಷಪಾತ ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ನಾಟಕಗಳು ಜನಪರವಾಗಿ, ಮಹಿಳೆಯರು, ದಮನಿತರ, ಶೋಷಿತರ ಪರವಿರುವ, ಇತಿಹಾಸವನ್ನು ಸ್ಪಷ್ಟವಾಗಿ ಹೇಳುವ ನಾಟಕಗಳನ್ನು ಮಾತ್ರ ವಿಮರ್ಶೆ ಮಾಡಿ, ತಪ್ಪು–ತಪ್ಪು ಮಾಹಿತಿಗಳನ್ನು ಹಂಚುವುದು, ಇತಿಹಾಸ ತಿರುಚುವುದು, ಸಮಾಜ ವಿರೋಧಿ ನಾಟಕಗಳು ಬಂದಲ್ಲಿ ಕಟುವಾದ ಭಾಷೆಯಲ್ಲಿಯೇ ವಿರೋಧ ಮಾಡುವ ಜೊತೆಗೆ, ಇದು ಸರಿ, ಇದು ತಪ್ಪು ಎಂದು ನೇರವಾಗಿ ವಿಮರ್ಶಿಸುವಂತೆ ನಿರ್ಧರಿಸಲಾಯಿತು.


ಜೊತೆಗೆ ನಟರು, ನಾಟಕಕಾರರು, ಪ್ರರ್ಶಕರು, ಪತ್ರಿಕೆಯವರು ಸೇರಿ, ಪತ್ರಿಕೆಗಳಲ್ಲಿ ವಿಮರ್ಶಕರಿಗೆ ಸಿಗುವ ಸ್ಥಳಾವಕಾಶ, ಸಾಮಾಜಿಕ ಮಾಧ್ಯಮಗಳ ಬಳಕೆ, ವಸ್ತು ನಿಷ್ಠವಾಗಿ ರಂಗ ಪ್ರಯೋಗ ಮಾಡುವುದು ಸೇರಿದಂತೆ ಪರಿವರ್ತನ ರಂಗ ವೇದಿಕೆಯಿಂದ ಸುದೀರ್ಘ ಲೇಖನ ಬರೆಯುವವರಿಗೆ ಉತ್ತೇಜನ ಮಾಡುವ ನಿಟ್ಟಿನಲ್ಲಿ ಲೇಖನಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ದಾಖಲಿಸಲು ಹಾಗೂ ಅವುಗಳಿಗೆ ಒಂದಷ್ಟು ಬಹುಮಾನ ಕೊಡುವ ವ್ಯವಸ್ಥೆ ಮಾಡುವುದಾಗಿ ತೀರ್ಮಾನಿಸಿದರು. ಪ್ರೊ. ಎಸ್.ಆರ್.ರಮೇಶ್, ಪ್ರಸನ್ನಕುಮಾರ್ ಕೆರಗೋಡು, ಎಸ್.ಧನಂಜಯ, ಯತೀಶ್ ಕೊಳ್ಳೇಗಾಲ, ಸುಗುಣ ನಿರಂತರ, ರವಿಕುಮಾರ್ (ಕಲಾಬ್ರಹ್ಮ) ಉಪಸ್ಥಿತರಿದ್ದರು.

Tribute



S.KANAKARAJ
DOB: 06.02.1951 DOD: 04.11.2025
Founder of Saint amos Education Society.
Deeply Mourned by : Wife: Rose Lidia, Son: Reuben, Regan and their families... Saint Amos Education Society all Teacher's

6ನೇ ವರ್ಷದ ಪುಣ್ಯಸ್ಮರಣೆ



ಹೆಚ್.ಬಿ ಪ್ರಶಾಂತ್
ನೀವು ಈ ಲೋಕವನ್ನು ತ್ಯಜಿಸಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಎಂದಿಂದಿಗೂ ಅಮರ, ಪರಮಾತ್ಮನ ಸನ್ನಿಧಿಯಲ್ಲಿ ಸ್ಥಿರವಾಗಿರಿ
ದುಃಖತಪ್ತರು: ಜಯಲಕ್ಷ್ಮಿ ಪ್ರಶಾಂತ್, ಪ್ರಜ್ವಲ್.ಪಿ. ಗೌಡ, ಮೈಸೂರು

ಸವಿನೆನಪು



ಯ|| ಬನ್ನಸ್ವಾಮಿ
ನಿಧನ: 9–11–2011
ನೀವು ನಮ್ಮನ್ನಗಲಿ 14 ವರ್ಷ ಕಳೆದಿದ್ದರೂ ಸದಾ ನಿಮ್ಮ ನೆನಪಿನಲ್ಲಿ ನೀವು ಹಾಕಿಕೊಟ್ಟ ಹಾದಿಯಲ್ಲಿ ಸಾಗುತ್ತಿರುವ, ನಿಮ್ಮ ಕುಟುಂಬವರ್ಗ.
ದುಃಖತಪ್ತರು
ಮಗ
ಬಿ.ಎಸ್.ಸುಬ್ರಮಣ್ಯ,
ಮಕ್ಕಳು,
ಸೊಸೆಯಂದಿರು,
ಹಾಗೂ ಮೊಮ್ಮಕ್ಕಳು

8ನೇ ವರ್ಷದ ಸವಿನೆನಪು



ಹೋಟೆಲ್ ರಾಜಣ್ಣ
ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ತಾಯಿ ಸಿದ್ದಮ್ಮ, ನಂಜಪ್ಪನಾಯಕ, ಶ್ರೀಮತಿ ಲಕ್ಷ್ಮಿ, ಮಕ್ಕಳು, ದೀಕ್ಷಿತಾ, ವಿಜಯ್, (ಸ್ವಾಮಿ.ಹೆಚ್.ಎನ್) ಕುಟುಂಬವರ್ಗದವರು ಹಾಗೂ ಬಂಧುಮಿತ್ರರು, ಕೆ.ಆರ್. ಸರ್ಕಲ್, ಮೈಸೂರು

ಕೃತಜ್ಞತೆ ಹಾಗೂ ಮಾದ ಕಾರ್ಯದ ಆಹ್ವಾನಪತ್ರಿಕೆ



ಮಂದನೆರವಂಡ ಪಾರ್ವತಿ

ಮಂದನೆರವಂಡ ಶ್ರೀಮತಿ ಪಾರ್ವತಿ ಯವರು ದಿ. 02.11.2025ನೇ ಭಾನುವಾರದಂದು ದೈವಾಧೀನರಾಗಿದ್ದು ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಸಂತಾಪ ಸೂಚಿಸಿದ ಶ್ರೀ ಇಗ್ಗುತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘ, ಕೊಡವ ಸಮಾಜ, ಮೈಸೂರು, ಕೊಡಗು ಸಹಕಾರ ಸಂಘ, ಮೈಸೂರು ಮತ್ತು ಎಲ್ಲಾ ಸಂಘ ಸಂಸ್ಥೆಯ ಸದಸ್ಯರು, ಕುಟುಂಬಸ್ಥರು ಹಾಗೂ ಎಲ್ಲಾ ಬಂಧು ಮಿತ್ರರಿಗೂ ತುಂಬು ಹೃದಯದ ಕೃತಜ್ಞತೆಗಳು. ತಿಥಿ ಕರ್ಮಾಂತರ (ಮಾದ ಕಾರ್ಯವು) ಬುಧವಾರ, 12ನೇ ನವೆಂಬರ್ 2025 ರಂದು ಮಧ್ಯಾಹ್ನ 12.00 ಗಂಟೆಗೆ ಕೊಡಗು ಸಹಕಾರ ಸಂಘ, ಜಯಲಕ್ಷ್ಮಿಪುರಂ, ಮೈಸೂರಿನಲ್ಲಿ ನೆರವೇರಲಿದೆ. ಈಗಾಗಲೆ ಆಹ್ವಾನಪತ್ರಿಕೆ ಕಳಿಸಿರುವುದಾದರೂ, ಆಹ್ವಾನಪತ್ರಿಕೆ ಸಿಗದವರು ಇದನ್ನೇ ಆಹ್ವಾನಪತ್ರಿಕೆ ಎಂದು ಪರಿಗಣಿಸಿ, ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

— ಮಂದನೆರವಂಡ ಕಾರ್ಯಪ್ಪ ಹಾಗೂ ಕುಟುಂಬಸ್ಥರು. ಮೊ: 9901989598

CORRIGENDUM

The Public Notice Advt., published in **Mysuru Mithra Page 12 dated 1.11.2025, SCHEDULE PROPERTY** bearing **Door No.961/1, CH-36 situated at Sheshadri Iyer Road, Lakshmipuram, Chamaraja Mohalla, Mysuru** may be read as **(measuring 25.72 Meters to the East)** instead of 2572 Meters

Sd/-**A.V. Jaya Rama Rao,** Advocate, No. 1230/A, CH-36/A, 2nd Cross, Krishnamurthypuram, Chamaraja Mohalla, Mysuru-04. Ph: 0821 7960559

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಎಂ. ಗಿರೀಶ್ ರವರು
ಹಿರಿಯ ಸಹಾಯಕರು, ಕೆ.ಆರ್. ಬ್ಯಾಂಕ್, ಮೈಸೂರು

ಹದಿನಾರು ಗ್ರಾಮ ಛತ್ರ ಹೋಬಳಿ, ನಂಜನಗೂಡು ತಾ.
ಶ್ರೀಮತಿ ಪ್ರಿಯಾವತಿ ಹೆಚ್.ಎನ್. ರವರು ಮಾಡುವ ವಿಜ್ಞಾಪನೆಗಳು.
ದಿನಾಂಕ 29.10.2025ನೇ ಬುಧವಾರ ನನ್ನ ಪೂಜ್ಯ ಪತಿಯವರು ಶಿವೈಕ್ಯರಾಗಿದ್ದು, ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 10–11–2025ನೇ ಸೋಮವಾರ ಬೆಳಗ್ಗೆ 9.30 ಗಂಟೆಗೆ ಹದಿನಾರು ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು:
ಪತ್ನಿ ಶ್ರೀಮತಿ ಪ್ರಿಯಾವತಿ ಹೆಚ್.ಎನ್. ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

IN THE COURT OF SENIOR CIVIL JUDGE AT SOMVARPET

Execution Petition No. 14/2025
FORM No.4 (Civil)
(OV-R 20 (1-A) R/W SECTION 151 OF CPC)
Vide court order dated 29/10/2025

IN THE MATTER OF:
M/s Rupa Chits Mysore (P) Ltd, Represented by its Managing Director/ Foreman; No.1510, 1st Floor, Shivarampet, Mysore-570001 — Decree Holder

V/s

(1) Sri P S Chetan,
(2) Sri Praveen — Judgment Debtors

Notice to the Judgment Debtors

1) Sri P S Chetan, Aged about 40 years, S/o Srinivasa P N, Proprietor, Lakshmi Mobiles, No. 62, Cart Road, M I Show room, Kushalanagara-571234, Kodagu District

2) Sri Praveen, Aged about 42 years, S/o Sanath Kumar, No.95. B Block, Madhuvana Extension, DTS Rao nagara, Satagalli, Mysore-570019

Whereas the petition is filed by the Decree Holder under Order XXI Rule 10 read with Section 151 of Code of Civil Procedure against Sri P S Chetan and Sri Praveen Notice is hereby given to both of you to appear in this court in person or through an Advocate duly instructed or through some one authorised by law to act for you in the Execution Petition No.14/2025 at 11.00 a.m. 10/12/25 on which date the case will be posted for orders/hearing in case you intend to contest the Execution Petition. If you fail to appear, the same will be dealt with heard and decided in your absence. Given under my hand and the seal of this court, this the 30th day of October 2025.,

Advocate Address
V Shivananda Kumar B.Sc, LLB
Advocate, #496, "Sriranga"
11th A Cross Road, Nagapura,
West of Chord Road, Bangalore - 560086

By order of the Court
Sd/- Chief Ministerial Officer
Court of Senior Civil Judge
Somvarpet

PUBLIC NOTICE

Our client Sri. B. A. Nithin S/o late. B.A. Anantha Kumar, aged about 43 years, resident of flat number C 12, Rubi Block, Sankalp Mani Mandira, Divans Road, Lakshmipuram, Mysuru intend to purchase below mentioned schedule property. Any Person or persons having any right, title or interest by way of inheritance or any claim against the said property should send their claims in writing to the undersigned along with the documentary evidence in support of the said claim thereof within 7 days of publication of the notice failing which claims if any shall be deemed to have been waived.

SCHEDULE

All that piece and parcel of the House bearing no. 64/B, Situated at T.K.Layout, Saraswathipuram, Mysuru, and measuring East to West 30.00 feet and North to South 60.00 feet bounded by: East: Site no. 64/A West: Site no. 65/A North: Storm Water Drain South: Road

Sd/- Raghu Ram Bhat
Advocate, Office situated at no.238, Near Christ Public School, Dattagalli, Treasury Layout, Bogadhi, Mysuru
Mob : 9611314045
Date: 08/11/2025, Mysuru

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಶ್ರೀ **ನಾಗೂರು ಶಹನ್ಯಾ,** ಶ್ರೀ ಎನ್. **ಬಾಷಾ** ಅವರ ಪುತ್ರರು, **ಫ್ಲ್ಯಾಟ್ ನಂ.103, ಬ್ಲಾಕ್ ನಂ.11, ವಿಂಗ್ 'Y', ಸಂಕಲ್ಪ್ ಸೆಂಟ್ರಲ್ ಪಾರ್ಕ್, ಜವಾ ಮೇನ್ ರಸ್ತೆ, ಯಾದವಗಿರಿ, ಮೈಸೂರು 570 020** ನಲ್ಲಿ ವಾಸಿಸುತ್ತಿದ್ದು, ಕೆಳಗೆ ವಿವರಿಸಿರುವ ಆಸ್ತಿಯನ್ನು 26.05.2025 ರಂದು ಖರೀದಿಸಿದ್ದು, ಅದರ ದಾಖಲೆ ಕಚೇರಿ, ಮೈಸೂರು ದಕ್ಷಿಣ ನಲ್ಲಿ ಸಂಖ್ಯೆ MYS-1-02049-2025-26 ಎಂದು **ಉಪ-ನೋಂದಣಾಧಿಕಾರಿಯ ಕಛೇರಿ, ಮೈಸೂರು ದಕ್ಷಿಣ** ನಲ್ಲಿ ನೋಂದಾಯಿಸಲಾಗಿದೆ.

ಈ ಖರೀದಿದಾರರು ಆ ಆಸ್ತಿ ಖರೀದಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಮನೆ ಸಾಲ **(Housing Loan)** ಪಡೆದುಕೊಂಡಿದ್ದು, ಈಗ ತಮ್ಮ ನೌಕರರಾದ **ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ನಿಂದ ಹೌಸ್ ಬಿಲ್ಡಿಂಗ್ ಅಡ್ವಾನ್ಸ್ (HBA)** ಪಡೆಯಲು ಉದ್ದೇಶಿಸಿದ್ದಾರೆ.

ಮೇಲ್ಕಂಡ ಆಸ್ತಿಯ ಕುರಿತು ಯಾರಿಗಾದರೂ ಯಾವುದೇ ಹಕ್ಕು, ಹಕ್ಕುಪತ್ರ, ಹಿತಾಸಕ್ತಿ, ಬಾಧ್ಯತೆ, ಬಾಂಡ್, ಮುಂಗಡ, ಬಾಡಿಗೆ, ಭೋಗ್ಯ ಪತ್ರ, ಹಕ್ಕುಪತ್ರ ಹಕ್ಕು, ಅಥವಾ ಇತರ ಯಾವುದೇ ರೀತಿಯ ಹಕ್ಕು ಯಾ ಆಕ್ಷೇಪಣೆ ಇದ್ದಲ್ಲಿ, ಅದರ ಸಂಬಂಧಿಸಿದ ದಾಖಲೆಗಳೊಂದಿಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **ಏಳು (7) ದಿನಗಳೊಳಗೆ** ಕೆಳಗಿನ ಸಹಿ ಮಾಡಿದ ವಕೀಲರಿಗೆ ಲಿಖಿತವಾಗಿ ತಿಳಿಸಲು ವಿನಂತಿಸಿಕೊಳ್ಳಲಾಗುತ್ತದೆ.

ನಿಗದಿತ ಅವಧಿಯೊಳಗೆ ಯಾವುದೇ ದಾವೆ ಅಥವಾ ಆಕ್ಷೇಪಣೆ ಬರದಿದ್ದಲ್ಲಿ, ಆಸ್ತಿ ಯಾವುದೇ ಬಾಧ್ಯತೆಗಳಿಂದ ಮುಕ್ತವಾಗಿದೆ ಎಂದು ಪರಿಗಣಿಸಲಾಗುವುದು ಮತ್ತು ಆಸ್ತಿ ವ್ಯವಹಾರ ಹಾಗೂ HBA ಪ್ರಕ್ರಿಯೆ ತದನಂತರ ಪೂರ್ಣಗೊಳ್ಳುತ್ತದೆ. ಈ ನಂತರ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಕುರಿತು ಖರೀದಿದಾರರು ಅಥವಾ ಸಂಬಂಧಿಸಿದ ಬ್ಯಾಂಕ್/ನಿಯೋಜಕರು ಹೊಣೆಗಾರರಾಗಿರುವುದಿಲ್ಲ.

ಆಸ್ತಿಯ ವಿವರ (Schedule of Property)

ಫ್ಲ್ಯಾಟ್ ನಂ.103, ಬ್ಲಾಕ್ ನಂ.11, ವಿಂಗ್ 'Y',, ಸಂಕಲ್ಪ್ ಸೆಂಟ್ರಲ್ ಪಾರ್ಕ್, ಜವಾ ಮೇನ್ ರಸ್ತೆ, ಯಾದವಗಿರಿ, ಮೈಸೂರು 570020, ಒಂದು ಆವರಿತ ಕಾರು ಪಾರ್ಕಿಂಗ್ ಸ್ಥಳ (ನಂ. **B11/103**) ಹಾಗೂ ಭೂಮಿಯ **518.29 ಚ.ಅಡಿ (Sq.ft)** ಅವಿಭಾಜಿತ ಹಕ್ಕಿನೊಂದಿಗೆ, ಆಸ್ತಿಗೆ ಸಂಬಂಧಿಸಿದ ಎಲ್ಲಾ ಹಕ್ಕುಗಳು ಮತ್ತು ಅನುಕೂಲಗಳೊಂದಿಗೆ ಸೇರಿದೆ.

ದಿನಾಂಕ: 08–11–2025
ಸ್ಥಳ: ಮೈಸೂರು

ವಿವಸ್ವಂತ ಎಂ. ಎಸ್. ಭಟ್
ವಕೀಲರು
ನಂ.12, ಬ್ಲಾಕ್ 1–ಎ, ಮಧುವನ ಲೇಔಟ್,
ಶ್ರೀರಾಮಪುರ 2ನೇ ಹಂತ, ಮೈಸೂರು– 570034